ಕಲ್ಯಾಣ ಕಿರಣ


ನವೆಂಬರ್ 2005

ಬೆಲೆ :10-00 ರೂ.











ಸರ್ವಧರ್ಮ ಪ್ರಾರ್ಥನಾ ಸಮಾರಂಭದಲ್ಲಿ ಸಿಖ್ ಧರ್ಮ ಭಾಂಧವರು ಸಮ್ಮೇಳನಾಧ್ಯಕ್ಷರಾದ ಪೂಜ್ಯ ಶ್ರೀ ಮಹಾ ಜಗದ್ಗುರು ಮಾತೆ ಮಹಾದೇವಿ ಅವರಿಗೆ ಭಾಂಧವ್ಯದ ಪ್ರತೀಕವಾಗಿ ಸಿಖ್‌ರ ಧರ್ಮ ಲಾಂಛನ ಹೊಂದಿದ ಕೇಸರಿ ಸ್ಕಾರ್ಫ್‌ನ್ನು ಗೌರವದಿಂದ ತೊಡಿಸಿರುವ ದೃಶ್ಯ.

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

8	6	6	6	6	6
ಅಷ್ಟಾವರಣ	ಷಡಾಚಾರ	ಷಟಸ್ಥಲ	ಷಟ್‌ಸೂತ್ರ	ಷಟ್‌ಶೀಲ	ಷಟ್‌ಕ್ರಿಯೆ

ಸಂಪುಟ-35 ಬಸವ ಶಕೆ-872 ಆಜೀವ ಸದಸ್ಯತ್ವ 500 ರೂ.

ಸಂಚಿಕೆ-5 ನವೆಂಬರ್-2005 ವಾರ್ಷಿಕ ಚಂದಾ 50/- ರೂ.

ಬಸವ ಧರ್ಮದ ಕಿರಣವಾಗಲು ಬಾ

ಭಾ ಭಕ್ತ ಶರಣಾಗು ಹೊಂದು ಬಸವನ ಒಲುಮೆ
ಈ ಬಸವ ಮಹಾಮನೆಯ ದಿವ್ಯ ಸ್ಫೂರ್ತಿಯ ಚಿಲುಮೆ ||ಪ|

ಕೂಡಲ ಸಂಗಮನ ದಿವ್ಯ ಸನ್ನಿಧಿಯೊಳು
ಮಂತ್ರಧ್ಯಾನವ ಗೈದು ಹರಿಯುತಿಹಳೀ ಕೃಷ್ಣೆ ||
ಗುರು ಬಸವನ ಚರಣ ಭಕ್ತಿಯಿಂ ತೊಳೆಯುತ
ಮಲಪ್ರಭೆಯು ಸಾಗಿಹಳು ಓಂಕಾರ ಶ್ರುತಿ ಹಿಡಿದು ||1||

ಅಂಗವೆನೆ ಜೀವಾತ್ಮ ಲಿಂಗವೆನೆ ಪರಮಾತ್ಮ
ಲಿಂಗಾಂಗ ಸಮರಸವೇ ಬಾಳಿನ ಗುರಿಯು ।
ಬಸವ ಗೀತೆಯ ಸಾರ ಇದುವೆ ಆಗಿಹುದು
ಪರಮಾತ್ಮ ಗುರಿ ಎಡೆಗೆ ಕರೆದೊಯ್ಯುತಿಹುದು ||2||

ಕಲ್ಯಾಣ ಪ್ರಣತೆಯಲ್ಲಿ ಭಕ್ತಿ ತೈಲವ ಉಂಡು
ಬಸವ ಜ್ಯೋತಿಯು ಅಂದು ಜನಮನವ ಬೆಳಗಿತು
ಸಂಗಮದ ಹಣತೆಯಲ್ಲಿ ತ್ಯಾಗ ತೈಲವನೆರೆದು
ಬಸವ ಜ್ಯೋತಿಯ ಬೆಳಕ ಜಗಕ್ಕೆಲ್ಲ ಹಸರಿಸುವ ||3||

ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು
ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು ||4||

-ಮಾತಾಜಿ

★ ಕಲ್ಯಾಣ ಕಿರಣ ★

ಸಂಪುಟ 35 ಬಸವ ಶಕೆ 872 ಆಜೀವ ಸದಸ್ಯತ್ವ 500ರೂ
ಸಂಚಿಕೆ 3 ನವೆಂಬರ್ 2005 ವಾರ್ಷಿಕ ಚಂದಾ 50/-ರೂ.

ಕಿರಣ ಗನ್ನಡಿ

KALYANA KIRANA-Reg No.19988/70. Monthy Magazine Edited by Pujya Mate Kasturidevi and Published by Pujya Allama Prabhu Swamiji, at Padmasri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/23322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666



ಕೂಡಲ ಸಂಗಮ ಸುಕ್ಷೇತ್ರದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಹತ್ತೊಂಬತ್ತನೆಯ ಶರಣ ಮೇಳ

2006ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ
ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯ
ರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು
ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು
ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ
ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ,
ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು
ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳ
ವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು
ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆ
ಯುತ್ತಲಿದ್ದು ಹತ್ತೊಂಬತ್ತನೆಯ ಶರಣ ಮೇಳವು 2006ರ ಜನವರಿ 11, 12, 13, 14
ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗಪೂಜೆ, ಗಣಲಿಂಗ
ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ
ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. | ಐದು ದಿನ ಭಾಗವಹಿಸಲು
ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. | ಸಂಜೆ
7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸು
ವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ
ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ
ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮ
ಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು
ಅಚ್ಚುಕಟ್ಟಾಗಿ ಮಾಡುತ್ತಿದೆ. ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾ
ಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶ ವಿರುತ್ತದೆ. ಹೆಚ್ಚಿನ
ಸಂಖ್ಯೆಯಲ್ಲಿ ಬಂದು ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಪಾಲ್ಗೊಳ್ಳಿರಿ.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ 10ನೆಯ ದಿನಾಂಕ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ : 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 125 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000 / 10000 ರೂಪಾಯಿಗಳ ಪುದುವಟ್ಟು (F.D.) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲೀ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ) ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರುವೆಮಗೆ ಪ್ರಾಣ ಜೀವಾಳ

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-23325335/23322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 08351-268038/268007/268338

ಜಗತ್ತಿನ ಧಾರ್ಮಿಕ ಅದ್ಭುತಗಳಲ್ಲೊಂದು ಅಮೃತಸರದ ಸ್ವರ್ಣ ಮಂದಿರ

ಸಿಖ್ ಧರ್ಮೀಯರಿಂದ ಲಿಂಗಾಯತರು ಕಲಿಯಬೇಕಾದ ಪಾಠ

ನಿಸರ್ಗದ ಅದ್ಭುತಗಳಲ್ಲಿ ಹಿಮಾಲಯದ ಗೌರಿ ಶಂಕರ ಪರ್ವತ ಮುಂತಾದವು ಸೇರಿದರೆ ಧಾರ್ಮಿಕ ಅದ್ಭುತಗಳಲ್ಲಿ ಒಂದು, ಅಮೃತಸರದ ಸ್ವರ್ಣ ಮಂದಿರ ! ಭಾರತದ ರಾಜಧಾನಿ ದೆಹಲಿಯಲ್ಲಿ 2005ರ ಅಕ್ಟೋಬರ್ 22,23 ಮತ್ತು 24ರಂದು ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನವನ್ನು ಪೂರೈಸಿ ಸಿಖ್ಖರ ಧರ್ಮ ಕ್ಷೇತ್ರ ಅಮೃತಸರವನ್ನು ಸಂದರ್ಶಿಸಲು ಹೊರಟೆವು, ನಮ್ಮೊಡನೆ ಮೂರು ಬಸ್ಸು ಜನರಲ್ಲದೆ ಮತ್ತೂ ಅನೇಕರು ಪ್ರತ್ಯೇಕವಾಗಿ ಸಾರಿಗೆ ಸಂಸ್ಥೆಯ ಬಸ್ಸು ಮತ್ತು ಟ್ರೇನ್‌ಗಳಲ್ಲಿ ಬಂದು ಸೇರಿದರು. ಸಿಖ್ ಧರ್ಮೀಯರಿಂದ ನಾವು ಕಲಿಯಬೇಕಾದ ಪಾಠಗಳು ಹಲವಾರು ಇವೆ. ದಿ.15 ಏಪ್ರಿಲ್ 1469 ರಂದು ಜನಿಸಿದ ಶ್ರೀ ಗುರು ನಾನಕರಿಂದ ಸ್ಥಾಪಿತವಾದ (1496) ಸಿಖ್ ಧರ್ಮಕ್ಕೆ ಇದೀಗ ಸುಮಾರು 509 ವರ್ಷ. ನಂತರ ಬಂದ 9 ಗುರುಗಳನ್ನು ಸೇರಿಸಿ ದಶಗುರು ಪರಂಪರೆಯನ್ನು ರೂಪಿಸಿಕೊಂಡಿರುವ ಸಿಖ್ಖರ ಸಾಧನೆ ಅನನ್ಯ ಮತ್ತು ಅನುಕರಣೀಯ. ಅವರು ಭಾರತದಾದ್ಯಂತ ಮಾತ್ರವಲ್ಲ ವಿದೇಶಗಳಲ್ಲಿ ಸಹ ನಿರ್ಮಿಸಿರುವ ಗುರುದ್ವಾರಗಳು ಅಪೂರ್ವ ನಿರ್ಮಾಣಗಳಾದರೆ ಧರ್ಮಕ್ಷೇತ್ರ ಅಮೃತಸರದಲ್ಲಿ ಕಟ್ಟಿರುವ ಸ್ವರ್ಣಮಂದಿರ ಸಿಖ್ ಧರ್ಮಕ್ಕೆ ಸುವರ್ಣ ಕಲಶವೇ ಸರಿ. ಜಗತ್ತಿನ ಹಲವಾರು ಧಾರ್ಮಿಕ ಸಮೂಹಗಳನ್ನು ನೋಡಿದರೆ ಸಿಖ್ ಸಮಾಜವು ಜೀವಂತಿಕೆಯಿಂದ ತುಂಬಿರುವ ಒಂದು ಸುಸಂಬದ್ಧ, ವ್ಯವಸ್ಥಿತವಾದ ಸಮಾಜವೆನಿಸುತ್ತದೆ. ಅವರಿಂದ ನಾವು ಕಲಿಯಬೇಕಾದುದು ಬಹಳಷ್ಟಿದೆ.

1. ಧರ್ಮಗುರು ನಿಷ್ಠೆ : ಸಿಖ್ ಧರ್ಮಗುರು ನಾನಕರನ್ನು ಕುರಿತು ಎಂಥಾ ಪ್ರಸಂಗದಲ್ಲೂ ಏಕ ವಚನದಲ್ಲಿ ಮಾತನಾಡದೆ, ಗುರು ನಾನಕದೇವ್ ಎಂದೇ ಪೂಜ್ಯತೆಯಿಂದ ಸಂಬೋಧಿಸುತ್ತಾರೆ. ಗುರು ಬಸವಣ್ಣನವರನ್ನು ಉಲ್ಲೇಖಿಸುವಾಗ ಅವ, ಇವ, ಹೇಳಿದ, ಬಂದ; ಹೋದ ಎಂದು ಮಾತನಾಡುವ ಕೆಲವು ರಾಜಕಾರಣಿಗಳು ಮತ್ತು ಸಾಹಿತಿಗಳ ಬರಹ, ಭಾಷಣ ನೋಡಿದಾಗ ಮನಸ್ಸು ಕುದಿಯುತ್ತದೆ. ಆದ್ದರಿಂದ ಎಂತಹ ಪ್ರಸಂಗದಲ್ಲೂ ಗುರು, ವಿಶ್ವಗುರು, ಧರ್ಮಪಿತ ಎಂಬ ವಿಶೇಷಣಗಳನ್ನು ಸೇರಿಸದೆ ಧರ್ಮಗುರು ಬಸವಣ್ಣನವರ ಹೆಸರನ್ನು ಉಲ್ಲೇಖಿಸಬಾರದು. ಅಣ್ಣ ಬಸವಣ್ಣ ಎಂಬುದನ್ನು ಸಹ ನಿಷೇಧಿಸಬೇಕು ಧರ್ಮ ಪಿತ ಬಸವಣ್ಣನವರನ್ನು 'ಅಣ್ಣ' ಎಂದರೆ ಆಗ ಮತ್ತೊಬ್ಬ 'ಅಪ್ಪ'ನನ್ನು ಹುಡುಕಬೇಕಾಗುತ್ತದೆ. ಅಪ್ಪ ಬಸವಣ್ಣನವರು ಎನ್ನುವುದು ಸರಿಯಾದ ಪ್ರಯೋಗ. ಹೀಗಲ್ಲದೆ, ಯಾರಾದರೂ ಅಗೌರವದಿಂದ ಅಥವಾ ಏಕವಚನದಲ್ಲಿ ಧರ್ಮ ಪಿತರ ಹೆಸರನ್ನು ಉಲ್ಲೇಖಿಸಿದರೆ ತಕ್ಷಣವೇ ಶರಣ ಬಂಧುಗಳು ಪ್ರತಿಭಟಿಸಬೇಕು.

2. ಧರ್ಮಗ್ರಂಥ ನಿಷ್ಠೆ : ಗುರು ನಾನಕರಿಂದ ಆರಂಭವಾದ ಸಿಖ್ ಪರಂಪರೆಯಲ್ಲಿ ಅವರ ರಚನೆಗಳಿಂದ ಹಿಡಿದು ಅನೇಕ ಅನುಭಾವಿಗಳ ರಚನೆಗಳನ್ನೂ ಸೇರಿಸಿ 5ನೆಯ ಗುರುವಾದ ಗುರು ಅರ್ಜುನದೇವ್ (1563-1606) ಅವರು ಶ್ರೀಗುರು ಗ್ರಂಥ ಸಾಹಿಬ್ ಅನ್ನು ಸಂಗ್ರಹಿಸಿ, ರಚಿಸಿದರು. ಈ ಪ್ರಥಮ ಗ್ರಂಥವನ್ನು ಆದಿ ಗ್ರಂಥವೆಂದೂ ಕರೆಯುತ್ತಾರೆ. ಇದರಲ್ಲಿ 5894 ರಚನೆಗಳಿವೆ; 36ಜನ ಭಾರತೀಯ ಸಂತರ ಗೀತೆಗಳು ಇವೆ. ಗುರು ಅರ್ಜುನದೇವ್ ಅವರು 1604 ರಲ್ಲಿ ಅಮೃತಸರದಲ್ಲಿ ಈ ಗುರು ಗ್ರಂಥವನ್ನು ಬಿಡುಗಡೆ ಮಾಡಿದರು. ಬಹುದೇವತೋಪಾಸನೆಯಿಂದ ಹಿಂದೂ ಸಮಾಜವು ದುರ್ಬಲಗೊಂಡಂತೆ ಬಹು ಗುರೂಪಾಸನೆಯಿಂದಲೂ ಬಳಲುತ್ತಿದೆ. ಇದಕ್ಕೆ ಪರಿಹಾರವೆಂಬಂತೆ ಗುರು ಗೋವಿಂದ ಸಿಂಗರನ್ನು

10ನೆಯ ಗುರುವೆಂದು ಮನ್ನಿಸಿ, ಸಿಖ್ ಸಮಾಜವು ವ್ಯಕ್ತಿ ಗುರುಗಳ ಬೆನ್ನು ಹತ್ತದೆ ಗ್ರಂಥವನ್ನೇ ಗುರುವೆಂದು ಮಾನ್ಯ ಮಾಡಿ, ಅದಕ್ಕೆ ಅಗ್ರ ಸ್ಥಾನಕೊಟ್ಟಿದೆ. ಹೀಗಾಗಿ ಗುರುದ್ವಾರಗಳಲ್ಲಿ ಎತ್ತರವಾದ ಮಂಟಪದಲ್ಲಿ ಗುರು ಗ್ರಂಥವನ್ನಿಟ್ಟು ಜನರು ನಮನವನ್ನು ಸಲ್ಲಿಸುತ್ತಾರೆ. ಪ್ರತಿ ಗುರುದ್ವಾರದಲ್ಲಿಯೂ 24 ಗಂಟೆಗಳ ಕಾಲವೂ ಪಾಳೆಯ ಮೇಲೆ ಗ್ರಂಥಿಗಳು ಆದಿ ಗ್ರಂಥದ ಪಠಣ ಮಾಡುತ್ತಾರೆ. ಹರಿಯುವ ನೀರಿನಲ್ಲಿ ಕಾಲು ತೊಳೆದು ಯಾವುದೇ ಸದ್ದು ಮಾಡದೆ ಭಕ್ತರು ತಲೆಯ ಮೇಲೆ ಒಂದು ವಸ್ತ್ರವನ್ನು ಹಾಕಿಕೊಂಡು ಒಳಗೆ ಪ್ರವೇಶಿಸಿ ಶ್ರದ್ಧೆಯಿಂದ ಕುಳಿತು ಗುರು ಗ್ರಂಥದ ಪಠಣವನ್ನು ಆಲಿಸುತ್ತಾರೆ. ಲಿಂಗಾಯತ ಧರ್ಮೀಯರಾದ ನಾವು ವಚನ ಸಾಹಿತ್ಯವನ್ನು ಯಾವುದೋ ಒಂದು ವೃತ್ತ ಪತ್ರಿಕೆಯಂತೆ ಓದಿ, ಎಲ್ಲೆಲ್ಲೋ ಹಾಕಬಾರದು; ಭಕ್ತಿ ಗೌರವಗಳಿಂದ ಕಾಣಬೇಕು. ವಚನ ಪಠಣ ಮಾಡುವಾಗ ಶಿಸ್ತಿನಿಂದ ಕುಳಿತುಕೊಳ್ಳಬೇಕು.

3. ಶರಣ ಮೇಳದ ಸಮುದಾಯ ಪ್ರಾರ್ಥನೆ : ಪ್ರತಿ ವರ್ಷದ ಜನವರಿ 11 ರಿಂದ 15ರವರೆಗೆ ಶರಣ ಮೇಳ ಎಂಬ ಲಿಂಗಾಯತ ಧರ್ಮೀಯರ ಧಾರ್ಮಿಕ ಪವಿತ್ರ ಸಮಾವೇಶವು ಧರ್ಮಪಿತ ಬಸವಣ್ಣನವರ ಐಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುತ್ತದಷ್ಟೆ, 5 ದಿವಸಗಳ ಕಾಲ ಅನ್ನದಾಸೋಹದೊಡನೆ ಜ್ಞಾನದಾಸೋಹವು ಅಚ್ಚುಕಟ್ಟಾಗಿ ನಡೆಯುತ್ತದೆ. 5 ದಿವಸಗಳ ಈ ಸಮಾವೇಶದಲ್ಲಿ ಜನವರಿ 14 ಪರಮ ಪವಿತ್ರ(Holiest) ವಾದ ದಿನ. ಏಕೆಂದರೆ 14-1-1155ರಂದು ಯುವ ನಾಮ ಸಂವತ್ಸರದ ಮಕರ ಸಂಕ್ರಾಂತಿಯಂದೇ ಧರ್ಮಪಿತರು ಲಿಂಗದೇವನ ಸಾಕ್ಷಾತ್ಕಾರವನ್ನು ಹೊಂದಿ, ಸೃಷ್ಟಿಕರ್ತ ಲಿಂಗದೇವನ ಕುರುಹಾಗಿ ಇಷ್ಟಲಿಂಗವನ್ನು ಕಂಡು ಹಿಡಿದುಕೊಟ್ಟಿದ್ದು. ಅದು ಲಿಂಗಾಯತ ಧರ್ಮವು ಸ್ಥಾಪನೆಯಾದ ದಿವಸ. ಶರಣ ಮೇಳದಲ್ಲಿ ಜನವರಿ 14ರಂದು ನಾವು ಹಾಕಿಕೊಳ್ಳುವ ಎಲ್ಲ ಕಾರ್ಯಕ್ರಮಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಶರಣ ಬಂಧುಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. ಸುಪ್ರಭಾತದಲ್ಲಿ ಸ್ನಾನ-ಇಷ್ಟಲಿಂಗಾರ್ಚನೆ ಮುಗಿಸಿ ಉಪಾಹಾರ ಸ್ವೀಕರಿಸಿ, ಗುರುವಂದನೆ ಮಾಡಿ, ಸಾಲಾಗಿ ಹೋಗಿ ಗಣ ಲಿಂಗ ದರ್ಶನವನ್ನು ಪಡೆದು ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಬೇಕು. ಪ್ರಾರ್ಥನೆಯ ನಂತರ ವಚನ ಪಠಣವನ್ನು ಕಡ್ಡಾಯವಾಗಿ ಮಾಡಬೇಕು. ನಂತರ ಮೊದಲ ಬಾರಿಗೆ ಬಂದವರಿಂದ ಪ್ರತಿಜ್ಞಾ ಸ್ವೀಕಾರ; ಎರಡು ಮೂರು ಇತ್ಯಾದಿ ಸಲ ಬಂದವರಿಗೆ ಅನಯಾಯಿತ್ವ ಸ್ಥಿರೀಕರಣ ಕಾರ್ಯಕ್ರಮದ ನಂತರ ಮಧ್ಯಾಹ್ನದ ಪ್ರಸಾದ, ನಂತರ ಶ್ರೀ ಗುರು ಬಸವಣ್ಣನವರ ಐಕ್ಯ ಮಂಟಪ ಸಂದರ್ಶನ - ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳು, ಗಣನಾಯಕ-ನಾಯಕಿಯರಿಂದ. ಅಲ್ಲಿಂದ ಧರ್ಮಪಿತರ ಭಾವಚಿತ್ರ, ವಚನ ಸಾಹಿತ್ಯದ ಮೆರವಣಿಗೆ, ಶರಣ-ಶರಣೆಯರಿಂದ ಪಥ ಸಂಚಲನ, ಸಂಜೆ ಸಾಮೂಹಿಕ ಇಷ್ಟಲಿಂಗಾರ್ಚನೆ. ದಿ.14ರ ಸಂಪೂರ್ಣ ಕಾರ್ಯಕ್ರಮಗಳಲ್ಲಿ ಶರಣ ಬಂಧುಗಳು ಭಾಗವಹಿಸಬೇಕು. ಇಲ್ಲಿ ಯಾವ ವ್ಯಕ್ತಿಯೂ ಮುಖ್ಯವಲ್ಲ ಧರ್ಮಗುರು ಮತ್ತು ವಚನ ಸಾಹಿತ್ಯಕ್ಕೆ ಗೌರವ ನೀಡುವುದು ಬಹಳ ಮುಖ್ಯ.

4. ಗುರುಗಳ ಬಲಿದಾನದ ಬಗ್ಗೆ ಅಪಾರ ಕೃತಜ್ಞತೆ : ಧರ್ಮ ಸಂರಕ್ಷಣೆಗಾಗಿ ಪ್ರಾಣಾರ್ಪಣೆ ಮಾಡಿದ ಗುರು ತೇಜ್‌ಬಹಾದ್ದೂರ್ ಅವರ ಬಲಿದಾನದ ಬಗ್ಗೆ ಸಿಖ್ಖರಿಗೆ ಅಪಾರ ಭಕ್ತಿ. ದೆಹಲಿಯ ಚಾಂದನಿ ಚೌಕದಲ್ಲಿರುವ ಶೀಸ್‌ಗೆಂಜ್ ಗುರುದ್ವಾರವು ಗುರು ತೇಜ್‌ಬಹಾದ್ದೂರರ ಬಲಿದಾನವಾದ ಸ್ಥಳ. ಮುಸಲ್ಮಾನ್ ಬಾದಶಹನೊಬ್ಬ ಹಿಂದುಗಳನ್ನು ಬ್ರಾಹ್ಮಣರನ್ನು ಒತ್ತಾಯದಿಂದ ಮತಾಂತರಿಸುತ್ತಿರುವ ಸುದ್ದಿ ತಿಳಿದು ಗುರು ತೇಜ್‌ಬಹಾದ್ದೂರರು ಮೊದಲು ತಮ್ಮನ್ನು ಚರ್ಚೆಯ ಮೂಲಕ ಮನವೊಲಿಸಲು ಆಹ್ವಾನ ನೀಡುತ್ತಾರೆ. ಆದರೆ ಆ ಮತಾಂಧನು ಇವರ ಶಿರಸನ್ನು ಛೇದಿಸಿ ಗಿಡಕ್ಕೆ ನೇತುಹಾಕುತ್ತಾನೆ. ಆ ಜಾಗವನ್ನು ಅತ್ಯಂತ ಭಕ್ತಿಪೂರ್ಣ ಮತ್ತು ವೈಭವಪೂರ್ಣವಾಗಿ ಕಾಯ್ದುಕೊಂಡು ಬಂದಿದ್ದಾರೆ. ಅಂದಿನಿಂದಲೂ ಆ ಜಾಗದಲ್ಲಿ ನಂದಾದೀಪವನ್ನು ಉರಿಸುತ್ತಿದ್ದಾರೆ. ಇದನ್ನು ನೋಡಿದಾಗ ಲಿಂಗಾಯತ ಸಮಾಜದ ನಿರಭಿಮಾನ ಅಷ್ಟೇ ದುಃಖವನ್ನು

ಉಂಟು ಮಾಡುತ್ತದೆ. ಧರ್ಮಪಿತರ ಗಡಪಾರು, ಹರಳಯ್ಯ-ಮಧುವರಸ, ಶೀಲವಂತರ ಬಲಿದಾನ, ವಚನ ಸಾಹಿತ್ಯ ಸಂರಕ್ಷಣೆಗಾಗಿ ನಡೆದ ಶರಣರ ಹೋರಾಟ, ಪ್ರಾಣತ್ಯಾಗ ಯಾವುವನ್ನೂ ನೆನಪಿಡದ ದುರ್ದೈವಿಗಳು ಬಹುಪಾಲು ಲಿಂಗಾಯತರು. ಹರಳಯ್ಯ-ಮಧುವರಸರ ಬಲಿದಾನವಾದ ಸ್ಥಳವು ಬಸವ ಕಲ್ಯಾಣದಲ್ಲಿ ಸಂರಕ್ಷಿಸಲ್ಪಟ್ಟಿಲ್ಲ. ಈ ನಿರಭಿಮಾನದಿಂದ ಹೊರ ಬರಲು ಸಿಖ್ಖರ ಶೀಸ್‌ಗಂಜ್ ಗುರುದ್ವಾರ ಪ್ರೇರಣೆ ನೀಡಬಹುದು ಎಂದು ನಾನು ದಿ.24-10-2005ರಂದು ಪಥ-ಸಂಚಲನದಲ್ಲಿ ಶರಣರನ್ನು ಕರೆದೊಯ್ಯುವ ಕಾರ್ಯಕ್ರಮ ಸಂಯೋಜಿಸಿದೆ.

5. ಅಪ್ರತಿಮ ಸೇವಾ ಕಾರ್ಯ : ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ, ದೇವ ಪ್ರೇಮದ ಜೊತೆಗೆ ಅಪ್ರತಿಮ ಸೇವಾ ಮನೋಭಾವದಿಂದ ಸಿಖ್ಖರು ನಮ್ಮ ಗಮನ ಸೆಳೆಯುತ್ತಾರೆ. ಎಂಥಾ ಭವ್ಯ ನಿಲುವಿನವರು, ಅಷ್ಟೇ ವಿನಯ ಶಾಲಿಗಳು ; ಅನ್ಯ ಧರ್ಮದ ಸಂತರನ್ನು ಗೌರವ ಭಾವದಿಂದ ಕಾಣುವರು. ಗುರುದ್ವಾರಗಳಲ್ಲಿ ಉಳಿಯುವ ಯಾತ್ರಿಕರ ಸೇವೆಯನ್ನು ಮನಮುಟ್ಟಿ ಮಾಡುವರು. ಸ್ವರ್ಣಮಂದಿರದ ಸುತ್ತಲೂ ಅಮೃತ ಶಿಲೆಯ ಹಾಸುಗಳಿವೆ. ದಿನಕ್ಕೆ 5 ಬಾರಿ ನೀರು ಹಾಕಿ ತೊಳೆಯುವ ಸೇವೆಗೆ ಕಾರಿನಲ್ಲಿ ಬಂದ ಶ್ರೀಮಂತರು ನಿಲ್ಲುವುದನ್ನು ಕಂಡಾಗ ಹಿಂದುಗಳು, ಲಿಂಗಾಯತರು ಬೆಪ್ಪಾಗಿ ನೋಡುವರು. ದಿನಾಲೂ, ಸಾಮಾನ್ಯ ದಿನಗಳಲ್ಲಿ 70,000(ಎಪ್ಪತ್ತು ಸಾವಿರ) ಯಾತ್ರಿಕರ ಊಟ (ಲಂಗರ್) ನಡೆದರೆ ವಿಶೇಷ ಉತ್ಸವಗಳಂದು 3 ಲಕ್ಷ ಜನರ ಊಟ ದಿನದ 24 ಗಂಟೆ ನಡೆಯುತ್ತದೆ. ಸಂಬಳ ಪಡೆಯುವ ಕೆಲಸಗಾರರಿಗಿಂತ ಸೇವಾ ಭಾವದಿಂದ ದುಡಿಯುವ ಭಕ್ತರು ಬಹಳ. ಸಾಲಾಗಿ ನಿಂತು ಊಟದ ತಟ್ಟೆಕೊಡುವರು. ಉಂಡ ನಂತರ ತಟ್ಟೆ ತೊಳೆಯಲು ಬಿಡದೆ ತಟ್ಟೆ ಪಡೆದುಕೊಂಡು ಸೋಪಿನ (ಬಿಸಿ) ನೀರಿನಲ್ಲಿ, ನಂತರ ತಣ್ಣೀರಿನಲ್ಲಿ, ಮತ್ತೊಮ್ಮೆ ತಣ್ಣೀರಲ್ಲಿ ತೊಳೆದು ಒರೆಸಿ ತಳ್ಳುವ ಗಾಡಿಯಲ್ಲಿ ಇಡುತ್ತಾರೆ. ಕುಡಿಯುವ ತಣ್ಣೀರನ್ನು ಕೊಟ್ಟು ಆ ಬಟ್ಟಲನ್ನು ಬಿಸಿ ನೀರು, ತಣ್ಣೀರಲ್ಲಿ ತೊಳೆಯುತ್ತಾರೆ.

ಶರಣ ಮೇಳದಲ್ಲಿ ವಿವಿಧ ಊರುಗಳವರು ಉಪಾಹಾರ, ಊಟ ಎಡೆ ಮಾಡಲು, ತಟ್ಟೆ ತೊಳೆಯಲು, ತರಕಾರಿ ಮುಂತಾಗಿ ಹೆಚ್ಚಿ ಕೊಡಲು ಪಾಳೆಯ ಮೇಲೆ ಸಿದ್ಧರಾಗಬೇಕು. ಧರ್ಮಪಿತರ ಕೆಳಕಂಡ ಈ ಆಜ್ಞೆಯನ್ನು ಶಿರಸಾ ವಹಿಸಿ ಪಾಲಿಸಬೇಕು.

ಭಕ್ತ ಭಕ್ತನ ಮನೆಗೆ ಬಂದಡೆ
ಭೃತ್ಯಾಚಾರವ ಮಾಡಬೇಕು
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ
ಹಿಂದೆ ಮಾಡಿದ ಭಕ್ತಿಗೆ ಹಾನಿ
ಲಕ್ಷ ಗಾವುದ ದಾರಿಯ ಹೋಗಿ ಭಕ್ತ ಭಕ್ತನ ಕಾಂಬುದು ಸದಾಚಾರ
ಅಲ್ಲಿ ಕೂಡಿ ದಾಸೋಹವ ಮಾಡಿದಡೆ
ಕೂಡಿ ಕೊಂಬನು ನಮ್ಮ ಲಿಂಗದೇವ -ಬ.ವ.ದೀ-248

ಸಿಖ್ ಸಹೋದರರ ಗುರು ನಿಷ್ಠೆ, ಗ್ರಂಥ ನಿಷ್ಠೆ, ಸೇವಾ ಮನೋಭಾವ, ಶಿಸ್ತು ಲಿಂಗಾಯತ ಧರ್ಮಕ್ಕೆ ದಾರಿದೀಪವಾಗಬೇಕೆಂದು ನಮ್ಮ ನಿರೀಕ್ಷೆ.

ಕೂಡಲ ಸಂಗಮ
1-11-2005

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷೆ, ಬಸವ ಧರ್ಮ ಪೀಠ

ಅಯ್ಯ ನಿಮ್ಮ ಶರಣರ ದಾಸೋಹಕ್ಕೆ
ಎನ್ನ ತನು ಮನ ಧನ ವಲಸದಂತೆ ಮಾಡಯ್ಯ
ತನು ದಾಸೋಹಕ್ಕೆ ಉಬ್ಬುವಂತೆ ಮಾಡು
ಮನ ದಾಸೋಹಕ್ಕೆ ಲೀಯವಹಂತೆ ಮಾಡು
ಧನ ದಾಸೋಹಕ್ಕೆ ಸವೆದು ನಿಮ್ಮ ಶರಣರ ಪ್ರಸಾದದಲ್ಲಿ
ನಿರಂತರ ಆಡಿ ಹಾಡಿ ನೋಡಿ, ಕೂಡಿ, ಭಾವಿಸಿ
ಸುಖಿಸಿ, ಪರಿಣಮಿಸುವಂತೆ ಮಾಡು ಲಿಂಗದೇವಾ !

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೇ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು. ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು-ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದಕಾಲದಲ್ಲಿಯೇ ನೀವು ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿಸಿರಬಹುದು, ಇತ್ತೀಚೆಗೆ ಬಂದಿರಬಹುದು. ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ವರ್ಗ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರುಮನೆಯಲ್ಲಿ ಆಗಾಗ ಸೇರುವುದೂ ಗೊತ್ತು. ತಾಯಿ-ತಂದೆ, ಅಕ್ಕ-ತಂಗಿ, ಅಣ್ಣ-ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ-ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃಹೃದಯಿಯಾದ ನನ್ನ ಇಚ್ಛೆಯು ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶವಿರಲಿಲ್ಲ. ಇದೀಗ ನನ್ನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ-ಸೋದರತ್ವ-ಸ್ವಾತಂತ್ರ್ಯ ಇವು ನನ್ನ ತತ್ತ್ವದ ಮುಖ್ಯ-ಮೂರು ಸೂತ್ರಗಳು. ಇಲ್ಲಿ ಅವು ಮೂರನ್ನೂ ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ. ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲ ಅಣ್ಣ ತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ-ಸ್ಥಿತಿ-ಲಯ-ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ತಾನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯವನ್ನು ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಜನತೆಯನ್ನು ಅನುಗ್ರಹಿಸಿ, ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು

ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತನೇ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವತೋಪಾಸನೆ ಮುಂತಾದುವನ್ನು ರೂಢಿಸಿಕೊಂಡಿದ್ದರೆ, ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣವ್ಯವಸ್ಥೆ, ಜಾತಿ ಪದ್ಧತಿಯನ್ನು ಹುಟ್ಟುಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಟ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹಳ ಜನರು ದೇವರು-ಧರ್ಮ-ಸಂಸ್ಕಾರ-ಧಾರ್ಮಿಕ ಹಕ್ಕು; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೇ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು, ಮಾನವನು ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

> ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
> ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
> ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
> ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು.

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗಾಯತರಾಗಿರಬಹುದು, ನಿಮ್ಮ ತಾಯಿ ತಂದೆ ಲಿಂಗಾಯತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ, ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ. ನೀವು ಸಂಸ್ಕಾರ ಹೊಂದಿ ಧರ್ಮಾಚರಣೆಯಿಂದ ಲಿಂಗಾಯತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗಾಯತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ತ್ವ ಸಂಹಿತೆ ಯಾವುದೇ ಒಂದು ಜಾತಿ ವರ್ಣಕ್ಕೆ ಸೀಮಿತವಾಗದ 'ಗಣಧರ್ಮ'ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು.

ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

> ಕಾಗೆಯೊಂದಗುಳ ಕಂಡಡೆ
> ಕರೆಯದೆ ತನ್ನ ಬಳಗವೆಲ್ಲವ?
> ಕೋಳಿ ಒಂದು ಕುಟುಕ ಕಂಡಡೆ
> ಕೂಗಿ ಕರೆಯದೆ ತನ್ನ ಕುಲವನೆಲ್ಲವ ?

ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ.

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ನೆನಹು : ಪ್ರತಿದಿನ ಸಂಜೆ 7 ಘಂಟೆಗೆ ಸರಿಯಾಗಿ ನೀವು ಎಲ್ಲಿಯೇ ಇದ್ದರೂ ಆ ಸ್ಥಳದಲ್ಲಿ ಐದು ನಿಮಿಷಗಳ ಪ್ರಾರ್ಥನೆಯನ್ನು ವೈಯಕ್ತಿಕವಾಗಿಯಾಗಲಿ ಸಾಮೂಹಿಕವಾಗಿಯಾಗಲಿ ಅಳವಡಿಸಿಕೊಂಡು ತಪ್ಪದೆ ಮಾಡಿರಿ.

ಕೌಟುಂಬಿಕ ಪ್ರಾರ್ಥನೆ : ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕವಾಗಿ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆಯುವುದೇ ಅಲ್ಲದೆ ಎಲ್ಲರಲ್ಲೂ ಧರ್ಮಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆಮಂದಿಯೆಲ್ಲ ಕುಳಿತು, ನೆನಹು ಸಂಜೆಯ ಪ್ರಾರ್ಥನೆ ಮಾಡಿರಿ.

ವಾರದ ಪ್ರಾರ್ಥನೆ - ಶರಣ ಸಂಗಮ : ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

ಗಣ ಮೇಳ : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟ ಪಡುತ್ತವೆ. ಆನೆಗಳು ಬಲಿಷ್ಠ ಪ್ರಾಣಿಗಳು, ಆದರೂ ಗುಂಪುಗೂಡಿಯೆ ಬದುಕಲು ಇಷ್ಟಪಡುತ್ತವೆ. ಸಮೂಹವನ್ನು ತೊರೆದು ಮದವೇರಿದ ಸಲಗ ಎಷ್ಟು ಉನ್ಮತ್ತವಾಗಿ ವರ್ತಿಸುವುದೋ ಹಾಗೆ ಸಮಾಜದಿಂದ ಬೇರೆಯಾಗುವ ವ್ಯಕ್ತಿ ಸಹ ಪ್ರೇಮ ಸ್ವಭಾವವನ್ನು ತೊರೆದು ವಿಕೃತ ಮನಸ್ಕನಾಗುವನು. ಆಯಾ ಊರುಗಳಲ್ಲಿರುವ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ-ಪೂಜೆ ಮಾಡಿರಿ. ಶಿವರಾತ್ರಿಯಂದು ಬೆಳಿಗ್ಗೆ ವಿಶಾಲವಾದ ಮೈದಾನಗಳಲ್ಲಿ ಧರ್ಮಬಾಂಧವರೆಲ್ಲ ಸೇರಿ ಗಣ ಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ : ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು. ಕುಟುಂಬದವರೆಲ್ಲ ಒಂದೆಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದಾದ್ದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. 'ಗಣ ಮೇಳ'ವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲ ಸೀಮೆಗಳನ್ನು ದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ತ್ವಾನುಯಾಯಿಗಳನ್ನು

ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲಸಂಗಮಕ್ಕೆ ಧಾವಿಸಿ ಬಂದು ಜನವರಿ 11 ರಿಂದ 15 ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಕಲ್ಯಾಣ ಪರ್ವ : 36 ವರ್ಷಗಳ ಕಾಲ ನನ್ನ ಕಾರ್ಯಕ್ಷೇತ್ರವಾಗಿದ್ದು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಪ್ರದೇಶಗಳಿಂದೆಲ್ಲ ಶರಣರನ್ನು ಆಕರ್ಷಿಸಿದ ಬಸವ ಕಲ್ಯಾಣದಲ್ಲಿ ಪ್ರತಿವರ್ಷದ ಮೇ 1,2 ಮತ್ತು 3ರಂದು ನಡೆಯುವ ಕಲ್ಯಾಣ ಪರ್ವದಲ್ಲಿ ಭಾಗಿಗಳಾಗಿ ಶರಣ ವಂದನೆಯನ್ನು ಮಾಡಿ ಧನ್ಯರಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ-ಮಡಿವಾಳ ಮಾಚಯ್ಯ-ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ-ಮಧುವಯ್ಯ-ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದೆಡೆ ಸೇರಿ ಹಾಡಿ ಪಾಡಿ ನಲಿಯಬೇಕೆಂದು ತಾನೆ ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು, ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು; ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ "ಒಗೆತನವ" ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ, ತನು-ಮನ-ಧನ-ಪ್ರಾಣ-ಅಭಿಮಾನ-ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ-ಪ್ರತಿಷ್ಠೆ ತೊರೆಯಿರಿ. ಅನುಭವ ಮಂಟಪದ ಮೂಲಕ ನಾವು ಬೋಧಿಸಿದ ಮೌಲ್ಯಗಳು ಅನುಷ್ಠಾನಕ್ಕೆ ಬರದಿರಲು ಪರಸ್ಪರರ ಸ್ವಾರ್ಥ, ಅಹಂಕಾರ-ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಅದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಿರುತ್ತಾಳೆ. ಬನ್ನಿ, ನಿಮ್ಮ ಹೃದಯ-ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ-ನಿಮ್ಮೆಲ್ಲರ ತಂದೆಯಾದ ದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ ಬಸವಣ್ಣ
(ಗ್ರಹಿಸಿದವರು-ಬಸವಾತ್ಮಜೆ ಮಾತಾಜಿ)

ಹೈದರಾಬಾದಿನಲ್ಲಿ ಬಸವ ಮಂಟಪ ನಿರ್ಮಾಣ ಮತ್ತು ಬಸವಣ್ಣನವರ ಮೂರ್ತಿಯ ಸ್ಥಾಪನೆ

-ಮಾತಾಜಿ

ಬಸವ ಮೂರ್ತಿಯೆ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೆ ಜ್ಞಾನಕ್ಕೆ ಮೂಲ
ಬಸವ ಬಸವಾ ಎಂಬುದೇ
ಭಕ್ತಿ ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಆಂಧ್ರ ಪ್ರದೇಶ ರಾಜ್ಯದ ರಾಜಧಾನಿ ಹೈದರಾಬಾದಿನಲ್ಲಿ ಒಂದು ಅಪೂರ್ವ ಸಮಾರಂಭ; ಇದಕ್ಕೆ ಕಾರಣ ರಾಷ್ಟ್ರೀಯ ಬಸವ ದಳದ ವತಿಯಿಂದ ಬಸವ ಮಂಟಪ ನಿರ್ಮಾಣ. ಹೈದರಾಬಾದ್ ನಗರದ ಜಿಯಾಗುಡ ಪ್ರದೇಶದ ಕೇಶವ ಸ್ವಾಮಿ ನಗರದಲ್ಲಿ ಇರುವ ನಿವೇಶನದಲ್ಲಿ ನಿರ್ಮಾಣಗೊಂಡಿರುವ ಬಸವ ಮಂಟಪದಲ್ಲಿ ದಿ.15-10-2005 ರಂದು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಬಸವ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ, 1008 ಬಸವ ಮಂತ್ರಗಳನ್ನು ಪಠಿಸಿ, ಮೂರ್ತಿ ಪ್ರತಿಷ್ಠಾಪನೆಯಾಗಲಿರುವ ಸ್ಥಳವನ್ನು ದೈವೀಕರಿಸಿದರು. ದೆಹಲಿಯಲ್ಲಿ ಅಕ್ಟೋಬರ್ 22,23 ಮತ್ತು 24ರಂದು ನಡೆಯಲಿದ್ದ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನದ ಸಿದ್ಧತೆಗಾಗಿ ದೆಹಲಿಯಲ್ಲೇ ವಾಸ್ತವ್ಯ ಮಾಡಿದ್ದ ಪೂಜ್ಯ ಶ್ರೀಮಹಾ ಜಗದ್ಗುರು ಮಾತೆ ಮಹಾದೇವಿಯವರು ದೆಹಲಿಯಿಂದ ನೇರವಾಗಿ ಹೈದರಾಬಾದಿಗೆ ದಿ.15ರಂದು ಏರ್ ಸಹಾರಾದ ಮೂಲಕ ಆಗಮಿಸಿದರು. ನಯಾ ಬಸ್ತಿ ಪ್ರದೇಶದಲ್ಲಿರುವ ಬಸವ ಪ್ರಾರ್ಥನಾ ಮಂದಿರದ ಬಳಿ ಪೂಜ್ಯ ಮಾತಾಜಿಯವರನ್ನು ಸ್ವಾಗತಿಸಲಾಯಿತು. ಸಿದ್ಧವಾಗಿ ಬಂದ ಅಮೃತಶಿಲೆಯ ಬಸವ ಮೂರ್ತಿಗೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ಮತ್ತು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಮಾಲಾರ್ಪಣೆ, ಪುಷ್ಪವೃಷ್ಟಿ ಮಾಡಿದರು. ಶ್ರೀ ಗುರು ಬಸವ ಮೂರ್ತಿಯನ್ನು ಮತ್ತು ಪೂಜ್ಯ ಮಾತಾದ್ವಯರನ್ನು ಕುದುರೆಯ ಸಾರೋಟಿನಲ್ಲಿ ಕೂರಿಸಿ ಭಕ್ತಿ ಪೂರ್ವಕ ಮೆರವಣಿಗೆಯ ಮೂಲಕ ಜಿಯಾಗುಡ ಬಸವ ಮಂಟಪಕ್ಕೆ ಕರೆತರಲಾಯಿತು ಮಾರ್ಗ ಮಧ್ಯದಲ್ಲಿ ಜೈನ ಸಮಾಜದವರು, ವಾಲ್ಮೀಕಿ, ಸಮಗಾರ ಹರಳಯ್ಯ, ಡೋಹರ ಕಕ್ಕಯ್ಯ, ಕುರುಬ ಗೊಲ್ಲಾಳ, ಮಡಿವಾಳ ಮಾಚಿದೇವ ಮುಂತಾದ ಅನೇಕ ಸಮಾಜಗಳವರು ಮಾತಾದ್ವಯರಿಗೆ ಮಾಲಾರ್ಪಣೆ ಮಾಡಿ ಗೌರವಿಸಿದರು. ಶರಣ-ಶರಣೆಯರು ಜಯಘೋಷ ಮಾಡುತ್ತ ಭಕ್ತಿಪೂರ್ವಕವಾಗಿ ನರ್ತಿಸಿ, ಹರ್ಷಿಸಿದರು. ಬಸವ ಧ್ವಜಗಳನ್ನು ಹಿಡಿದು ಸಾಲಾಗಿ ಶಿಸ್ತಿನಿಂದ ಪಥ ಸಂಚಲನ ಮಾಡುತ್ತ ಸಾಗಿದ ಶರಣ ವೃಂದವು ಹೈದರಾಬಾದ್ ನಗರದ ಜನತೆಯ ಗಮನ ಸೆಳೆಯಿತು.

ಬಸವ ಮಂಟಪದಲ್ಲಿ ಸಂಜೆಯ ಪ್ರಾರ್ಥನೆ ನೆನಹು ಜರುಗಿತು. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು 21-8-2005 ರಿಂದ ಅಖಂಡವಾಗಿ 5 ವಾರಗಳ ಕಾಲ ಜಿಯಾಗುಡದಲ್ಲಿ ಹಿಂದಿ ಭಾಷೆಯಲ್ಲಿ ಪ್ರವಚನವನ್ನು ಮಾಡಿ, ನಂತರ ಒಂದೊಂದು ವಾರದಂತೆ ಮೂರು ಪ್ರದೇಶಗಳಲ್ಲಿ ಪ್ರವಚನ ಮಾಡಿದರು. ಪ್ರವಚನ ಮಾಲಿಕೆಯ ಸಮಾರೋಪ ಸಮಾರಂಭವು ದಿ.15-10-2005 ರಂದು ಸಂಜೆ ನೆರವೇರಿತು. ಎರಡು ತಿಂಗಳ ಕಾಲ ಪ್ರವಚನ ಮಾಡಿ ಜನಮನವನ್ನು ಗೆದ್ದ ಪೂಜ್ಯ ಶ್ರೀ ಗಂಗಾ ಮಾತಾಜಿಯವರನ್ನು ಗೌರವಪೂರ್ವಕವಾಗಿ ಸತ್ಕರಿಸಲಾಯಿತು.

ದಿ.16-10-2005 ದೇವ(ಭಾನು)ವಾರದಂದು ಸುಪ್ರಭಾತದಲ್ಲಿ ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು ಬಸವೇಶ್ವರ ಪೂಜಾವ್ರತವನ್ನು ನೆರವೇರಿಸಿದರು. ಬಸವ ಮಂಟಪದ ಮಹಾದ್ವಾರದ ಹೊರಗಡೆ ಗುರು ಬಸವಣ್ಣನವರ ಭಾವಚಿತ್ರವನ್ನಿಟ್ಟು ಪೂಜಿಸಲಾಯಿತು. ಕೇಂದ್ರ ಯೋಜನಾ ಸಚಿವ ಶರಣ.ಎಂ.ವಿ.ರಾಜಶೇಖರನ್ ರಿಬ್ಬನ್ ಬಿಚ್ಚಿ ಬಸವ ಮಂಟಪ ಉದ್ಘಾಟಿಸಿದರು, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಗುರು ಬಸವ ಭಾವಚಿತ್ರದೊಡನೆ ಬಸವ ಮಂಟಪದೊಳಕ್ಕೆ ಪ್ರವೇಶಿಸಿ, ಪೂಜೆಯನ್ನು ನೆರವೇರಿಸಿದರು. 108 ಬಸವ ಲಿಂಗ ಮಂತ್ರವನ್ನು ಪಠಿಸಿ, ಪುಷ್ಪವೃಷ್ಟಿ ಆರತಿಯನ್ನು ಮಾಡಿ, ಮೂರ್ತಿಯ ಪ್ರತಿಷ್ಠಾಪನೆ ಪೂರೈಸಿದರು.

ಲಿಂಗಾಯತ ಧರ್ಮ ಸಮ್ಮೇಳನ

ಪ್ರತಿಷ್ಠಾಪನೆಯ ನಂತರ ಬಸವ ಮಂಟಪದ ಹೊರಗೆ ನಿರ್ಮಿಸಿದ್ದ ಬೃಹತ್ ವೇದಿಕೆ ಮತ್ತು ಪೆಂಡಾಲ್‌ದಲ್ಲಿ ಲಿಂಗಾಯತ ಧರ್ಮ ಸಮ್ಮೇಳನವು ಜರುಗಿತು. ದೇವ(ಭಾನು)ವಾರದ ಶರಣ ಸಂಗಮವನ್ನು ಮಾಡಿ ಪೂಜ್ಯ ಮಾತಾಜಿ ಪ್ರಾಸ್ತಾವಿಕವಾಗಿ ಮಾತನಾಡಿ ಬಸವ ಮಂಟಪಗಳ ನಿರ್ಮಾಣದ ಅಗತ್ಯ ಕುರಿತು ವಿವರಿಸಿದರು. "ಧರ್ಮದ ಗುರಿ ಕೇವಲ ವೈಯಕ್ತಿಕ ಆತ್ಮಸಾಕ್ಷಾತ್ಕಾರ ಮಾತ್ರವಲ್ಲ ಸಮಾಜ ಸಂಘಟನೆ ಮತ್ತು ಧಾರ್ಮಿಕ ಸಹೋದರತ್ವವನ್ನು ನೆಲೆಗೊಳಿಸುವುದು. ಇದು ಸಾಧ್ಯವಾಗಬೇಕಾದರೆ ಸಾಮೂಹಿಕ ಪ್ರಾರ್ಥನಾ ಮಂದಿರಗಳ ಅಗತ್ಯವಿದೆ. ಹೈದರಾಬಾದಿನಲ್ಲಿ ರಾಷ್ಟ್ರೀಯ ಬಸವ ದಳದವರು ಬಸವ ಮಂಟಪವೆಂಬ ಶ್ರದ್ಧಾಕೇಂದ್ರವನ್ನು ಮಾಡಿದುದು ಬಹಳ ಅಭಿನಂದನಾರ್ಹ."ಎಂದು ಹೇಳಿದರು. ಈ ಪ್ರಾರ್ಥನಾ ಮಂದಿರವು ಒಂದು ಜಾತಿ-ಮತ-ಪಂಥಕ್ಕೆ ಸೀಮಿತವಾಗದೆ ಎಲ್ಲರನ್ನು ಇಂಬಿಟ್ಟುಕೊಳ್ಳಬೇಕೆಂದು ಕರೆ ನೀಡಿದರು.

" ಲಿಂಗಾಯತವು ಒಂದು ಜಾತಿಯಲ್ಲ ಸ್ವತಂತ್ರ ಧರ್ಮ; ದೀನ ದಲಿತರ ಉದ್ಧಾರವನ್ನು ಗಮನದಲ್ಲಿ ಇಟ್ಟುಕೊಂಡೇ ಧರ್ಮಪಿತ ಬಸವಣ್ಣನವರು ಸಂಸ್ಥಾಪಿಸಿದ ಧರ್ಮ ; ಧರ್ಮಗುರುವಿನ ಆಶಯವನ್ನು ಗುರುತಿಸಿಕೊಂಡು ಅದರಂತೆ ನಾವು ನಡೆಯಬೇಕು ಎಂದರು. ಕರ್ನಾಟಕ ಸರ್ಕಾರದ ಅರಣ್ಯ ಸಚಿವರಾದ ಗುರುಪಾದಪ್ಪ ನಾಗಮ್ಮರಪಳ್ಳಿಯವರು ಗಣಧ್ವಜಾರೋಹಣವನ್ನು ಮಾಡಿದರು. ಆಂಧ್ರ ಸರ್ಕಾರದ ಸಚಿವರಾದ ಶ್ರೀ ರಘುವೀರರೆಡ್ಡಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕೇಂದ್ರ ಯೋಜನಾ ಸಚಿವರಾದ ಎಂ.ವಿ.ರಾಜಶೇಖರನ್ ಅವರು ಮುಖ್ಯ ಅತಿಥಿಗಳಾಗಿ ಮಾತನಾಡುತ್ತ ಪೂಜ್ಯ ಮಾತಾಜಿಯವರ ಕರ್ತೃತ್ವ ಶಕ್ತಿ ಮತ್ತು ಸಂಘಟನಾ ಚತುರತೆಯ ಬಗ್ಗೆ ಪ್ರಶಂಸಿಸಿದರು. ನೆರೆದಿದ್ದ ಜನ ಸಮೂಹವನ್ನು ಅವರು ಶಿಸ್ತಿನಿಂದ ಕುಳಿತುದನ್ನು ಕಂಡು ಹರ್ಷಭರಿತರಾದರು. ಆಂಧ್ರ ಪ್ರದೇಶ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಸುಭಾಷ್ ಪಾಟೀಲ್ ಲಿಂಗಾಯತ್ ಸ್ವಾಗತ ಮಾಡಿದರು. ಶರಣ. ವಿಜಯ ಕುಮಾರ್ ಪಟ್ನೆ ಸಭಾ ನಿರ್ವಹಣೆ ಮಾಡಿದರು, ಶರಣ ಸುರೇಶ್ ಕೋರೆ ಅತಿಥಿಗಳ ಪರಿಚಯ ಮಾಡಿದರು. ಕಾರ್ಯಕ್ರಮಕ್ಕೆ ಬೀದರ್, ಗುಲಬರ್ಗಾ, ಉದಗೀರ್ ರಾಷ್ಟ್ರೀಯ ಬಸವ ದಳಗಳ ಶರಣರು ಆಗಮಿಸಿದ್ದರು. ಆಂಧ್ರದ ಮೆಹಬೂಬ್ ನಗರ, ಜಹಿರಾಬಾದ್, ನಾರಾಯಣ ಪೇಟ್‌ದ ಶರಣರಲ್ಲದೆ ಹೈದರಾಬಾದ್. ನಗರದಲ್ಲಿ ಕ್ರಿಯಾಶೀಲವಾಗಿರುವ 14 ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳು ಮತ್ತು ಶರಣ ಬಂಧುಗಳು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತಂದರು. ಅಚ್ಚುಕಟ್ಟಾಗಿ ಪ್ರಸಾದ ದಾಸೋಹ ನೆರವೇರಿತು.

ವರದಿ : ಶರಣ. ವೈಜನಾಥ ಹಿರೋಡೆ
ಉಪಾಧ್ಯಕ್ಷರು, ರಾ.ಬ.ದಳ, ಹೈದರಾಬಾದ್

ಆಂಧ್ರ ಪ್ರದೇಶ ರಾ.ಬ.ದಳದಿಂದ ದೆಹಲಿಯ ಸಮ್ಮೇಳನದಲ್ಲಿ ಸಿಹಿ ವಿತರಣೆ

ಆಂಧ್ರ ಪ್ರದೇಶ ರಾಷ್ಟ್ರೀಯ ಬಸವ ದಳದವರು ದೆಹಲಿಯ ಮಹಾವೀರ ವಾಟಿಕಾದಲ್ಲಿ ನಡೆದ ಸಮ್ಮೇಳನದ ದಾಸೋಹದಲ್ಲಿ ರುಚಿಕಟ್ಟಾದ ಸಿಹಿ ಬೂಂದಿ, ಕಾರಾ ಬೂಂದಿ, ಶೇವು ಮುಂತಾದುವನ್ನು ಪ್ರಸಾದಕ್ಕೆ ನೀಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಹೈದರಾವಾದಿನಿಂದ ಅತ್ಯುತ್ತಮ ಮಟ್ಟದ ಅಕ್ಕಿ-ಬೇಳೆಯನ್ನು ತಂದು ಪ್ರಸಾದದ ರುಚಿ ಹೆಚ್ಚಿಸಿದರು. ಸಮ್ಮೇಳನ ಸಮಿತಿ ವತಿಯಿಂದ ಇವರಿಗೆ ಶುಭಹಾರೈಕೆಗಳು.

-ಮಾತಾಜಿ, ನವದೆಹಲಿ

ದೆಹಲಿಯ ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್‌ನ ಶಾಖೆ

ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನದ ಯಶಸ್ಸಿನಿಂದ ಸ್ಫೂರ್ತಿಗೊಂಡಿರುವ ನಾವು ದೆಹಲಿಯಲ್ಲಿ ಬಸವ ಮಹಾಮನೆ ಚಾರಿಟಬಲ್ ಟ್ರಸ್ಟಿನ ಒಂದು ಶಾಖೆಯನ್ನು ಕಾಯಂ ಆಗಿ ಇಡಲು ನಿರ್ಧರಿಸಿದ್ದೇವೆ. ಈ ಸದ್ಯ ಕೆಳಗೆ ಕಾಣಿಸಿರುವ ಮುನೀರ್ಕಾ ಪ್ರದೇಶದಲ್ಲಿ ಬಾಡಿಗೆ ಮನೆಯಲ್ಲಿ ಕಾರ್ಯಗಳು ನಡೆಯುತ್ತವೆ.

1. ಭಾನುವಾರದ ಶರಣ ಸಂಗಮವನ್ನು ಮುನೀರ್ಕಾದಲ್ಲಿ ಬೆಳಿಗ್ಗೆ 11 ಗಂಟೆಯಿಂದ ನಡೆಸಲಾಗುವುದು.

2. ಶನಿವಾರ ಸಂಜೆ 6 ಗಂಟೆಗೆ ಒಬ್ಬೊಬ್ಬ ಶರಣರ ಮನೆಗಳಲ್ಲಿ ಬಸವ ಜ್ಯೋತಿ ಕಾರ್ಯಕ್ರಮವನ್ನು ನಡೆಸಲಾಗುವುದು.

3. ವಿಭೂತಿ, ರುದ್ರಾಕ್ಷಿ, ಇಷ್ಟಲಿಂಗಗಳು, ಧರ್ಮಪಿತ ಬಸವಣ್ಣನವರ ಭಾವಚಿತ್ರ ಕನ್ನಡ, ಹಿಂದಿ, ಇಂಗ್ಲೀಷ್, ಮರಾಠಿ ಪುಸ್ತಕಗಳು ಮಾರಾಟಕ್ಕೆ ಲಭ್ಯವಿರುತ್ತವೆ.

ದೆಹಲಿಯಲ್ಲಿ ಸಾಕಷ್ಟು ಜನ ಲಿಂಗಾಯತರು ಮತ್ತು ಬಸವಾಭಿಮಾನಿ ಲಿಂಗಾಯತೇತರರು ಇದ್ದಾರೆ. ಇವರೆಲ್ಲ ಚದುರಿದಂತೆ ಅಸಂಘಟಿತರಾಗಿ ಇದ್ದಾರೆ. ಇಲ್ಲಿಯೂ ವಿಳಾಸಗಳನ್ನು ಸಂಗ್ರಹಿಸಲಾಗುವುದು. ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ತಮಿಳು ನಾಡು ಗೋವಾ ಮುಂತಾದಲ್ಲಿ ಇರುವ ಶರಣ ಬಂಧುಗಳು ತಮ್ಮ ದೆಹಲಿ ಮತ್ತು ಹರ್ಯಾನದ ಗುಡಗಾಂವ ನಿವಾಸಿಗಳ ವಿಳಾಸಗಳನ್ನು ನಮ್ಮ ಕಾರ್ಯಾಲಯಕ್ಕೆ ಕಳಿಸುವುದೇ ಅಲ್ಲದೆ, ಅವರುಗಳಿಗೂ ಪತ್ರ ಬರೆದು ನಮ್ಮ ಕಾರ್ಯಲಯದ ವಿಳಾಸ ಮತ್ತು ಫೋನ್ ನಂಬರ್ ಕೊಡಬೇಕು.

ಹಿಂದಿ ಭಾಷೆಯಲ್ಲಿ ಕಲ್ಯಾಣ ಕಿರಣ ಮಾಸ ಪತ್ರಿಕೆಯನ್ನು ಹೊರಡಿಸಲು ನಿರ್ಧರಿಸಲಾಗಿದ್ದು ಕೂಡಲ ಸಂಗಮದಲ್ಲಿ ದಿ.11 ರಿಂದ 15ರ ವರೆಗೆ ನಡೆಯುವ 19ನೇ ಶರಣ ಮೇಳದ ಸಮಯದಲ್ಲಿ ಹಿಂದಿ(ಮತ್ತು ಮರಾಠಿ) ಪತ್ರಿಕೆಯ ಪ್ರಥಮ ಸಂಚಿಕೆಯನ್ನು ಬಿಡುಗಡೆ ಮಾಡಲಾಗುವುದು.

ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ, ಶರಣ.ಮಹಾಂತೇಶ್ ಯೋಗಾಚಾರ್ಯ ಮತ್ತು ಶರಣ ಬಸವ ಪ್ರಭು ಅವರೊಡನೆ ದೆಹಲಿಯ ಕಾರ್ಯಾಲಯವನ್ನು ನೋಡಿಕೊಳ್ಳುವರು.

ಸಂಘಟನೆಯಲ್ಲಿ ಶಕ್ತಿಯಿದೆ, ಭವಿಷ್ಯವಿದೆ. ಉದಾಸೀನ ಮಾಡದೆ ಪರಸ್ಪರ ಸಂಪರ್ಕಿಸಲು ನೆರವಾಗಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್

Basava Mahamane Charitable Trust
63A/1, 3rd floor, Laxmi Market
Munirka,
NEW DELHI - 110067
Phones :09891566242 / 09891809708
channa-swami@yahoo.com

To,   Date : 05/11/2005

Sri.S.Jaipal Reddy
Honourable Minister
Information, Broadcasting and Culture
Govt of India
NEW DELHI

Dear Sir,

Sub : A Memorandum to recognise
<u>Kannada as classical Language</u>

Kannada, one of Dravidian languages is the provincial language of Karnataka. It has got a rich literary, cultural and religious heritage. Apart from literature with literary values, Kannada has a rich religious treasure of Jain, Dasa(Vaishnav) and Vachana Sahitya.

Vachana Sahitya is a special kind of literature with rationality and reformative outlook. Lord Basavanna-a great social reformer of 12th century established a socio-spiritual academy called **Anubhava Mantapa**-an abode of spiritual experience. He invited every body without any discrimination of caste, creed, occupation, class and gender. So aspiriants of truth assembled there from all castes and all occupations, from Brahmin to Shoemaker. They were given such an education that they became able to write Vachanas- short pithy sayings pregnant with rich thoughts. Vachana literature lifts up people from the quagmire of superstitions, blind practices and casteism.

Today Vachana literature has attracted the attention and curiosity of many scholars of different countries. Because of this Vachana literature which proclaims equality of man, Fatherhood of God and Brotherhood of humanity, Kannada acquires a status of universal literature.

Now, the time has come to recognise Kannada as a classical language. First Lingayata Dharma Conference held in Delhi on 22^{nd}, 23^{rd} and 24^{th} of October, 2005 has passed a resolution to submit a memorandum to Govt of India to recognise Kannada, which is also religiously addressed as Sharana Bhasha, as CLASSICAL LANGUAGE.

We are submitting this memorandum to Govt of India, through your noble self. We earnestly hope you will take personal interest and do the needful persuation.

Thanking you,

Pujya Sri Channabasavananda Swamiji   Your's faithfully
Organiser, First Lingayata Dharma Conference
Pujya Sri Jagadguru Maata Mahadevi
Working President

ದಿನಾಂಕ : 5-11-2005

ಗೆ,

ಶ್ರೀ ಎಸ್.ಜೈಪಾಲ ರೆಡ್ಡಿ
ಸನ್ಮಾನ್ಯ ಸಚಿವರು
ವಾರ್ತಾ, ಪ್ರಸಾರ ಮತ್ತು ಸಂಸ್ಕೃತಿ ಖಾತೆ
ಭಾರತ ಸರ್ಕಾರ
ನವ ದೆಹಲಿ ಇವರಿಗೆ

ಮಾನ್ಯರೇ,

ವಿಷಯ : ಕನ್ನಡವನ್ನು ಶಾಸ್ತ್ರೀಯ ಭಾಷೆ ಎಂದು ಮಾನ್ಯತೆ ನೀಡಲು ಮನವಿ

ಕನ್ನಡವು ದ್ರಾವಿಡ ಭಾಷೆಗಳಲ್ಲಿ ಒಂದು ಪ್ರಮುಖ ಭಾಷೆಯಾಗಿದ್ದು, ಕರ್ನಾಟಕ ರಾಜ್ಯದ ಪ್ರಾದೇಶಿಕ ಭಾಷೆಯಾಗಿದೆ. ಕನ್ನಡಕ್ಕೆ ಅತ್ಯಂತ ಸಂಪದ್ಭರಿತವಾದ ಸಾಹಿತ್ಯಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಪರಂಪರೆ ಇದೆ. ಸಾಹಿತ್ಯಿಕ ಮೌಲ್ಯದಿಂದ ಕೂಡಿದ ಸಂಪತ್ತಲ್ಲದೆ ಜೈನ, ದಾಸ(ವೈಷ್ಣವ) ಮತ್ತು ವಚನ ಸಾಹಿತ್ಯದ ಧಾರ್ಮಿಕ ಹಿನ್ನೆಲೆಯ ಸಂಪತ್ತು ಕನ್ನಡದಲ್ಲಿ ಇದೆ.

ವಚನ ಸಾಹಿತ್ಯವು ಒಂದು ವಿಶೇಷವಾದ ಸಾಹಿತ್ಯ ಪ್ರಾಕಾರವಾಗಿದ್ದು, ವೈಚಾರಿಕ ಮತ್ತು ಸುಧಾರಣಾತ್ಮಕ ದೃಷ್ಟಿಕೋನ ಹೊಂದಿದೆ. ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಆಗಿ ಹೋದ ಓರ್ವ ಶ್ರೇಷ್ಠ ಸಮಾಜ ಸುಧಾರಕರು. ಅವರು ಅನುಭವ ಮಂಟಪ ಎಂಬ ಸಮಾಜೋಧಾರ್ಮಿಕ ಸಂಸ್ಥೆಯನ್ನು ಕಟ್ಟಿ, ಅದರಲ್ಲಿ ಎಲ್ಲರಿಗೂ ಯಾವುದೇ ಜಾತಿ-ಮತ-ಪಂಥ-ವರ್ಗ-ವರ್ಣ, ಸ್ತ್ರೀ ಪುರುಷ ಎಂಬ ಭೇದವಿಲ್ಲದೆ ಪ್ರವೇಶ ನೀಡಿದರು. ಹೀಗಾಗಿ ಸತ್ಯದ ಹಂಬಲಿಗರು ಎಲ್ಲ ಜಾತಿ ಮತ್ತು ಎಲ್ಲ ಉದ್ಯೋಗಗಳಿಂದ, ಪುರೋಹಿತನಿಂದ ಸಮಗಾರನವರೆಗೆ, ಬ್ರಾಹ್ಮಣನಿಂದ ಬಂಗಿಯವರೆಗೆ, ಅನುಭವ ಮಂಟಪದೊಳಗೆ ಸಮಾವೇಶವಾದರು. ಅವರಿಗೆ ಎಂತಹ ಶಿಕ್ಷಣವು ಲಭ್ಯವಾಯಿತೆಂದರೆ ಅವರೆಲ್ಲ ವಚನಗಳನ್ನು-ಮಹತ್ವಪೂರ್ಣ ವಿಚಾರಗಳಿಂದ ಕೂಡಿದ ಚಿಕ್ಕ ತಾತ್ತ್ವಿಕ ರಚನೆಗಳನ್ನು, ಬರೆಯಲು ಸಮರ್ಥರಾದರು. ವಚನ ಸಾಹಿತ್ಯವು ಮೂಢನಂಬಿಕೆ, ಅಂಧಾಚರಣೆ ಮತ್ತು ಜಾತಿವಾದದ ಕೆಸರಿನಿಂದ ಜನರನ್ನು ಹೊರತರಲು ಸಮರ್ಥವಾಗಿದೆ.

ಇಂದು ವಚನ ಸಾಹಿತ್ಯವು ವಿವಿಧ ರಾಷ್ಟ್ರಗಳ ವಿದ್ವಾಂಸರ ಗಮನ ಮತ್ತು ಕುತೂಹಲವನ್ನು ಆಕರ್ಷಿಸುತ್ತಿದೆ. ದೇವನ ಪಿತೃತ್ವ, ಮಾನವರ ಭ್ರಾತೃತ್ವ ಸರ್ವರ ಸಮಾನತೆಯನ್ನು ಪ್ರತಿಪಾದಿಸುವ ವಚನ ಸಾಹಿತ್ಯದಿಂದಾಗಿ ಕನ್ನಡವು ವಿಶ್ವಮಟ್ಟದ ಸಾಹಿತ್ಯ ಎನಿಸಿಕೊಳ್ಳುವ ಅರ್ಹತೆ ಪಡೆದಿದೆ.

ಕನ್ನಡವನ್ನು ಶಾಸ್ತ್ರೀಯ ಭಾಷೆ ಎಂದು ಮಾನ್ಯತೆ ನೀಡಲು ಇದು ಸಕಾಲವಾಗಿದೆ. ದೆಹಲಿಯಲ್ಲಿ 2005ರ ಅಕ್ಟೋಬರ್ 22,23 ಮತ್ತು 24ರಂದು ನಡೆದ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನವು ಭಾರತ ಸರ್ಕಾರವನ್ನು ಕನ್ನಡಕ್ಕೆ - ಅದು ಶರಣ ಭಾಷೆಯೂ ಆಗಿರುವುದರಿಂದ ಶಾಸ್ತ್ರೀಯ ಭಾಷೆಯ ಮನ್ನಣೆ ನೀಡಲು ಮನವಿ ಸಲ್ಲಿಸಬೇಕೆಂದು ನಿರ್ಣಯವನ್ನು ಕೈಗೊಂಡಿದೆ. ಅದರಂತೆ ನಾವು ನಿಮ್ಮ ಮೂಲಕ ಭಾರತ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದೇವೆ. ತಾವು ಈ ಬಗ್ಗೆ ವೈಯಕ್ತಿಕ ಗಮನ ತೆಗೆದುಕೊಂಡು ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಮನ್ನಣೆ ದೊರೆಯುವಲ್ಲಿ ಪ್ರಯತ್ನಿಸುತ್ತೀರೆಂದು ನಂಬಿದ್ದೇವೆ.

ಧನ್ಯವಾದಗಳೊಡನೆ

ನಿಮ್ಮ ನಂಬುಗೆಯ
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ, ಸಮ್ಮೇಳನಾಧ್ಯಕ್ಷೆ
ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ, ಸಮ್ಮೇಳನ ವ್ಯವಸ್ಥಾಪಕರು



ರಾಷ್ಟ್ರದ ರಾಜಧಾನಿಯಲ್ಲಿ ಮೊಳಗಿದ ಕನ್ನಡ ಡಿಂಡಿಮ ಸಮ್ಮೇಳನದ ಮುನ್ನಾ ದಿನ ದಿ.21ರಂದು ವಚನ ಸಾಹಿತ್ಯದ ವಿವಿಧ ಆಯಾಮಗಳು ಬಗೆಗಿನ ಕನ್ನಡ ವಿಚಾರ ಸಂಕಿರಣ



ಉಭಯ ಜಗದ್ಗುರುಗಳ ದಿವ್ಯ ಸನ್ನಿಧಿಯಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಸಿಕೊಡುತ್ತಿರುವ ಶರಣೆಯರಾದ ಜಯಶ್ರೀ.ಬ.ಶಿವಪೂರ, ದೇವಿಕಾ ಶರಣಪ್ಪ ಹಾಗೂ ಕೆ.ವೀರಣ್ಣ ಲಿಂಗಾಯತ್.



ವಚನ ಸಾಹಿತ್ಯದ ವಿವಿಧ ಆಯಾಮಗಳ ಅರ್ಥಪೂರ್ಣ ವಿಶ್ಲೇಷಣೆ: ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ||ಪುರುಷೋತ್ತಮ ಬಿಳಿಮಲೆ ಅವರಿಂದ




ಶ್ರೀ ಗುರು ಬಸವಣ್ಣನವರ ಕೃಪಾ ಛತ್ರದಲ್ಲಿ ಕಂಗೊಳಿಸುತ್ತಿರುವ ಪೂಜ್ಯತ್ರಯರು.



ಹಚ್ಚೇವು ಕನ್ನಡದ ದೀಪ - ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ನಂತರ ಪೂಜ್ಯ ಮಾತಾಜಿಯವರಿಂದ ಪ್ರಸ್ತಾವನೆ.



ವಿಚಾರ ಸಂಕಿರಣದಲ್ಲಿ ಪ್ರಸ್ತಾಪವಾಗುತ್ತಿರುವ ವಿಷಯಗಳನ್ನು ಏಕಾಗ್ರಚಿತ್ತದಿಂದ ಆಲಿಸುತ್ತಿರುವ ಶರಣ-ಶರಣೆಯರು.



ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನದ ಶುಭಾರಂಭ ಜಗದ್ಗುರು ದ್ವಯರಿಂದ ಧರ್ಮಪಿತ ಬಸವೇಶ್ವರರ ಪೂಜೆ.



ರಾಷ್ಟ್ರದ ರಾಜಧಾನಿಯಲ್ಲಿ ಮೊದಲ ದಿನ ಆರೋಹಣಗೊಂಡ ಬಸವ ಧ್ವಜ- ವಿಶ್ವದಾದ್ಯಂತ ಲಿಂಗಾಯತ ಧರ್ಮ ಪ್ರಸಾರಕ್ಕೆ ನಾಂದಿ(ಧ್ವಜಾರೋಹಣ : ಜಗದ್ಗುರು ಮಾತೆ ಗಂಗಾದೇವಿಯವರಿಂದ)



ಕೇಂದ್ರ ಸಾರಿಗೆ ಹೆದ್ದಾರಿ ಹಾಗೂ ಹಡಗು ನಿರ್ವಹಣಾ ಸಚಿವ ಕೆ.ಎಚ್.ಮುನಿಯಪ್ಪನವರಿಂದ ಜ್ಯೋತಿ ಬೆಳಗಿಸುವದರ ಮೂಲಕ ಐತಿಹಾಸಿಕ ಸಮ್ಮೇಳನಕ್ಕೆ ಚಾಲನೆ.



ಸಿಖ್ ಧರ್ಮೀಯ ನೇತಾರ ಶ್ರೀ ಸತ್ನಾಮ್ ಸಿಂಗ್‌ರವರಿಂದಲೂ ಬಸವ ಜ್ಯೋತಿ ಪ್ರಜ್ವಲನ.



ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರಿಂದ ಪ್ರಸ್ತಾವನೆ ಚಿತ್ರದಲ್ಲಿ ಶ್ರೀ ಜಗದ್ಗುರು ಮಾತೆ ಗಂಗಾದೇವಿ. ಕೇಂದ್ರ ಸಚಿವ ಕೆ.ಹೆಚ್.ಮುನಿಯಪ್ಪ ಲೋಕಸಭಾ ಸದಸ್ಯ ಮಾಜಿ ಉಪಸಭಾಪತಿ ಎಸ್. ಮಲ್ಲಿಕಾರ್ಜುನಯ್ಯ.



ಸಿಖ್ ಧರ್ಮೀಯ ನೇತಾರ ಶ್ರೀ ಸತ್ನಾಮ್ ಸಿಂಗ್ ಅವರಿಂದ ಲಿಂಗಾಯತಿಸಮ್ ಪುಸ್ತಕ ಬಿಡುಗಡೆ ಚಿತ್ರದಲ್ಲಿ ಸಮ್ಮೇಳನ ಸಂಚಾಲಕರಾದ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ



ಸಂಸತ್ ಭವನದಲ್ಲಿ ಶ್ರೀಗುರು ಬಸವೇಶ್ವರರ ಪ್ರತಿಮೆ ಸ್ಥಾಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ ತುಮಕೂರು ಲೋಕಸಭಾ ಕ್ಷೇತ್ರದ ಸದಸ್ಯ ಮಾಜಿ ಉಪ ಸಭಾಪತಿ ಎಸ್.ಮಲ್ಲಿಕಾರ್ಜುನಯ್ಯನವರಿಂದ ಅಧ್ಯಕ್ಷೀಯ ಭಾಷಣ.



ಪೂಜ್ಯಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ರೂಪಿಸಿದ ಸರ್ವ ಧರ್ಮ ಧ್ವಜಾರೋಹಣ ದೆಹಲಿಯ ಕ್ರೈಸ್ತ ಪಾದ್ರಿ ರೆವರೆಂಡ್ ಫರ್ನಾಂಡೀಸ್-ಡಿಸೋಜಾ ಅವರಿಂದ.



ಕರ್ತನ ಸೃಷ್ಟಿಯೊಳ್ ಹುಟ್ಟಿಹ ನಾನು ಕರ್ತಗೆ ನಿಷ್ಠೆಯಿಂ ವಂದಿಪೆನು–ಸರ್ವ ಧರ್ಮೀಯ ನೇತಾರರಿಂದ ಸೃಷ್ಟಿಕರ್ತ ಲಿಂಗದೇವನಿಗೆ ಭಕ್ತಿಪೂರ್ವಕ ನಮನ.



ಪೂಜ್ಯ ಶ್ರೀ ಮಾತೆ ಮಹಾದೇವಿಯವರಿಗೆ ಬಾಂಧವ್ಯದ ಪ್ರತೀಕವಾಗಿ ಸಿಖ್ ಧರ್ಮ ಲಾಂಛನ ಹೊಂದಿರುವ ಕೇಸರಿ ವಸ್ತ್ರವನ್ನು ಗೌರವದಿಂದ ತೊಡಿಸುತ್ತಿರುವ ಸಿಖ್ ಧರ್ಮೀಯ ನೇತಾರ ಸಪ್ತಾಮ್ ಸಿಂಗ್‌ರವರು.



ಬಹುವರ್ಣಗಳ ಪುಷ್ಪಗಳಿಂದ ಉದ್ಯಾನವನ ಕಂಗೊಳಿಸುವಂತೆ ಬಹುಧರ್ಮೀಯರನ್ನು ಹೊಂದಿದ ಭಾರತ ಶೋಭಾಯಮಾನ–ಪೂಜ್ಯ ಮಾತಾಜಿಯವರಿಂದ ಸಂದೇಶ



ಧ್ವಜಾರೋಹಣ ಸಂಧರ್ಭದಲ್ಲಿ ಶರಣ ಶರಣೆಯರಿಂದ ಧ್ವಜ ಗೀತೆ.



ಸಾಮೂಹಿಕ ಇಷ್ಟಲಿಂಗಾರ್ಚನಾ ಸಮಾರಂಭ ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷ ಎನ್.ಪುಟ್ಟರುದ್ರ ಅವರಿಂದ ಸ್ವಾಗತ ಭಾಷಣ.



ಭಾರತೀಯ ಧರ್ಮಗಳ ಮಹಾ ಸಂಘ'ಜಿ ವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವ ಕೇಂದ್ರ ಯೋಜನಾ ಸಚಿವ ಶರಣ ಎಂ.ವಿ.ರಾಜಶೇಖರನ್.



ಭಾರತೀಯ ಧರ್ಮಗಳ ಮಹಾಸಂಘದ ನಾಮ ಫಲಕ ಅನಾವರಣ



ಜೈನ, ಲಿಂಗಾಯತ, ಹಿಂದೂ,ಸಿಖ್, ಬೌದ್ಧ ಧರ್ಮಗಳು ಸೇರಿ ಭಾರತೀಯ ಸಂಸ್ಕೃತಿಯ ಸಂರಕ್ಷಣೆಗೆ ಸಮರ್ಪಣೆಗೊಳ್ಳುತ್ತಿರುವ ಭಾರತೀಯ ಧರ್ಮಗಳ ಮಹಾಸಂಘ.



ಪರಮ ಪೂಜ್ಯ ಮಾತಾಜಿಯವರಿಂದ ಇಷ್ಟಲಿಂಗ ಪೂಜಾ ಪ್ರಾತ್ಯಕ್ಷಿಕೆ.



ಇಷ್ಟಲಿಂಗಾರ್ಚನೆಯಲ್ಲಿ ಮಗ್ನರಾಗಿರುವ ಶರಣ ಶರಣೆಯರು.



ರಾಜಧಾನಿಯಲ್ಲಿ ಮೆರೆದ ಬಸವನಾ ಮುದ್ರೆ ಲಿಂಗಾಯತ ಧರ್ಮ ಸಮ್ಮೇಳನದ ಅಂಗವಾಗಿ ಐತಿಹಾಸಿಕ ಶೋಭಾಯಾತ್ರೆ




ಕಟ್ಟುವೆವು ನಾವ್ ಕಟ್ಟುವೆವು ಕಲ್ಯಾಣ ರಾಜ್ಯ ಕಟ್ಟುವೆವು....... ಘೋಷಣೆಯೊಂದಿಗೆ ಮೆರವಣಿಗೆಗೆ ಸಾಗಿದ ಬೃಹತ್ ಸಂಖ್ಯೆಯ ಶರಣ-ಶರಣೆಯರು.




ಸಾಲಂಕೃತ ರಥದಲ್ಲಿ ವಿರಾಜಮಾನರಾಗಿರುವ ಪೂಜ್ಯ ಮಾತಾಜಿ, ಪೂಜ್ಯ ಗಂಗಾ ಮಾತಾಜಿ, ಪೂಜ್ಯ ಅಲ್ಲಮಪ್ರಭು ಸ್ವಾಮೀಜಿ, ಪೂಜ್ಯ ಬಸವಕುಮಾರ ಸ್ವಾಮೀಜಿ ಮತ್ತು ಪೂಜ್ಯ ಚನ್ನಬಸವಾನಂದ ಸ್ವಾಮೀಜಿ



ರಾಜಧಾನಿಯಲ್ಲಿ ಗಜರಾಜನ ಮೇಲೆ ವಚನ ಸಾಹಿತ್ಯದ ಭವ್ಯ ಮೆರವಣಿಗೆ.



ದಿ.24ರಂದು ದೆಹಲಿಯ ಮಹಾವೀರ ವಾಟಿಕಾ ಸಮುದಾಯ ಭವನದಿಂದ ಚಾಂದನೀ ಚೌಕದಲ್ಲಿರುವ ಶಿಷ್‌ಗಂಜ್ ಗುರುದ್ವಾರದವರೆಗೆ ಮೆರವಣಿಗೆ ಹೊರಟಿತು.



ಹೈದರಾಬಾದಿನಲ್ಲಿ ಬಸವ ಮಂಟಪ ಉದ್ಘಾಟನೆಯಂದು
ಶರಣ ದಂಪತಿಗಳಾದ ವಿಜಯಕುಮಾರರವರಿಂದ ಬಸವಣ್ಣನವರ ಪೂಜೆ



ಪೂಜ್ಯ ಮಾತಾಜಿಯವರಿಂದ ಪ್ರಾರ್ಥನಾ ಕಾರ್ಯಕ್ರಮದ ನಂತರ ಅರಣ್ಯ ಇಲಾಖೆಯ ಸಚಿವರಾದ
ಗುರುಪಾದಪ್ಪ ನಾಗಮಾರಪಳ್ಳಿ ಇವರಿಂದ ಭಾಷಣ

ರಾಷ್ಟ್ರ ರಾಜಧಾನಿಯಲ್ಲಿ - ಕನ್ನಡ ಡಿಂಡಿಮ

ವಿಶ್ವಸಾಹಿತ್ಯಕ್ಕೆ ವಚನ ಸಾಹಿತ್ಯ ಶ್ರೇಷ್ಠ ಕೊಡುಗೆ

ವಿಶ್ವ ಸಾಹಿತ್ಯಕ್ಕೆ ಕನ್ನಡದ ಕೊಡುಗೆ ವಚನ ಸಾಹಿತ್ಯ. ವಚನಗಳೆಂಬ ವಿನೂತನ ರಚನಾ ಶೈಲಿ ರೂಪುಗೊಂಡಿದ್ದೇ ಕಲ್ಯಾಣದ ಅನುಭವ ಮಂಟಪದಲ್ಲಿ ಪ್ರಥಮ ಜಗದ್ಗುರು ಅಲ್ಲಮ ಪ್ರಭು ದೇವರ ಅಧ್ಯಕ್ಷತೆಯಲ್ಲಿ ಶ್ರೀ ಗುರು ಬಸವೇಶ್ವರರ ನೇತೃತ್ವದಲ್ಲಿ ಆಧ್ಯಾತ್ಮಿಕ ಸಂಸತ್ತಿನೋಪಾದಿಯಲ್ಲಿ ಕಲಾಪಗಳನ್ನು ನಡೆಸಿದ ಅನುಭವ ಮಂಟಪದ ಶರಣ ಸಂಕುಲದ ಚಿಂತನ ಮಂಥನ-ಅನುಭವ-ಅನುಭಾವಗಳಿಂದ ಹೊರ ಹೊಮ್ಮಿದ ಗದ್ಯವೂ ಅಲ್ಲದ ಪದ್ಯವೂ ಅಲ್ಲದ ವಿಶೇಷ ರೀತಿಯ ಬರವಣಿಗೆ ಅಂದಿನ ಕಾಲದಲ್ಲಿ ಶ್ರೀ ಮಹಾ ಗುರು ಬಸವೇಶ್ವರರ-ಸಮಾನತಾ ಕ್ರಾಂತಿಗೆ ರಂಗೇರಿಸಿತು ಎಂದು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಅಭಿಪ್ರಾಯಪಟ್ಟರು.

ಅವರು ಲಿಂಗಾಯತ ಧರ್ಮ ಸಮ್ಮೇಳನದ ಮುನ್ನಾ ದಿನದಂದು ಸಾಯಂಕಾಲ ಮಹಾವೀರ ವಾಟಿಕಾದಲ್ಲಿ ಏರ್ಪಡಿಸಿದ್ದ ವಚನ ಸಾಹಿತ್ಯದ ವಿವಿಧ ಆಯಾಮಗಳು ಬಗೆಗಿನ ವಿಚಾರ ಸಂಕಿರಣದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತ, ಪ್ರಗತಿಪರ ವಿಚಾರಗಳನ್ನು ಪ್ರಸರಣಗೊಳಿಸಿ ಪುರೋಹಿತ ಶಾಹಿಗಳಿಗೆ ಮಾರಕವಾಗಿ ಪರಿಣಮಿಸಿದ ವಚನಗಳಿಗೆ ಜಾತಿವಾದಿಗಳಿಂದ ತೀವ್ರ ಸ್ವರೂಪದ ತೊಂದರೆ ಬಂದಾಗ ಸಹ್ಯಾದ್ರಿಯ ದುರ್ಗಮ ಅರಣ್ಯ ಪ್ರದೇಶದಲ್ಲಿರುವ ಉಳವಿಯ ಗವಿಗಳಲ್ಲಿ ಸಾಹಿತ್ಯವನ್ನು ಶ್ರೀ ಚನ್ನಬಸವಣ್ಣನವರ ನೇತೃತ್ವದಲ್ಲಿ ಶರಣರು ಸಂರಕ್ಷಿಸಿದರು ಎಂದೂ ಪೂಜ್ಯ ಮಾತಾಜಿ ಸ್ಮರಿಸಿಕೊಂಡರು.

ವಿಚಾರ ಸಂಕಿರಣವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ||ಪುರುಷೋತ್ತಮ ಬಿಳಿಮಲೆಯವರು ಮಾತನಾಡಿ ಕಲ್ಯಾಣದಲ್ಲಿ ಶ್ರೀ ಗುರು ಬಸವೇಶ್ವರರ ನೇತೃತ್ವದಲ್ಲಿ ಜರುಗಿದ ಜಾತಿ ನಿರ್ಮೂಲನಾ ಕ್ರಾಂತಿ ಈ ದೇಶದಲ್ಲಿಯೇ ಪ್ರಪ್ರಥಮವಾದುದು. ವರ್ಣ, ವರ್ಗ, ಜಾತಿ ಭೇದ ದೂರೀಕರಿಸಿ ಸಮಾಜವಾದಿ ಸಮಾಜ ರೂಪಿಸಿದ ಅವರು ದಲಿತ ಹಾಗೂ ಸ್ತ್ರೀ ವಿಮೋಚನೆಯ ಹರಿಕಾರ ಎಂದೂ ಬಣ್ಣಿಸಿದರು.

ಯುವ ನ್ಯಾಯವಾದಿ ಕೆ.ಎಸ್.ಕೋರಿಶೆಟ್ಟರ ಅವರು 'ವಚನ ಸಾಹಿತ್ಯದಲ್ಲಿ ವಿವಿಧ ಆಯಾಮಗಳು' ವಿಷಯದ ಬಗ್ಗೆ ಉಪನ್ಯಾಸ ನೀಡಿ, ಭಾರತದ ಸಂವಿಧಾನದಲ್ಲಿರುವ ಎಲ್ಲ ಅಂಶಗಳೂ ವಚನ ಸಾಹಿತ್ಯದಲ್ಲಿವೆ. ಶ್ರೀ ಗುರು ಬಸವಣ್ಣನವರು ಹಾಗೂ ಸಮಕಾಲೀನ ಶರಣರ ವಚನಗಳಲ್ಲಿ ಸಮಾಜವಾದಿ ಚಿಂತನೆ ಪ್ರಖರವಾಗಿ ಗೋಚರಿಸುತ್ತದೆ, ಶಿವಪಂಚಾಯತಗಳಾದ ಅನ್ನ, ಅರಿವು, ಅರಿವೆ, ಆಶ್ರಯ, ಔಷಧ ಇವುಗಳು ಪ್ರತಿಯೊಬ್ಬರಿಗೂ ಭೇದವಿಲ್ಲದೇ ದೊರೆಯಬೇಕು. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಸರ್ವೋದಯ ತತ್ವವನ್ನೇ ವಚನಗಳು ಧ್ವನಿಸುತ್ತವೆ ಎಂದು ನುಡಿದರು.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ, ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮೀಜಿ ನೇತೃತ್ವ ವಹಿಸಿದ್ದರು.

ಭಾರತದಲ್ಲಿರುವ ಅಮೆರಿಕಾ ರಾಯಭಾರಿ ಕಛೇರಿಯ ಗ್ರಂಥಾಲಯಾಧಿಕಾರಿ ಸೋಮನಾಥ ಬಿರಾದಾರ, ರಾಜ್ಯ ಸಭಾ ಉಪ ಸಭಾಪತಿಯವರ ಆಪ್ತ ಸಹಾಯಕ ವೈಜನಾಥ ಬಿರಾದಾರ ದೆಹಲಿ ಪೋಲೀಸ್ ಇಲಾಖೆ ಅಧಿಕಾರಿ ಮೋಹನ ಮನಗೂಳಿ ಉಪಸ್ಥಿತರಿದ್ದರು.

ರಾಜ್ಯ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಶರಣ.ಕೆ. ವೀರಣ್ಣ ಲಿಂಗಾಯತ, ಶರಣೆ.ಜಯಶ್ರೀ ಶಿವಪುರ, ಶರಣೆ. ದೇವಿಕಾ ಶರಣಪ್ಪ ಸಾಮೂಹಿಕ ಪ್ರಾರ್ಥನೆ ನಡೆಸಿಕೊಟ್ಟರು.

ಸಂತೋಷ ಭಾವಿಕಟ್ಟಿ
ದಾವಣಗೆರೆ.

ಅದ್ಭುತ ಯಶಸ್ಸಿನ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನ

ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕ ಮಾನ್ಯತೆ

ಕೇಂದ್ರ ಸರ್ಕಾರಕ್ಕೆ ಪೂಜ್ಯ ಮಾತಾಜಿ ಆಗ್ರಹ

ನಮ್ಮೆಲ್ಲರ ನಿರೀಕ್ಷೆಯಂತೆ ರಾಜಧಾನಿ ನವದೆಹಲಿಯಲ್ಲಿ ನಡೆದ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನವು ಅದ್ಭುತ ಯಶಸ್ಸು ಕಂಡಿತು.

ನಮ್ಮ ನಾಡಿನಿಂದ ಮಾತ್ರವಲ್ಲ ನೆರೆಯ ತಮಿಳು ನಾಡು, ಆಂಧ್ರ ಪ್ರದೇಶ, ಮಹಾರಾಷ್ಟ್ರಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಶರಣ ಶರಣೆಯರು ಶಿಸ್ತಿನಿಂದ ಧ್ವಜ ವಂದನೆ, ಸಾಮೂಹಿಕ ಪ್ರಾರ್ಥನೆ, ಚಿಂತನ ಗೋಷ್ಠಿ, ಬೃಹತ್ ಶೋಭಾ ಯಾತ್ರೆಯಲ್ಲಿ ಸಡಗರ ಸಂಭ್ರಮಗಳಿಂದ ಭಾಗವಹಿಸುವುದರ ಮೂಲಕ ದೆಹಲಿ ಸಮ್ಮೇಳನ ಲಿಂಗಾಯತ ಧರ್ಮದ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಡಲಿದೆ.

ಲಿಂಗಾಯತ ಧರ್ಮವು ಜಾಗತಿಕ ಧರ್ಮಗಳ ಸಾಲಿನಲ್ಲಿ ತಲೆಯೆತ್ತಿ ನಿಲ್ಲಬೇಕು. ಈ ಧರ್ಮಕ್ಕೆ ಸಂವಿಧಾನ ಬದ್ಧ ಮಾನ್ಯತೆ ದೊರೆಯಬೇಕು ಎಂಬುದು ಸಮ್ಮೇಳನದ ಸೂತ್ರಧಾರರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದೃಢ ಸಂಕಲ್ಪ. ಈ ದಿಶೆಯಲ್ಲಿ ಇಟ್ಟಿರುವ ಗಂಭೀರ ಹೆಜ್ಜೆಯೇ ಪ್ರಸ್ತುತ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನ. ಇದರೊಂದಿಗೆ ಭಾರತದ ಉತ್ತರ ಭಾಗದಾದ್ಯಂತ ಮಾತ್ರವಲ್ಲ ವಿಶ್ವವ್ಯಾಪಿಯಾಗಿ ಶ್ರೀ ಗುರು ಬಸವಣ್ಣನವರು ಲೋಕಕ್ಕೆ ನೀಡಿದ ಲಿಂಗಾಯತ ಧರ್ಮ ಪ್ರಚಾರಕ್ಕೆ ಸಮ್ಮೇಳನವು ನಾಂದಿಯಾಗಿದೆ.

ಸಮಗ್ರ ವರದಿ

- ಶರಣ.ಕರಿಬಸಪ್ಪ ಕೋರಿಶೆಟ್ಟರ

ಕೇಂದ್ರ ಸಚಿವ ಕೆ.ಹೆಚ್. ಮುನಿಯಪ್ಪ ಪ್ರತಿಪಾದನೆ

ಭಾರತೀಯ ಭಾಷೆಗಳಿಗೆ ವಚನ ಸಾಹಿತ್ಯದ ಅನುವಾದ ತುರ್ತು ಅಗತ್ಯ

"ವಿಶ್ವಗುರು ಬಸವೇಶ್ವರರ ಮಾನವತಾವಾದದ ವಿಚಾರಗಳನ್ನು ನಾವಿಂದು ಜಾರಿಯಲ್ಲಿ ತಂದಿದ್ದರೆ ಈ ದೇಶದಲ್ಲಿ ಯಾವುದೇ ರೀತಿಯ ಕೋಮು ಗಲಭೆಗಳು ನಡೆಯುತ್ತಿರಲಿಲ್ಲ. ಎಲ್ಲ ಧರ್ಮದವರನ್ನು, ಎಲ್ಲ ಜಾತಿಯವರನ್ನು ಯಾವುದೇ ಭೇದವಿಲ್ಲದೇ ನಮ್ಮವರೆಂದು ಭಾರತೀಯರು ಆದರಿಸಿದಾಗ ಸಮೃದ್ಧ, ಶಾಂತ, ಸದೃಢ ರಾಷ್ಟ್ರವನ್ನು ನಾವಿಂದು ಕಟ್ಟಬಹುದಾಗಿದೆ. ಸರ್ವರಲ್ಲೂ ದೇವರನ್ನು ಕಂಡು ಆದರಿಸುವ ಬಸವಣ್ಣನವರ ಹೃದಯ ವೈಶಾಲ್ಯತೆ ನಮಗೆ ಆದರ್ಶವಾಗಿದೆ.

ಬಸವಣ್ಣನವರು ಉತ್ತರ ಭಾರತದಲ್ಲಿ ಜನಿಸಿದ್ದರೆ ಅವರ ವಿಚಾರಗಳು ಎಲ್ಲೆಡೆ ಪ್ರಚಾರಗೊಂಡು ಅವರು ಇಡೀ ವಿಶ್ವದಲ್ಲಿಯೇ ಅತಿ ಉನ್ನತ ದಾರ್ಶನಿಕರೆನಿಸಿಕೊಳ್ಳುತ್ತಿದ್ದರು. ಆದರೆ ಅವರು ರೂಪಿಸಿದ ವಚನ ಸಾಹಿತ್ಯವು ಬೇರೆ ಬೇರೆ ಭಾಷೆಗಳಿಗೆ ನಿರೀಕ್ಷಿತ ಮಟ್ಟದಲ್ಲಿ ಭಾಷಾಂತರ ಹೊಂದಿ ಪ್ರಚಾರ ಕಾಣದೇ ಕೇವಲ ಕನ್ನಡದಲ್ಲಿಯೇ ಉಳಿಯುವಂತಾಗಿದೆ. ಈಗಲಾದರೂ ಭಾರತದ ಎಲ್ಲ ಭಾಷೆಗಳಿಗೂ ವಚನ ಸಾಹಿತ್ಯವನ್ನು ಅನುವಾದಿಸುವುದು ತುರ್ತು ಅಗತ್ಯವಾಗಿದೆ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಅತ್ಯಂತ ಸಾಹಸ, ಧೈರ್ಯದಿಂದ ಬಸವಣ್ಣನವರ ಸಾಹಿತ್ಯವನ್ನು ಬೇರೆ-ಬೇರೆ ಸ್ಥಳಗಳಲ್ಲಿ ಪ್ರಚಾರ ಮಾಡುತ್ತಿರುವುದು ನಮಗೆಲ್ಲಾ ಅಭಿಮಾನದ ಸಂಗತಿಯಾಗಿದೆ, ಅವರ ಈ ಮಹಾನ್ ಕಾರ್ಯಕ್ಕೆ ನಾವೆಲ್ಲಾ ಸಹಕಾರಿಯಾಗಿ ನಿಲ್ಲಬೇಕು. ಬಸವಣ್ಣನವರು ರೂಪಿಸಿದ ವಿಶ್ವ ಧರ್ಮದ ಸಂದೇಶವು ಕೇವಲ ಉತ್ತರ ಭಾರತ ಮಾತ್ರವಲ್ಲ ಇಡೀ ವಿಶ್ವದಲ್ಲಿಯೇ ಅತ್ಯಂತ ಯಶಸ್ವಿಯಾಗಿ ಪ್ರಚಾರಗೊಳ್ಳಬೇಕಾಗಿದೆ." ಎಂದು ಕೇಂದ್ರ ಭೂ ಸಾರಿಗೆ, ಹೆದ್ದಾರಿ ಮತ್ತು ಹಡಗು ನಿರ್ವಹಣಾ ಸಚಿವ ಶ್ರೀ ಕೆ.ಹೆಚ್. ಮುನಿಯಪ್ಪನವರು ವಿಶ್ಲೇಶಿಸಿದರು. ಅವರು ರಾಜಧಾನಿ ದೆಹಲಿಯ ದರಿಯಾ ಗಂಜ್ ಪ್ರದೇಶದಲ್ಲಿನ ಮಹಾವೀರ್ ವಾಟಿಕಾ ಸಮುದಾಯ ಭವನದ ಆವರಣದ ಅಲಂಕೃತ ಭವ್ಯ ವೇದಿಕೆಯಲ್ಲಿ

ಲಿಂಗಾಯತ ಧರ್ಮ ಮಹಾಸಭಾ ಹಾಗೂ ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 3 ದಿನಗಳ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡುತ್ತಿದ್ದರು.

12ನೇ ಶತಮಾನದಲ್ಲಿ ಜರುಗಿದ ಕಲ್ಯಾಣ ಕ್ರಾಂತಿ ಈ ವಿಶ್ವವು ಕಂಡ ಅದ್ಭುತ ಘಟನೆ ಎಂದು ನುಡಿದ ಸಚಿವರು ಈ ದೇಶದ ನೆಲದಿಂದ ಜಾತೀಯತೆ, ಅಸಮಾನತೆ, ಲಿಂಗಭೇದ, ವರ್ಗಭೇದ ನಿರ್ಮೂಲನೆಯಾಗಲೇಬೇಕೆಂದು ಪಣತೊಟ್ಟು ಹೋರಾಡಿದ ಶರಣರಿಗೆ ಪುರೋಹಿತ ಶಾಹಿಗಳು ನೀಡಿದ ಚಿತ್ರ ಹಿಂಸೆ ನೆನಪಿಸಿಕೊಂಡರೆ ವೇದನೆಯಾಗುತ್ತದೆ ಎಂದರು.

ಬಸವ ಧರ್ಮವು, ಸರ್ವ ಧರ್ಮಗಳಿಗೂ ತಾಯಿ ಧರ್ಮವಾಗಿದೆ. ಬಸವ ತತ್ತ್ವದಿಂದ ಮಹಾತ್ಮ ಗಾಂಧೀಜಿಯವರು ಪ್ರಭಾವಿತರಾಗಿದ್ದರಿಂದಲೇ ಅವರು ಅಸ್ಪೃಶ್ಯೋದ್ಧಾರದ ಕಾರ್ಯ ಕೈಗೊಂಡರು.

ನಾನು ಮಹಾತ್ಮ ಬಸವಣ್ಣನವರು ಮತ್ತು ಮಹಾತ್ಮ ಗಾಂಧೀಜಿಯವರ ಅಭಿಮಾನಿ ಮತ್ತು ಅನುಯಾಯಿ. ಇಷ್ಟು ದೂರದ ದೆಹಲಿಯಲ್ಲಿ ಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವದಲ್ಲಿ ಇಷ್ಟೊಂದು ಸಹಸ್ರ ಸಂಖ್ಯೆಯಲ್ಲಿ ಭಕ್ತ ವೃಂದ ಸಮಾವೇಶಗೊಂಡಿದ್ದು, ನಮಗೆ ನಿಜಕ್ಕೂ ಹರ್ಷ ತಂದಿದೆ. ಎಂದು ಮುನಿಯಪ್ಪನವರು ನುಡಿದರು.

ದಿವ್ಯ ಸಾನಿಧ್ಯ ವಹಿಸಿದ್ದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಆಶೀರ್ವಚನ ನೀಡಿ, 12 ನೇ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಕ್ರಾಂತಿ ವಿಶ್ವದ ಇತಿಹಾಸದಲ್ಲಿಯೇ ಅತ್ಯಂತ ಮಹತ್ವದ ಘಟನೆ, ಅಸಮಾನತೆ ಮಡುಗಟ್ಟಿದ್ದ ಭಾರತದ ಭೂಮಿಯಲ್ಲಿ ಸಮಾನತೆಯ ಧ್ವಜ ಹಾರಿಸುವುದಕ್ಕಾಗಿ ಧರ್ಮಗುರು ಬಸವಣ್ಣನವರ ನೇತೃತ್ವದಲ್ಲಿ ಬ್ರಾಹ್ಮಣ ವಧು-ಸಮಗಾರ ವರರ ಮಧ್ಯೆ ನಡೆದ ವರ್ಣಾಂತರ ಮದುವೆ ಭಾರತ ಚರಿತ್ರೆಯಲ್ಲಿ ಪ್ರಪ್ರಥಮವಾದುದು, ಅನುಭವ ಮಂಟಪದಲ್ಲಿ ನೆರವೇರಿದ ಈ ಪ್ರತಿಲೋಮ ವಿವಾಹವನ್ನು ನೆಪ ಮಾಡಿಕೊಂಡು ಪುರೋಹಿತ ಶಾಹಿಗಳು ಶರಣರಿಗೆ ಚಿತ್ರ ಹಿಂಸೆ ನೀಡುತ್ತಾರೆ. ಆ ಸಂದರ್ಭದಲ್ಲಿ ವಚನ ಸಾಹಿತ್ಯದ ರಕ್ಷಣೆಗಾಗಿ ಶ್ರೀ ಚನ್ನಬಸವಣ್ಣನವರ ನೇತೃತ್ವದಲ್ಲಿ ಸಹ್ಯಾದ್ರಿ ಪ್ರರ್ವತದ ದಟ್ಟ ಅರಣ್ಯ ಪ್ರದೇಶದಲ್ಲಿ ಚಳಿ, ಮಳೆ, ಗಾಳಿ ಸಹಿಸಿಕೊಂಡು ಶರಣರು ಸಾಹಿತ್ಯವನ್ನು ರಕ್ಷಿಸುತ್ತಾರೆ. ಇಂತಹ ಅಮೂಲ್ಯ ಸಾಹಿತ್ಯವನ್ನು ಜೀವಾಳವಾಗಿ ಹೊಂದಿರುವ ಲಿಂಗಾಯತ ಧರ್ಮಕ್ಕೆ ವಿಶ್ವ ಮಟ್ಟದ ಮಾನ್ಯತೆ ಪಡೆಯುವುದು ಮಾನವ ಸಮಾಜದ ಹಿತ ದೃಷ್ಟಿಯಿಂದ ತುರ್ತು ಅಗತ್ಯವಾಗಿದೆ. ಆ ದಿಶೆಯಲ್ಲಿ ಈ ಸಮ್ಮೇಳನ ಒಂದು ಮಹತ್ವದ ಹೆಜ್ಜೆ ಎಂದು ನುಡಿದರು.

ಮುಖ್ಯ ಅತಿಥಿಯಾಗಿದ್ದ ತುಮಕೂರು ಕ್ಷೇತ್ರದ ಲೋಕಸಭಾ ಸದಸ್ಯ ಹಾಗೂ ಮಾಜಿ ಉಪಸಭಾಪತಿ ಎಸ್.ಮಲ್ಲಿಕಾರ್ಜುನಯ್ಯನವರು ಮಾತನಾಡಿ ಸಂಸತ್ ಆವರಣದಲ್ಲಿ ಬಸವೇಶ್ವರರ ಪ್ರತಿಮೆಯನ್ನು ಸ್ಥಾಪಿಸುವ ಸಂದರ್ಭದಲ್ಲಿ ಉತ್ತರ ಭಾರತದ ಸಂಸತ್ ಸದಸ್ಯರಿಗೆ ಬಸವಣ್ಣನವರ ಕ್ರಾಂತಿಯನ್ನು ತಿಳಿಸಿದಾಗ ಅವರೆಲ್ಲ ಪ್ರಭಾವಿತಗೊಂಡು ಇಂತಹ ಮಹಾನ್ ದಾರ್ಶನಿಕ ವ್ಯಕ್ತಿಯ ತತ್ತ್ವಗಳನ್ನು ನೀವೇಕೆ ಕರ್ನಾಟಕದ ಹೊರಗೆ ಪ್ರಚಾರ ಮಾಡಲಿಲ್ಲ? ಎಂದು ಪ್ರಶ್ನಿಸಿದ್ದನ್ನು ಸ್ಮರಿಸಿಕೊಂಡರಲ್ಲದೆ, ದೆಹಲಿಯ ಮಧ್ಯವರ್ತಿ ಸ್ಥಳದಲ್ಲಿ ಬಸವೇಶ್ವರರ ಬೃಹತ್ ಪ್ರತಿಮೆ, ಮುಖ್ಯ ರಸ್ತೆಗೆ ಬಸವೇಶ್ವರರ ಹೆಸರನ್ನು ಇಡಬೇಕೆಂಬ ಜಗದ್ಗುರು ಮಾತೆ ಮಹಾದೇವಿಯವರ ಸೂಚನೆಗೆ ಬೆಂಬಲಿಸಿ ಪೂಜ್ಯ ಮಾತಾಜಿಯವರ ಸೂಚನೆಯಂತೆ ಆ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸುವುದಾಗಿ ಸಭೆಯಲ್ಲಿ ಭರವಸೆ ನೀಡಿದರು.

ದೆಹಲಿಯ ಶೀಸ್ ಗಂಜ್ ಗುರುದ್ವಾರದ ವ್ಯವಸ್ಥಾಪಕ ಶ್ರೀ ಸತ್‌ನಾಮ್ ಸಿಂಗ್‌ರವರು ಮಾತನಾಡಿ, ಸಿಖ್ ಧರ್ಮದ ಗುರು ತೇಜ್ ಬಹದ್ದೂರ್‌ರವರ ತ್ಯಾಗ ಬಲಿದಾನ ಹಾಗೂ ಈ ದೇಶದಲ್ಲಿ ಸಮನತೆಯನ್ನು ಪ್ರತಿಷ್ಠಾಪಿಸುವ ಯತ್ನದಲ್ಲಿ ಉಂಟಾದ ಕಲ್ಯಾಣ ಕ್ರಾಂತಿಯಲ್ಲಿ ಶರಣರ ತ್ಯಾಗ ಬಲಿದಾನ ರೋಮಾಂಚಕವಾಗಿವೆ. ಸಿಖ್ ಹಾಗೂ ಲಿಂಗಾಯತ ಧರ್ಮದಲ್ಲಿ ಯಾವುದೇ ತಾತ್ವಿಕ ವ್ಯತ್ಯಾಸವಿಲ್ಲ. ನಾವು ನೀವೆಲ್ಲಾ ಸೇರಿ ಬಸವಣ್ಣನವರ ಕ್ರಾಂತಿಯನ್ನು ಉತ್ತರ ಭಾರತದ ಜನರಿಗೆ ತಿಳಿಸಿಕೊಡೋಣ

ಎಂದು ಅಭಿಮಾನದಿಂದ ನುಡಿದರು.

ಪೂಜ್ಯ ಶ್ರೀ ಮಾತಾಜಿಯವರು ದೆಹಲಿಯವರೆಗೆ ಬಂದು ತಮ್ಮೆಲ್ಲ ಶರಣ-ಶರಣೆಯರನ್ನು ಕರೆತಂದು ತತ್ತ್ವ ಪ್ರಚಾರ ಮಾಡುತ್ತಿರುವುದು ನಿಜಕ್ಕೂ ಅಭಿಮಾನದ ವಿಷಯ ಎಂದರಲ್ಲದೆ ತಮ್ಮ ಗುರುದ್ವಾರದ ಪರವಾಗಿ ಪೂಜ್ಯ ಮಾತಾಜಿಯವರಿಗೆ ಗೌರವಾರ್ಪಣೆ ಮಾಡಿದರು.

ಬೀದರ್‌ನ ದಲಿತ ನೇತಾರ ಪಾಂಡುರಂಗ ಸೂರ್ಯವಂಶಿಯವರು ಮಾತಾಜಿಯವರ ಪರಿಚಯ ಪುಸ್ತಕ ಬಿಡುಗಡೆ ಮಾಡಿ ಮಾತನಾಡುತ್ತ "ಲಿಂಗಾಯತ ಧರ್ಮ ದಲಿತ -ಪರ ಧ್ವನಿ ಎತ್ತಿದ ಪ್ರಥಮ ಧರ್ಮ. ಇಂಥಹ ಧರ್ಮದಲ್ಲಿ ಪುರೋಹಿತ ಶಾಹಿಗಳು ನುಸುಳಿ ಧರ್ಮದ ಸತ್ತ್ವವನ್ನು ಅಂದಗೆಡಿಸಿದ್ದಾರೆ. ಪೂಜ್ಯ ಮಾತಾಜಿಯವರು ಧರ್ಮದ ನಿಜ ತತ್ತ್ವಗಳನ್ನು ಧೈರ್ಯದಿಂದ ತಿಳಿಸುತ್ತ ಲಿಂಗಾಯತ ಧರ್ಮವನ್ನು ವ್ಯಾಪಕವಾಗಿ ಪ್ರಚಾರ ಮಾಡುತ್ತಿದ್ದಾರೆ" ಎಂದು ನುಡಿದರು.

ದೆಹಲಿ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರಾಮಬಾಬು ಶರ್ಮಾ ಅವರು "ಎಸೆನ್ಸ್ ಆಫ್ ಲಿಂಗಾಯತಿಸಮ್" ಪುಸ್ತಕ ಬಿಡುಗಡೆ ಮಾಡಿದರು. ಮಾಜಿ ಸಂಸದ ಜಯಪ್ರಕಾಶ್ ಅಗರ್‌ವಾಲ್ "ಬಸವಾಯಿಸಮ್ "ಪುಸ್ತಕ ಬಿಡುಗಡೆ ಮಾಡಿದರು.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಬಸವ ಧ್ವಜಾರೋಹಣ ಮಾಡಿದರು. ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿಯವರು ಪ್ರಾಸ್ತಾವಿಕ ಭಾಷಣ ಮಾಡಿದರು. ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ ಸನ್ನಿಧಿ ವಹಿಸಿದ್ದರು.

ದೆಹಲಿಯ ಜಾಟವ್ ಸಮಾಜದ ಯುವ ಮುಖಂಡ ಮನೋಜ್ ಭಾರತಿ ಸ್ವಾಗತಿಸಿದರೆ, ಹೈದರಾಬಾದ್‌ನ ಉದ್ಯಮಿ ಸುಭಾಷ್ ಪಾಟೀಲ್ ವಂದನಾರ್ಪಣೆ ಮಾಡಿದರು.

<u>ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿಯವರ ವಿಶ್ಲೇಷಣೆ</u>

ಬಸವಣ್ಣನವರು ವಿಶ್ವದ ಮೊದಲ ಸಮಾಜವಾದಿ

"ಜನ್ಮದಿಂದ ಯಾರೂ ಶ್ರೇಷ್ಠರಲ್ಲ, ಜ್ಞಾನ-ಅನುಭವದಿಂದ ಮಾತ್ರ ಮಾನ್ಯತೆ ಸಿಗಬೇಕು. ಜಾತಿಗಳು ದೇವ ನಿರ್ಮಿತವಲ್ಲ, ಮಾನವ ಕಲ್ಪಿತ. ಮಾನವನಾಗಿ ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಗೂ ಧಾರ್ಮಿಕ ಹಕ್ಕು ಸಿಗಬೇಕು. ಇವನಾರವ, ಇವನಾರವ, ಇವನಾರವ ಎಂದೆನ್ನದೆ, ಇವ ನಮ್ಮವ, ಇವ ನಮ್ಮವ, ಇವ ನಮ್ಮವ ಎಂದು ಎಲ್ಲರನ್ನು ಇಂಬಿಟ್ಟುಕೊಳ್ಳುವುದೇ ನಿಜವಾದ ಧರ್ಮ. ಇದುವೇ ವಿಶ್ವಗುರು ಬಸವಣ್ಣನವರು ನೀಡಿರುವ ಲಿಂಗಾಯತ ಧರ್ಮದ ಸಾರ" ಎಂದು ಬಸವ ಕಲ್ಯಾಣದ ಶೂನ್ಯ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳವರು ನುಡಿದರು.

ಅವರು ಲಿಂಗಾಯತ ಧರ್ಮ ಸಮ್ಮೇಳನದ ಮೊದಲ ದಿನ ಸಾಯಂಕಾಲ 5 ಗಂಟೆಗೆ ಏರ್ಪಡಿಸಿದ್ದ "ಬಸವಣ್ಣನವರ ಸಮಾಜೋಧಾರ್ಮಿಕ ಕ್ರಾಂತಿ" ವಿಷಯದ ಬಗೆಗಿನ ವಿಚಾರ ಸಂಕಿರಣದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

"ರಾಜ ಸತ್ತಾತ್ಮಕ ರಾಜಕೀಯ ವ್ಯವಸ್ಥೆ ಹಾಗೂ ಪುರೋಹಿತ ಶಾಹಿಯ ವ್ಯವಸ್ಥೆ ರೂಪುಗೊಂಡಿದ್ದ ಅಂದಿನ ಕಾಲಘಟ್ಟದಲ್ಲಿ 'ಸಮಾಜ ಮುಖಿ ಚಿಂತನೆಗೈದ ಬಸವಣ್ಣನವರು' ಅಧ್ಯಾತ್ಮಿಕ-ಧಾರ್ಮಿಕ ತಳಹದಿಯ ಮೇಲೆ ಜಾತಿ, ವರ್ಣ, ವರ್ಗರಹಿತ ಆದರ್ಶ ಸಮಾಜವನ್ನು ನಿರ್ಮಿಸಿದ್ದಾರೆ. ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳಿಂದ ಸಂಪೂರ್ಣವಾಗಿ ವಿಮುಖರಾಗಿದ್ದ ಜನಸಂಖ್ಯೆಯ ಅರ್ಧದಷ್ಟಿದ್ದ ಮಹಿಳೆಯರು ಹಾಗೂ ಬಹು ಸಂಖ್ಯಾತ ಶೋಷಿತ ವರ್ಗಗಳನ್ನು ಮುಖ್ಯವಾಹಿನಿಗೆ ತಂದು ಅವರ ಪಾಲಿಗೆ ಆಶಾಕಿರಣವಾದ ಬಸವೇಶ್ವರರು ಈ ಯುಗದಲ್ಲಿ ಮೂಡಿಬಂದ ಮಹಾನ್ ಸಮಾಜವಾದಿ." ಎಂದೂ ಸ್ವಾಮೀಜಿಯವರು ವಿಶ್ಲೇಷಿಸಿದರು.

"ಅನುಭವ ಮಂಟಪ ವಿಶ್ವದ ಪ್ರಪ್ರಥಮ ಸಂಸತ್ತು ಎಂದು ಬಣ್ಣಿಸಿದ ಅವರು ಬಟ್ಟೆ ನೇಯುವ, ಕಟ್ಟಿಗೆ ಮಾರುವ ಒಕ್ಕಲುತನ ಮಾಡುವ, ಅಕ್ಕಿಯನ್ನು ಆಯುವ, ಬುಟ್ಟಿ ಹೆಣೆಯುವ, ಬಟ್ಟೆ ತೊಳೆಯುವ ಎಲ್ಲ ಜನರೂ ಕಾಯಕ, ಅಂತಸ್ತುಗಳ ಭೇದವಿಲ್ಲದೇ ಮಹಾಮಂತ್ರಿ ಬಸವೇಶ್ವರರ ಸಮನಾಗಿ ಅನುಭವ

ಮಂಟಪದಲ್ಲಿ ಕುಳಿತು ಚರ್ಚೆಗೈಯುತ್ತಿದ್ದ ಪ್ರಸಂಗ ನಿಜಕ್ಕೂ ಅದ್ಭುತ. ಹುಟ್ಟಿನಿಂದ ನಟುವರ
ಜಾತಿಯವರಾದ ಅಲ್ಲಮ ಪ್ರಭುದೇವರನ್ನು ಲಿಂಗಾಯತ ಧರ್ಮದ ಪ್ರಥಮ ಜಗದ್ಗುರು ಪೀಠವಾದ
ಶೂನ್ಯ ಪೀಠಾರೋಹಣ ಗೈಯಿಸಿ ಸಮಾನತೆ ಸಾರಿದ ಬಸವೇಶ್ವರರು ಜಗವೆಲ್ಲವೂ ಪರಮಾತ್ಮನ ಸ್ವರೂಪ
ಎಂದು ವಿನಯದಿಂದ ನುಡಿಯುತ್ತಾರೆ. ಅವರ ಈ ಸಮಾಜವಾದಿ ನಿಲುವು ನಮಗೆಲ್ಲಾ ಆದರ್ಶ."
ಎಂದೂ ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮೀಜಿ ಹೇಳಿದರು.

ಎಂದೂ ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮೀಜಿ ಹೇಳಿದರು.

ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು
ಮಾತೆ ಗಂಗಾದೇವಿ ಅವರು ತರಂಗಿಣಿಯ ಹಿಂದಿ ಅವತರಣಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡಿ
ವೈದಿಕ ವ್ಯವಸ್ಥೆಯಲ್ಲಿ ಧರ್ಮ ಹಾಗೂ ದೇವರು ಎಂಬ ಪದಗಳೇ ಸಂಪೂರ್ಣ ವಿಕೃತಗೊಂಡಂತಹ
ಸಂದರ್ಭದಲ್ಲಿ ಬಸವೇಶ್ವರರ ನೇತೃತ್ವದಲ್ಲಿ ಶರಣರು ಸಮಗ್ರ ಪರಿವರ್ತನೆಯನ್ನುಂಟು ಮಾಡುತ್ತಾರೆ.
ಶ್ರೇಣೀಕೃತ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪ್ರತಿಭಟಿಸಿ ಸಮತಾವಾದದ ತಳಹದಿಯ ಮೇಲೆ ಹೊಸ
ಸಮಾಜವನ್ನು ಗುರು ಬಸವಣ್ಣನವರು ರೂಪಿಸಿದರು. ಹೆಣ್ಣು ಮಕ್ಕಳಿಗಾಗಿ ಧಾರ್ಮಿಕ ಸ್ವಾತಂತ್ರ್ಯತೆಯ
ಮಹಾಮನೆಯ ಹೆಬ್ಬಾಗಿಲನ್ನು ಪ್ರಪ್ರಥಮವಾಗಿ ತೆರೆದ ಮಹಾ ಪ್ರವಾದಿ ಗುರು ಬಸವಣ್ಣನವರು. ಆ
ಮಹಾಮನೆಯ ಹೆಬ್ಬಾಗಿಲಿನಲ್ಲಿ ಪ್ರವೇಶ ಮಾಡಿದ ಮೊಟ್ಟ ಮೊದಲ ವಿರಾಗಿಣಿ ಅಕ್ಕಮಹಾದೇವಿ.
ಅಂಥ ಅಕ್ಕಮಹಾದೇವಿಯ ಪ್ರತಿನಿಧಿಯಾಗಿ ಇಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು
ಆ ಕ್ರಾಂತಿಯನ್ನು ಪುನರುತ್ಥಾನಗೈಯುತ್ತಿದ್ದಾರೆ ಎಂದು ಪೂಜ್ಯ ಮಾತೆ ಗಂಗಾದೇವಿಯವರು ನುಡಿದರು.

ದೆಹಲಿ ಪ್ರಾಂತೀಯ ಜಾಟವ್ ಸಭಾದ ಮುಖಂಡರಾದ ಶ್ರೀ ರವೀಂದ್ರ ಸುಮನ್ (ಬಿಟ್ಟು)
ಅವರು ಮಾತನಾಡಿ, ಎಂಟುನೂರು ವರ್ಷಗಳ ಹಿಂದೆ ದಲಿತೋದ್ಧಾರ ಮಾಡಿ ಅಸ್ಪೃಶ್ಯತೆಯ
ನಿರ್ಮೂಲನೆಗೆ ಹೋರಾಟ ಮಾಡಿದ ಮಹಾನ್ ಕ್ರಾಂತಿ ಪುರುಷ ಬಸವೇಶ್ವರರು. ಸಂವಿಧಾನ -
ಕಾನೂನು ಎಲ್ಲ ಇದ್ದೂ ಸಹ ಇಂದಿನ ಅಧಿಕಾರಿಗಳು ಸಮಾನತೆಯನ್ನು ತರುವಲ್ಲಿ ವಿಫಲರಾಗಿದ್ದಾರೆ
ಎಂದು ವಿಷಾದಿಸಿದರು.

ದಿಲ್ಲಿ ಪ್ರಾಂತೀಯ ರಾಯಗರ್ ಕಲ್ಯಾಣ ಸಭಾದ ಉಪಾಧ್ಯಕ್ಷ ರಾಜೇಶ್ ಚಂದೋಲಿಯ
ಅವರು ಅಕ್ಕಮಹಾದೇವಿಯ ಜೀವನ ಸಂದೇಶ ಕುರಿತು ಮಾತನಾಡಿ, 'ಅಕ್ಕಮಹಾದೇವಿ ಜಗತ್ತಿನ
ಮೊಟ್ಟ ಮೊದಲ ಸ್ತ್ರೀ ಸಮಾನತಾ ಹೋರಾಟಗಾರ್ತಿ; ಪೂಜ್ಯ ಮಾತಾಜಿಯವರು ರಚಿಸಿದ ತರಂಗಿಣಿ
ಕಾದಂಬರಿ ಓದಿದ ನಾನು ಹೊಸದೊಂದು ಲೋಕವನ್ನೇ ದರ್ಶಿಸಿದಂತಾಯಿತು ಎಂದು ಬಣ್ಣಿಸಿದರು.

ಅಂತರ್‌ರಾಷ್ಟ್ರೀಯ ಖ್ಯಾತ ಕಲಾವಿದರಾದ ಶರಣ ಭೀಮರಾವ್ ಮುರಗೋಡ ಅವರನ್ನು
ಈ ಸಂದರ್ಭದಲ್ಲಿ ಪೂಜ್ಯ ಮಾತಾಜಿಯವರು ಶಾಲು ಹೊದಿಸಿ ಆಶೀರ್ವದಿಸಿದರು.

ಲಿಂಗಾಯತ ಧರ್ಮ ಮಹಾಸಭಾಧ್ಯಕ್ಷ ಎನ್.ಪುಟ್ಟರುದ್ರ ಅವರು ಪ್ರಾಸ್ತಾವಿಕವಾಗಿ
ಮಾತನಾಡಿದರು. ನ್ಯಾಯವಾದಿ ಕೆ.ಎಸ್.ಕೋರಿಶೆಟ್ಟರ್ ಸ್ವಾಗತ ಕೋರಿದರು. ಪೂಜ್ಯ ಶ್ರೀ ಬಸವ
ಕುಮಾರ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು.

<u>ಪರಮ ಪೂಜ್ಯ ಮಾತಾಜಿ ಸಂದೇಶ</u>

ಬಹು ಧರ್ಮೀಯರಿಂದ ಭಾರತ ಶೋಭಾಯಮಾನ

"ಒಂದು ಹೂ ದೋಟದಲ್ಲಿ ಎಲ್ಲ ವರ್ಣಗಳ ಹೂಗಳು ಸೇರಿ ತೋಟದ ಸೌಂದರ್ಯವನ್ನು
ಇಮ್ಮಡಿಸುವವೋ ಅದೇ ರೀತಿ ವಿವಿಧ ರುಚಿಯ ಖಾದ್ಯಗಳು ಸೇರಿ ಅವನ್ನು ಸೇವಿಸಿದಾಗ ನಮ್ಮ ಶಕ್ತಿ
ವರ್ಧನೆಯಾಗುವುದೋ ಹಾಗೆಯೇ ಸರ್ವ ಧರ್ಮದ ಜನರೂ ಯಾವುದೇ ರೀತಿಯ ಭೇದ ಭಾವವಿಲ್ಲದೇ
ಒಂದಾಗಿ ಬಾಳಿ ದೇಶ ಸೇವೆ ಮಾಡಿದಾಗ ಸಮೃದ್ಧ, ಸ್ವಾಭಿಮಾನಿ, ರಾಷ್ಟ್ರವನ್ನು ರೂಪಿಸಬಹುದು. ಎಂದು
ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು
ನುಡಿದರು.

ಅವರು ನವ ದೆಹಲಿಯ ದರಿಯಾಗಂಜ್‌ದಲ್ಲಿರುವ ಮಹಾವೀರ ವಾಟಿಕಾ ಸಮುದಾಯ ಭವನದ ಆವರಣದ ಅಲಂಕೃತ ಭವ್ಯ ವೇದಿಕೆಯಲ್ಲಿ ಏರ್ಪಾಡಾಗಿದ್ದ ಲಿಂಗಾಯತ ಧರ್ಮ ಸಮ್ಮೇಳನದ 2ನೇ ದಿನ ಬೆಳಿಗ್ಗೆ 10-30ಕ್ಕೆ "ಸರ್ವ ಧರ್ಮ ಸಾಮೂಹಿಕ ಪ್ರಾರ್ಥನಾ" ಗೋಷ್ಠಿಯ ದಿವ್ಯ ಸಾನ್ನಿಧ್ಯ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡುತ್ತಿದ್ದರು.

"ವರ್ಗ, ವರ್ಣ, ಕೋಮುಗಳ ಮಧ್ಯೆ ಸಂಘರ್ಷ ಉಂಟಾಗುತ್ತಿರುವ ಇಂದಿನ ದಿನಗಳಲ್ಲಿ ವಿಶ್ವ ಶಾಂತಿಗೆ ಬಸವೇಶ್ವರ, ಬುದ್ಧ, ಮಹಾವೀರ, ಪೈಗಂಬರ್, ಗುರುನಾನಕ್, ಏಸು ಮುಂತಾದ ಪ್ರವಾದಿಗಳ ಸಂದೇಶಗಳು ದಿವ್ಯ ಔಷಧಗಳಾಗಿವೆ" ಎಂದು ಪೂಜ್ಯ ಮಾತಾಜಿ ವಿವರಿಸಿದರು.

ಸರ್ವಧರ್ಮ ಪ್ರಾರ್ಥನಾ ಸಭೆಯ ಉದ್ಘಾಟನೆಯು ಅತ್ಯಂತ ವೈಶಿಷ್ಟ್ಯಪೂರ್ಣವಾಗಿ ನಡೆಯಿತು. ಸರ್ವಧರ್ಮದ ಗುರುಗಳು ತಮ್ಮ ತಮ್ಮ ಮಂತ್ರಗಳನ್ನು ಉಚ್ಚರಿಸಿ ಜ್ಯೋತಿ ಬೆಳಗಿಸಿದರು. ಜೈನ ಧರ್ಮದ ಆಚಾರ್ಯಾ ಸಾಧ್ವಿ ಸಾಧನಾಜಿಯವರು ಪುಷ್ಪ ಅರ್ಪಿಸಿ ಉದ್ಘಾಟಿಸಿದರು.

"ಸಾಧ್ವಿ ಸಾಧನಾಜಿಯವರು ಮಾತನಾಡಿ, 'ಅಹಿಂಸಾ ಪರಮೋಧರ್ಮ' ಜೈನ ಧರ್ಮದ ಮುಖ್ಯ 'ಸಿದ್ಧಾಂತ. ಅಹಿಂಸೆಯಲ್ಲಿ ಶಾಕಾಹಾರ, ಸಂಯಮ ಎಲ್ಲವೂ ಅಡಕವಾಗಿವೆ. ಅಹಿಂಸಾ ತತ್ತ್ವವನ್ನು ಅಳವಡಿಸಿಕೊಂಡವನೇ ನಿಜವಾದ ಜೈನ. ಜೈನ ಎಂಬುದೊಂದು ಜಾತಿಯಲ್ಲ, ಮತವಲ್ಲ ; ಇದೊಂದು ಜೀವನ ವಿಧಾನ." ಎಂದು ವಿವರಿಸಿದರು.

ಸಿಖ್ ಧರ್ಮದ ಪ್ರತಿನಿಧಿಯಾಗಿ ಮಾತನಾಡಿದ ಶೀಸ್‌ಗಂಜ್ ಗುರುದ್ವಾರದ ಗ್ರಂಥಿ ಶರಣ ಶ್ರೀ ಭಾಯಿ ಹರದೇವ ಸಿಂಗ್‌ರು ಮಾತನಾಡಿ ಭಾರತೀಯ ಸಂಸ್ಕೃತಿ ಮತ್ತು ಧಾರ್ಮಿಕ ಪರಂಪರೆಯನ್ನು ಉಳಿಸಲು ಗುರು ತೇಜ್‌ಬಹಾದ್ದೂರ ಮತ್ತು ಗುರು ಗೋವಿಂದ ಸಿಂಗ್‌ರು ಮಾಡಿದ ತ್ಯಾಗ-ಬಲಿದಾನ ಅಸಾಮಾನ್ಯವಾದುದು ಎಂದು ನುಡಿದರು.

ದೆಹಲಿಯ ಕ್ರೈಸ್ತ ಧರ್ಮದ ಫಾದರ್ ಫರ್ನಾಂಡೀಸ್ ಡಿಸೋಜಾ ಅವರು ಕನ್ನಡದಲ್ಲಿ ಮಾತನಾಡಿ, " ದೇವರು ಒಬ್ಬನೇ. ಆ ಕರ್ತನಿಗೆ ಮಾನವರೆಲ್ಲರೂ ಶರಣಾಗಬೇಕು. ಗುರು ಬಸವೇಶ್ವರ, ಏಸು, ಪೈಗಂಬರ್, ಗುರು ನಾನಕ್ ಎಲ್ಲ ಮಹಾತ್ಮರೂ ಇದೇ ಸಂದೇಶವನ್ನು ನೀಡಿದ್ದಾರೆ. ಅಸಹಾಯಕ ದೀನ-ದಲಿತರ ಸೇವೆಯನ್ನೇ ಪೂಜೆಯೆಂದು ಭಾವಿಸಿ, ಸೇವೆಗೈದಾಗ ಆ ಎಲ್ಲ ಪ್ರವಾದಿಗಳು ಸಂತುಷ್ಟರಾಗಿ ನಮಗೆ ಅನುಗ್ರಹವನ್ನು ಖಂಡಿತ ನೀಡುತ್ತಾರೆ. ಪರಮ ಪೂಜ್ಯ ಮಾತಾಜಿಯವರು ಸಹಸ್ರಾರು ಭಕ್ತರೊಂದಿಗೆ ದೆಹಲಿಗೆ ಆಗಮಿಸಿ ಇಂಥ ಬೃಹತ್ ಸಮ್ಮೇಳನ ನಡೆಸುತ್ತಿರುವುದು ಅತ್ಯಂತ ಸಂತಸದಾಯಕವಾಗಿದೆ. ಈ ಸರ್ವ ಧರ್ಮ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿದ್ದಕ್ಕೆ ನನಗೆ ಅತ್ಯಂತ ಆನಂದವಾಗಿದೆ." ಎಂದು ಡಿಸೋಜಾ ಹೃದಯ ತುಂಬಿ ಮಾತನಾಡಿದರು.

ಇಸ್ಲಾಂ ಧರ್ಮದ ಪ್ರತಿನಿಧಿಗಳಾಗಿ ಆಗಮಿಸಿದ್ದ ಶ್ರೀ ಡಾ||ಎಂ.ಎಂ.ಮುಕ್ರಮ್ ಅಹ್ಮದ್ ಇಮಾಮಸಾಬ್ ಅವರು ಮಾತನಾಡಿ, "ಎಲ್ಲ ಧರ್ಮೀಯರು ಕೂಡಿ ಬಾಳಲು ಕಲಿಯಬೇಕಾಗಿದೆ. ನಾವೆಲ್ಲರೂ ಒಂದು ಎಂಬ ಭಾವನೆ ಬಂದರೆ ಅಲ್ಲಾ ಮೆಚ್ಚುವನು" ಎಂದು ನುಡಿದರು.

ಮುಂಬೈನ ಉದ್ಯಮಿ ಆರ್.ಬಿ.ಹೆಬ್ಬಳ್ಳಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಲಿಂಗಾಯತ ಧರ್ಮ ಮಹಾಸಭಾದ ಅಧ್ಯಕ್ಷ ಎನ್.ಪುಟ್ಟರುದ್ರ ಸ್ವಾಗತಿಸಿದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು, ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿ, ಪೂಜ್ಯ ಶ್ರೀ ಸಿದ್ಧೇಶ್ವರಾನಂದ ಸ್ವಾಮೀಜಿ, ಪೂಜ್ಯ ಬಸವ ಕುಮಾರ ಸ್ವಾಮೀಜಿ, ಹೈದ್ರಾಬಾದ್‌ನ ಸುಭಾಷ್ ಪಾಟೀಲ್, ಎಸ್.ಎಲ್.ಗೌಡರ್ ಧಾರವಾಡ, ವೀರಣ್ಣ ಕೊರ್ಲ್ಹಳ್ಳಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಶರಣ ವಿಕ್ರಮಸಿಂಗ್, ಶ್ರೀಮತಿ ಸುಧೀರ್ ಕೌರ, ಗಗನ ದೀಪ ಕೌರ ಮತ್ತು ಸಂಗಡಿಗರು 'ಗುರು ವಾಣಿ' (ಗುರ್‌ಬಾನಿ) ಭಜನೆ ನಡೆಸಿಕೊಟ್ಟರು. ಶ್ರೀ ಮೋತಿಲಾಲ್ ಜೈನ್, ಸವಿತಾ ಜೈನ್ ಮತ್ತು ಉಷಾ ಜೈನ್ ಅವರು ಜೈನ ಧರ್ಮದ ಪ್ರಾರ್ಥನೆ ನಡೆಸಿಕೊಟ್ಟರು. ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ತಾವೇ ರಚಿಸಿದ ಪ್ರಾರ್ಥನೆಯನ್ನು ಹಿಂದಿಯಲ್ಲಿ ಮಾಡಿಸಿದರು.

ಸರ್ವ ಧರ್ಮ ಪ್ರಾರ್ಥನಾ ಸಭೆಯಲ್ಲಿ ಅತ್ಯಂತ ತಲ್ಲೀನರಾಗಿ ಭಾಗವಹಿಸಿದ ಶರಣರ ಶ್ರದ್ಧೆಯನ್ನು ಕಂಡು ಇತರ ಧರ್ಮದ ಮುಖಂಡರು ಹರ್ಷ ವ್ಯಕ್ತಪಡಿಸಿದರು.

ಪೂಜ್ಯ ಮಾತಾಜಿಯವರ ಕಲ್ಪನೆಯ ಕೂಸು
ಭಾರತೀಯ ಧರ್ಮಗಳ ಮಹಾಸಂಘದ ಶುಭಾರಂಭ

ಭಾರತ ದೇಶವು ಬಹುದೊಡ್ಡ ಸಂದೇಶವನ್ನು ಕೊಟ್ಟಿದೆ, ಹಲವಾರು ಧರ್ಮಗಳಿಗೆ ಜನ್ಮಭೂಮಿಯಾಗಿದೆ. ಭಾರತ ದೇಶದಲ್ಲಿ ಜನಿಸಿರುವ ಹಿಂದು, ಜೈನ, ಬೌದ್ಧ, ಲಿಂಗಾಯತ ಮತ್ತು ಸಿಖ್ ಧರ್ಮಗಳ ಸಂಸ್ಥಾಪಕರು ಭಾರತದೇಶದಲ್ಲಿ ಹುಟ್ಟಿರುವ ಕಾರಣ ಈ ಧರ್ಮದ ಅನುಯಾಯಿಗಳಿಗೆ ಭಾರತವು ಧರ್ಮಭೂಮಿಯಾಗಿದೆ. ಈ ದೇಶದ ಧಾರ್ಮಿಕ ಪರಂಪರೆಯು ಶ್ರೇಷ್ಠವಾದ ಆಧ್ಯಾತ್ಮಿಕ ಸಂದೇಶವನ್ನು ಕೊಟ್ಟಿದ್ದರೂ ಸಹ ಇದರ ಒಳಗಿನ ಜಾತಿ ಪದ್ಧತಿ, ಅಸ್ಪೃಶ್ಯತೆ, ಅಂಧಶ್ರದ್ಧೆ ಮತ್ತು ಧಾರ್ಮಿಕ ಶೋಷಣೆಯು ಭಾರತದ ಕೀರ್ತಿಗೆ ಆತಂಕಕಾರಿಯಾಗಿವೆ. ಆದ್ದರಿಂದ ಆತ್ಮಾವಲೋಕನ ಮಾಡಿಕೊಂಡು ತಮ್ಮನ್ನು ತಾವು ತಿದ್ದಿಕೊಳ್ಳಲು ಮತ್ತು ಜನರಲ್ಲಿ ಜಾಗೃತಿ ಮೂಡಿಸಲು ಭಾರತೀಯ ಧರ್ಮಗಳ ನೇತಾರರು ಒಟ್ಟಾಗಿ ಸೇರಿ ಕಾರ್ಯ ಮಾಡುವುದು ಅತ್ಯಗತ್ಯವಾಗಿದೆ. ಈ ಉದ್ದೇಶದಿಂದಲೇ ಭಾರತೀಯ ಧರ್ಮಗಳ ಮಹಾಸಂಘವನ್ನು (Federation of Indian Religions) ಪ್ರಾರಂಭಿಸಲಾಗುತ್ತಿದೆ. ಎಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ಅವರು ಘೋಷಿಸಿದರು. ಅವರು ಲಿಂಗಾಯತ ಧರ್ಮ ಸಮ್ಮೇಳನದ ಎರಡನೆಯ ದಿನ ಸಂಜೆ ಏರ್ಪಡಿಸಿದ್ದ ಧರ್ಮ ಚಿಂತನಗೋಷ್ಠಿಯ ದಿವ್ಯ ಸಾನ್ನಿಧ್ಯ ವಹಿಸಿ ಪ್ರಾಸ್ತಾವಿಕ ಮಾತನಾಡುತ್ತಿದ್ದರು.

"ನಮ್ಮ ನಮ್ಮಲ್ಲೇ ಜಗಳವಾಡುವುದರ ಬದಲಿಗೆ ಎಲ್ಲರಲ್ಲಿ ಇರುವ ಸಮಾನ ಅಂಶಗಳನ್ನು ಮುಂದೆ ಇಟ್ಟುಕೊಂಡು ಸಾಗಬೇಕು. ಏಕೆಂದರೆ ಇಂದು ಎಲ್ಲರ ಮುಂದಿರುವ ಸಾಮಾನ್ಯ ಶತ್ರುಗಳೆಂದರೆ ಬಡತನ, ಜಾತೀಯತೆ ಅಸ್ಪೃಶ್ಯತೆ, ಮೂಢನಂಬಿಕೆ, ಅಸಮಾನತೆ ಮತ್ತು ಶೋಷಣೆ; ಇವುಗಳ ವಿರುದ್ಧ ಹೋರಾಡುವುದು ಅತ್ಯಂತ ಅಗತ್ಯವಾಗಿದೆ ಎಂದು ಪೂಜ್ಯ ಮಾತಾಜಿಯವರು ನುಡಿದರು.

<u>ದೆಹಲಿಯಲ್ಲಿ ಭಾರತೀಯ ಧರ್ಮಗಳ ಸಂದರ್ಶನಕ್ಕೆ ಅವಕಾಶ :</u> ಇಂದು ದೆಹಲಿ ಸಂದರ್ಶನಕ್ಕೆ ದೇಶದ ವಿವಿಧ ಭಾಗಗಳಿಂದ ಹೊರದೇಶಗಳಿಂದ ಬಂದವರಿಗೆ ಕೇವಲ ರಾಜಕೀಯ ಧುರೀಣರ ಸಮಾಧಿಗಳ ದರ್ಶನ ಪ್ರಾಪ್ತವಾಗುತ್ತಲಿದೆ ಇದರ ಬದಲು ಒಂದು ಸುಂದರ ಧಾರ್ಮಿಕ ಆವರಣ (Campus)ಆಗಿ ಸಂದರ್ಶಕರಿಗೆ ಭಾರತೀಯ ಧಾರ್ಮಿಕ ಪರಂಪರೆಯ ಪರಿಚಯ ಆಗುವಂತಹ ವಾತಾವರಣ ನಿರ್ಮಾಣ ಆಗಬೇಕು ." ಎಂದು ಪೂಜ್ಯ ಮಾತಾಜಿಯವರು ಸಲಹೆ ನೀಡಿದರು.

ದೀಪಾವಳಿ ಸಂದರ್ಭದಲ್ಲಿ ಲಕ್ಷಾಂತರ ರೂಪಾಯಿಗಳ ಪಟಾಕಿ ಸುಟ್ಟು ಹಣವನ್ನು ಅಪವ್ಯಯ ಮಾಡಲಾಗುವುದಲ್ಲದೇ ಪರಿಸರ ಮಾಲಿನ್ಯವೂ ಉಂಟಾಗುತ್ತಿದೆ. ಆದ್ದರಿಂದ ನಾವೆಲ್ಲಾ ಸಂಕಲ್ಪ ಮಾಡಿ ಪಟಾಕಿ ಸುಡಲು ಉಪಯೋಗಿಸುವ ಹಣವನ್ನು ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ, ಅನಾಥರ ಸರಂಕ್ಷಣೆಗಾಗಿ ವಿನಿಯೋಗಿಸಬೇಕು. ಈ ಸಂಕಲ್ಪವನ್ನು ಸಮ್ಮೇಳನಕ್ಕೆ ಬಂದವರು ಮಾಡಬೇಕು." ಎಂದು ಕರೆ ನೀಡಿದರು.

ಚಾಂದನಿ ಚೌಕ್‌ದಲ್ಲಿರುವ ಶೀಸ್ ಗಂಜ್ ಗುರುದ್ವಾರದ ವ್ಯವಸ್ಥಾಪಕ ಸತ್ನಾಮ್ ಸಿಂಗ್ ಭಾರತೀಯ ಧರ್ಮಗಳ ಮಹಾಸಂಘವನ್ನು ಉದ್ಘಾಟಿಸಿದರು. ಕರೋಲ್‌ಬಾಗ್‌ನ ಬಿ.ಜೆ.ಪಿ ನಾಯಕ ಶರಣ.ಕೆ.ಸಿ.ರವಿ, ಉತ್ತರ ಪ್ರದೇಶದ ರಾಮ್‌ಪಾಲ್ ಸಿಂಗ್, ವಿಶ್ವ ಹಿಂದೂ ಪರಿಷತ್‌ನ ಉಪ್ಪಲ್ ಬಾಲಕೃಷ್ಣ ನಾಯಕ್ ಮಾತನಾಡಿದರು.

ದೆಹಲಿ ಪ್ರದೇಶ ಜಾಟವ್ ಸಭಾ ಅಧ್ಯಕ್ಷ ವೇದ ಪ್ರಕಾಶ ಸೇಟ್, ದೆಹಲಿ ಪ್ರಾಂತೀಯ ರಾಯಗರ್ ಕಲ್ಯಾಣ ಸಭಾದ ಅಧ್ಯಕ್ಷ ಲಜಪತ್‌ರಾಯ ಗರ್ಭಾರಿಯಾ, ಜಾಟವ್ ಸಭಾದ ಮಾಜಿ ಅಧ್ಯಕ್ಷ ಲೇಖರಾಜ್, ರಾಯಗರ್ ಸಭಾದ ಸಂಚಾಲಕ ಪೃಥ್ವಿರಾಜ್ ಅವರನ್ನು ಸತ್ಕರಿಸಲಾಯಿತು. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ, ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ, ಪೂಜ್ಯ ಬಸವ ಕುಮಾರ ಸ್ವಾಮೀಜಿ, ಪೂಜ್ಯ ಚನ್ನಬಸವಾನಂದ ಸ್ವಾಮೀಜಿ ಸಮ್ಮುಖ ವಹಿಸಿದ್ದರು.

ಕೇಂದ್ರ ಸಚಿವ ಎಂ.ವಿ. ರಾಜಶೇಖರನ್ ಅಭಿಮತ

'ಲಿಂಗಾಯತ' ಸ್ವತಂತ್ರ, ಪ್ರಗತಿಪರ ಧರ್ಮ

"ಧರ್ಮದ ಬಗೆಗೆ 12ನೆಯ ಶತಮಾನದಲ್ಲಿ ಪ್ರಗತಿಪರ ಪರಿಶೀಲನೆಯನ್ನು ನಡೆಸಿದ ಮಹಾನ್ ಧಾರ್ಮಿಕ ಜಿಜ್ಞಾಸು ವಿಶ್ವಗುರು ಬಸವಣ್ಣನವರು; ಅವರ ಪ್ರಕಾರ ಧರ್ಮಕ್ಕೆ ತಳಹದಿಯಾಗಿರಬೇಕಾದದ್ದು ಕುರುಡು ನಂಬಿಕೆಯಲ್ಲ ಸುಜ್ಞಾನದ ವಿವೇಚನೆ. ಇಂತಹ ಸುಜ್ಞಾನದ ವಿವೇಚನೆಯ ರಕ್ಷಾಕವಚವನ್ನು ತೊಟ್ಟು ಬಸವಣ್ಣನವರು ತಮ್ಮ ಕಾಲದ ಸಾಮಾಜಿಕ ಅಧೋಗತಿಗೆ ಕಾರಣಗಳನ್ನು ಹುಡುಕತೊಡಗಿದರು. ಅತಿಯಾದ ಮೂಢ ಭಕ್ತಿ, ಮಿತಿ ಮೀರಿದ ಅಂಧ ವಿಶ್ವಾಸ, ಹುರುಳಿಲ್ಲದ ಜಾತಿಭೇದ, ತರವಲ್ಲದ ಮೂರ್ತಿ ಪೂಜೆ; ಕರ್ಮಾಧಾರಿತ ಯಜ್ಞಯಾಗಾದಿಗಳು; ಕ್ಷುದ್ರ ದೇವತೆಗಳ ಬಗೆಗಿನ ಅಂಧಶ್ರದ್ಧೆ, ಪುರುಷ-ಪುರುಷ ಹಾಗೂ ಸ್ತ್ರೀ- ಪುರುಷರ ನಡುವಿನ ತಾರತಮ್ಯ, ಸನಾತನ ಧರ್ಮ ಶಾಸ್ತ್ರಗಳಲ್ಲಿರುವ ಕುರುಡು ನಂಬಿಕೆ - ಇವೇ ಮೊದಲಾದ ಸಾಮಾಜಿಕ ಹಾಗೂ ಧಾರ್ಮಿಕ ಸಂಕೋಲೆಗಳನ್ನು ಬಿಡಿಸಲು ಸರ್ವ ಸಮ್ಮತವಾದ ಭಕ್ತಿಯಾಧಾರಿತ ಜ್ಞಾನ ಮಾರ್ಗದ ಧರ್ಮವನ್ನು ಸಂಸ್ಥಾಪಿಸಿದರು." ಎಂದು ಕೇಂದ್ರ ಯೋಜನಾ ಸಚಿವ ಎಂ.ವಿ.ರಾಜಶೇಖರನ್ ಅಭಿಪ್ರಾಯ ಪಟ್ಟರು.

ಅವರು ರಾಜಧಾನಿ ನವದೆಹಲಿಯ ದರಿಯಾ ಗಂಜ್‌ನಲ್ಲಿ ಕೆಂಪುಕೋಟೆಯ ಸನಿಹದಲ್ಲಿರುವ ಮಹಾವೀರ ವಾಟಿಕಾ ಸಮುದಾಯ ಭವನದ ಆವರಣದ ಭವ್ಯ ಬಸವ ಮಹಾಮಂಟಪದಲ್ಲಿ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನದ ಅಂಗವಾಗಿ ದಿ.24ರಂದು ಬೆಳಿಗ್ಗೆ ಏರ್ಪಡಿಸಿದ್ದ ಸಾಮೂಹಿಕ ಇಷ್ಟಲಿಂಗಾರ್ಚನಾ ಸಮಾರಂಭದ ಉದ್ಘಾಟನೆ ನೆರವೇರಿಸಿ ಮಾತನಾಡುತ್ತಿದ್ದರು.

ಪುರೋಹಿತ ಶಾಹಿಗೆ ಪೂರಕ, ಪಟ್ಟಭದ್ರ ಹಿತಾಸಕ್ತಿಗಳಿಗೆ ಪ್ರೇರಕ ಹಾಗೂ ಸ್ವತಂತ್ರ ಆಲೋಚನೆಗಳಿಗೆ ಮಾರಕವಾದ ಸನಾತನ ಸಂಸ್ಕೃತಿಯನ್ನು ಕೈ ಬಿಟ್ಟು ಗಂಡು ಹೆಣ್ಣಿನ ನಡುವೆ ಸಮಾನತೆಯನ್ನು ಸಾರುವ, ಜಾತಿ ದ್ವೇಷ, ಅಸ್ಪೃಶ್ಯತೆ, ಅಸಮಾನತೆಗಳಿಂದ ಹೊರತಾದ, ವಿಗ್ರಹಾರಾಧನೆ ಮತ್ತಿತರ ಕಂದಾಚಾರಗಳಿಂದ ಮುಕ್ತವಾದ, ಸರ್ವ ಸಮಾನತೆ ಹಾಗೂ ಸ್ವತಂತ್ರ ವಿವೇಚನೆಗಳಿಗೆ ಅನುವು ನೀಡುವ ಭಕ್ತಿ ಸಂಕುಲದ ವಿನೂತನ ಸಂಸ್ಕೃತಿಯನ್ನು ಬಸವಣ್ಣನವರು ಪ್ರೇರೇಪಿಸಿದರು. ಎಂದು ಕೇಂದ್ರ ಸಚಿವರು ವಿಶ್ಲೇಷಿಸಿದರು.

ಡಾಂಭಿಕ ವ್ಯಕ್ತಿತ್ವ ಉಳ್ಳವರನ್ನು ಬಸವೇಶ್ವರರು ಖಂಡಿಸುತ್ತಿದ್ದರು ಎಂದು ನುಡಿದ ಅವರು "ಕೆಸರಿನಿಂದ ಹುಟ್ಟಿದ ಕಮಲವೂ ಶ್ರೇಷ್ಠ. ಕಾಷ್ಟದಿಂದ ಹುಟ್ಟಿದ ಬೆಂಕಿಯೂ ಶ್ರೇಷ್ಟ. ಸೂತಕ, ಹೊಲೆ, ಕೀಳು ಇವೆಲ್ಲಾ ನಾವೇ ನಿರ್ಮಿಸಿಕೊಂಡ ಬಲೆ" ಎಂಬುದೇ ಬಸವೇಶ್ವರರ ವಿಚಾರವಾಗಿತ್ತು ಎಂದು ರಾಜಶೇಖರನ್ ನುಡಿದರು.

ಬಸವಣ್ಣನವರು ದುಡಿಮೆ ಹಾಗೂ ಅಧ್ಯಾತ್ಮ ಇವೆರಡೂ ಮೌಲ್ಯಗಳಿಗಿರುವ ಮೂಲಭೂತ ಸಂಬಂಧಗಳನ್ನು ಕುರಿತು ವಿಶೇಷವಾಗಿ ಚಿಂತನೆ ನಡೆಸಿದ್ದರು. ಅದರ ಪ್ರತಿಫಲವೇ ಶರಣರ ಕಾಯಕ ಮತ್ತು ದಾಸೋಹಗಳ ಪರಿಕಲ್ಪನೆ. ಈ ಪರಿಕಲ್ಪನೆ ಮೂರು ಮುಖ್ಯ ಅಂಶಗಳನ್ನು ಒಳಗೊಂಡಿತ್ತು. ಅವೆಂದರೆ ಪ್ರತಿಯೊಬ್ಬನೂ ತನ್ನ ಸ್ವಂತ ದುಡಿಮೆಯಿಂದ ಗಳಿಸಿದ ಆಹಾರವನ್ನು ತಿನ್ನಬೇಕು, ತನ್ನ ಮನೋಧರ್ಮಕ್ಕೆ ಹೊಂದುವ ಯಾವುದೇ ಉದ್ಯೋಗವನ್ನಾದರೂ ಮಾಡಬೇಕು, ಅಗತ್ಯಕ್ಕಿಂತ ಹೆಚ್ಚಿನ ಸಂಪಾದನೆ ಮೂಡಕೂಡದು ಹಾಗೂ ಅನ್ಯಾಯ ಅಥವಾ ಅಪಮಾರ್ಗದ ಸಂಪಾದನೆ ಸಲ್ಲದು ಎಂಬುದು ಗುರುಬಸವಣ್ಣನವರ ತತ್ವ ಎಂದು ಅವರು ವಿಶ್ಲೇಷಿಸಿದರು.

12ನೇ ಶತಮಾನದ ಕಾಲ ನಿಜವಾಗಿಯೂ ವೇದ ಜಡರಿದ್ದ ಕಾಲ. ಅಂದಿನ ರಾಜಾಶ್ರಯವೆಲ್ಲ ಕೇವಲ ಪುರೋಹಿತಗಾಮಿಯಾಗಿತ್ತು. ಇನ್ನು ಭಕ್ತಿ, ಜ್ಞಾನ, ಆರಾಧನೆಗಳೆಲ್ಲಾ ಸಂಸ್ಕೃತಮಯವಾಗಿ ವಿಪ್ರರಿಗೆ ಮಾತ್ರ ಸೀಮಿತವಾಗಿತ್ತು. ವರ್ಣಾಶ್ರಮ ನೀತಿಯಿಂದ ಬೆಂದು ಬಸವಳಿದಿದ್ದ ಜನ ಸಾಮಾನ್ಯರಿಗೆ ಧರ್ಮ- ದೇವರುಗಳು ನಿಲುಕದ ವಿಚಾರಗಳಾಗಿದ್ದವು, ಅಂತಹ ಕಾಗ್ಗತ್ತಲ

ಲೋಕದ ಜನತೆಗೂ ಕಾರ್ತಿಕದ ಬೆಳಕನ್ನು ಮೂಡಿಸಿದವರು ಬಸವಣ್ಣನವರು. ಇವರ ಸರಳ ಹಾಗೂ ನೇರ ಭಕ್ತಿ ಹಾಗೂ ಜ್ಞಾನ ಮಾರ್ಗದ ಧರ್ಮಾಚರಣೆ ಸಮಾಜದ ಎಲ್ಲಾ ಸ್ತರದ ಜನ ಮನವನ್ನು ಸೂರೆಗೊಂಡಿತು. ಸಪ್ತಸೂತ್ರಗಳ ಮೂಲಕ ದೇವ ಸಾಕ್ಷಾತ್ಕಾರದ ಮಾರ್ಗ ತೋರಿದ ಇವರು ಅಂದಿನ ದೇವ ಪುರುಷರೇ ಆಗಿದ್ದರು.

ಮಾನವರನ್ನು ಪಶ್ಚಾತ್ತಾಪ ಹಾಗೂ ಅನುಕಂಪಗಳಿಂದ ಮಾತ್ರ ಸನ್ಮಾರ್ಗಕ್ಕೆ ತರಬಹುದೆಂಬುದು ಬಸವೇಶ್ವರರ ದೃಢ ನಿಶ್ಚಯವಾಗಿತ್ತು. ಕಳ್ಳ-ಸುಳ್ಳ, ಪಾಪಿ-ಪರದೇಶಿ, ಕಟುಕ - ಜಾರಿಣಿ ಹೀಗೆ ಪ್ರತಿಯೊಬ್ಬರೊಳಗೂ ಆತ್ಮವಿದೆ ಎಂದು ಇಂತಹವರ ಬಗ್ಗೆಯೂ ಬಸವಣ್ಣನವರು ಅಂತಃಕರುಣೆಯನ್ನು ತೋರಿದರು. ಅವರೊಳಗಿನ ಆತ್ಮಜ್ಯೋತಿಯನ್ನು ಬೆಳಗಿಸಿದರು. ಸ್ತ್ರೀ-ಪುರುಷರು ಆದಿಯಾಗಿ ಎಲ್ಲಾ ವರ್ಗದ ಜನರ, ಅದರಲ್ಲೂ ದೀನ ದಲಿತ, ಶೋಷಿತ ವರ್ಗದ ಜನತೆಗೆ ಆಶಾದೀಪವಾಗಿ ವಿಶ್ವ ಬಂಧುವಾದರು. 'ಶ್ವಪಚೋಪಿಯಾದಡೇನು, ಭಕ್ತನೇ ನಿಜವಾದ ಕುಲಜ' ಈ ಕುಲ-ಜಾತಿಗಳೆಲ್ಲ ಮೇಲ್ವರ್ಗದವರ ಸೃಷ್ಟಿಯಾಗಿವೆ ಎಂಬುದೇ ಕಲ್ಯಾಣದ ಬಸವಾದಿ ಪ್ರಮಥರ ವಿಚಾರ ಧಾರೆಯಾಗಿತ್ತು ಎಂದೂ ರಾಜಶೇಖರನ್ ವಿಮರ್ಶಿಸಿದರು.

ಧಾರ್ಮಿಕ ಜಟಿಲತೆಗಳನ್ನು ಜಾಲಾಡಿ ಕುಟಿಲೋಪಾಯಗಳಿಂದ ಜನರನ್ನು ಸಂರಕ್ಷಿಸಿ, ಆತ್ಮಸ್ಥೈರ್ಯ ತುಂಬಿ ಧ್ವನಿ ಇಲ್ಲದ ವರ್ಗಕ್ಕೆ ಧ್ವನಿಯಾಗಿ, ದಯವಿಲ್ಲದ ಧರ್ಮಕ್ಕೆ ತಿಲಾಂಜಲಿ ಇತ್ತು, ಸಕಲ ಜೀವಾತ್ಮರಿಗೆ ಲೇಸನು ಬಯಸುವ ನಿಜವಾದ ಮಾನವ ಧರ್ಮವನ್ನು ಬಸವಣ್ಣನವರು ಸಾರಿದರು. ಎಂದು ಅವರು ನುಡಿದರು.

ಶ್ರೀ ಗುರು ಬಸವೇಶ್ವರರ ತತ್ವಗಳನ್ನು ಉತ್ತರ ಭಾರತದಾದ್ಯಂತ ಪ್ರಚಾರ ಮಾಡುವ ದಿಶೆಯಲ್ಲಿ ಶುಭಾರಂಭವಾಗಿರುವ ಇಂದಿನ ಸಮ್ಮೇಳನದ ಸೂತ್ರಧಾರರಾಗಿರುವ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಕಾರ್ಯ ವಂದನೀಯ ಹಾಗೂ ಅಭಿನಂದನೀಯ" ಎಂದೂ ಸಚಿವ ರಾಜಶೇಖರನ್ ಭಾವ ತುಂಬಿ ನುಡಿದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಸಮ್ಮೇಳನಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಆಶೀರ್ವಚನ ನೀಡಿ- ಇಷ್ಟಲಿಂಗವು ಯಾವುದೇ ವ್ಯಕ್ತಿ ಅಥವಾ ಪ್ರಾಣಿಯ ಕುರುಹಲ್ಲ. ಸೃಷ್ಟಿಕರ್ತನು ನಿರಾಕಾರ ಮತ್ತು ನಿರಂಜನನಾಗಿದ್ದಾನೆ. ವಿಶ್ವದ ಆಕಾರದಲ್ಲಿಯೇ ಪರಮಾತ್ಮನನ್ನು ಪೂಜಿಸಬೇಕೆಂದು ಶ್ರೀ ಗುರು ಬಸವೇಶ್ವರರು ಇಷ್ಟಲಿಂಗವನ್ನು ಕಂಡುಹಿಡಿದರು. ಇದನ್ನು ಧರಿಸಲು ಯಾವ ಭೇದವೂ ಇಲ್ಲ. ಹಾರುವನಿಂದ ಅಂತ್ಯಜನವರೆಗೆ, ಬ್ರಾಹ್ಮಣರಿಂದ ಅಸ್ಪೃಶ್ಯರವರೆಗೆ ಎಲ್ಲರೂ ಧರಿಸಿ ಪೂಜಿಸಬಹುದು. ದೇವಾಲಯಗಳನ್ನು ಕಟ್ಟಿಕೊಂಡು ಶೋಷಣೆ ಮಾಡುತ್ತಿದ್ದ ಪುರೋಹಿತರ ಶೋಷಣೆಯನ್ನು ತಡೆಯಲು ಶ್ರೀ ಗುರು ಬಸವೇಶ್ವರರು ದೇಹವನ್ನು ದೇವಾಲಯವನ್ನಾಗಿ ಮಾಡಿಕೊಳ್ಳುವ ಸಿದ್ಧಾಂತವನ್ನು ಕೊಟ್ಟರು ಎಂದೂ ನುಡಿದರು.

ಲಿಂಗಾಯತ ಧರ್ಮ ಸ್ವತಂತ್ರ ಧರ್ಮ, ಸ್ವಾವಲಂಬಿ ಧರ್ಮ, ಜೈನ, ಬೌದ್ಧ, ಸಿಖ್ ಧರ್ಮಗಳಂತೆ ಲಿಂಗಾಯತವೂ ಕೂಡಾ ಸ್ವತಂತ್ರ ಧರ್ಮ. ಆದ್ದರಿಂದ ಈ ಧರ್ಮಕ್ಕೆ ಸಂವಿಧಾನ ಬದ್ಧ ಮಾನ್ಯತೆ ಸಿಗಬೇಕು. ಸಚಿವ ಎಂ.ವಿ. ರಾಜಶೇಖರನ್ ಅವರು ತಮ್ಮ ಅಧಿಕಾರದ ಅವಧಿಯಲ್ಲಿ ಕೇಂದ್ರ ಸರ್ಕಾರಕ್ಕೆ ಈ ವಿಷಯವನ್ನು ಮನವರಿಕೆ ಮಾಡಿಕೊಡಬೇಕು." ಎಂದು ಪೂಜ್ಯ ಮಾತಾಜಿ ಆಗ್ರಹಿಸಿದರು.

ಇಷ್ಟಲಿಂಗ ಪೂಜಾ ಪ್ರಾತ್ಯಕ್ಷಿಕೆ ತೋರಿಸಿಕೊಟ್ಟ ಪೂಜ್ಯ ಮಾತಾಜಿಯವರು ಇಳೆ, ಬೆಳೆ, ಮಳೆ ಎಲ್ಲವನ್ನು ದಾನವಾಗಿ ಕೊಟ್ಟಿರುವ ದೇವರಿಗೆ ಕೃತಜ್ಞತೆ ಸಮರ್ಪಣೆ ಮಾಡುವದೇ ಪೂಜೆ ಎಂದು ವಿವರಿಸಿದರು.

ಪೂಜ್ಯ ಶ್ರೀ ಚನ್ನಬಸವಾನಂದ ಮಹಾಸ್ವಾಮೀಜಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಬಸವ ಜ್ಯೋತಿ ಹಾಗೂ ಬಸವ ವಚನಾಮೃತ ಹಿಂದಿ ಸಿ.ಡಿ ಗಳನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ರಾಜಧಾನಿಯಲ್ಲಿ ಮೆರೆದ ಬಸವ ಮುದ್ರೆ

ಆನೆಯ ಮೇಲೆ ವಚನ ಸಾಹಿತ್ಯದ ಭವ್ಯ ಮೆರವಣಿಗೆ

ಬಸವ ಪೀಠವು ಎದ್ದು ಒಸೆದು ನಾಣ್ಯವು ಹುಟ್ಟಿ
ಬಸವನಾ ಮುದ್ರೆ ಮೆರೆದಾವು, ಧರೆಯವಗೆ
ವಶವಾಗದಿಹುದೇ ಸರ್ವಜ್ಞ?!

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವದಲ್ಲಿ ರಾಷ್ಟ್ರದ ರಾಜಧಾನಿ ನವದೆಹಲಿಯಲ್ಲಿ ಜರುಗಿದ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನದ ನಿಮಿತ್ತ ದಿ.24 ರಂದು ಮಧ್ಯಾಹ್ನ 3 ಗಂಟೆಗೆ ಸಂಪನ್ನಗೊಂಡ ಶೋಭಾಯಾತ್ರೆ ಭಕ್ತಿ-ಶಿಸ್ತುಗಳಿಂದ ಎಲ್ಲರ ಮನಸೂರೆಗೊಂಡಿತು. ದೆಹಲಿಯ ದರಿಯಾಗಂಜ್‌ದಲ್ಲಿನ ಮಹಾವೀರ ವಾಟಿಕಾ ಸಮುದಾಯ ಭವನದ ಆವರಣದಿಂದ ಲಾಲ್ ಕಿಲ್ಲಾ ರಸ್ತೆಯಲ್ಲಿ ಸಾಗಿ ಚಾಂದನಿಚೌಕ್‌ದಲ್ಲಿರುವ ಶೀಸ್ ಗಂಜ್ ಗುರುದ್ವಾರದ ಬಳಿ ಮುಕ್ತಾಯಗೊಂಡ ಮೆರವಣಿಗೆ ಅಭೂತಪೂರ್ವವೆನಿಸಿತು. ಮೆರವಣಿಗೆ ಮುಂಭಾಗ ಮತ್ತು ಮಧ್ಯದಲ್ಲಿ ಎರಡು ಬ್ಯಾಂಡ್ ಸೆಟ್‌ಗಳು, 3000 ಜನ ಶರಣ-ಶರಣೆಯರು ಕಾವಿಯ ಸ್ಕಾರ್ಫ್ ಹೊದ್ದು ಬಸವ ಮಂತ್ರ ಪಠಣ ಮಾಡುತ್ತಾ, ಧ್ವಜಗಳನ್ನು ಕೈಯಲ್ಲಿ ಹಿಡಿದು ಜಯಕಾರ ಹಾಕುತ್ತಾ ಸಾಗಿದರು. ಎರಡು ಸಾಲಂಕೃತ ಆನೆಗಳ ಮೇಲೆ ಬಸವಣ್ಣನವರ ಫೋಟೋ ಮತ್ತು ಕರ್ನಾಟಕ ಸರ್ಕಾರ ಪ್ರಕಟಿಸಿರುವ ಬಸವೇಶ್ವರ ಹಾಗೂ ಸಮಕಾಲೀನ ಶರಣರ 15 ವಚನ ಸಂಪುಟಗಳನ್ನು ಇಟ್ಟು ಮೆರವಣಿಗೆಯು ಉತ್ಸಾಹದಿಂದ ಸಾಗಿದಾಗ ರಾಜಧಾನಿಯ ಜನರು ಆಶ್ಚರ್ಯ- ಆನಂದಗಳಿಂದ ವೀಕ್ಷಿಸುತ್ತಿದ್ದರು.

ಸಾಲಂಕೃತ ಕುದುರೆ ಸಾರೋಟಿನಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ, ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ, ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮೀಜಿ ಆಸೀನರಾಗಿದ್ದರು.

'ಭಾರತ ದೇಶ-ಜೈ ಬಸವೇಶ' 'ಕಟ್ಟುವೆವು ನಾವು ಕಟ್ಟುವೆವು ಕಲ್ಯಾಣ ರಾಜ್ಯ ಕಟ್ಟುವೆವು' ಎಂಬ ಘೋಷಣೆ ಕೂಗುತ್ತಾ ಸಾಗಿದ, ಬಸವ ಲಿಂಗ ಮುದ್ರೆವುಳ್ಳ ಕಾವಿ ಸ್ಕಾರ್ಫ್ ಧರಿಸಿದ್ದ ಶರಣ-ಶರಣೆಯರು ಚಾಂದನಿ ಚೌಕದಲ್ಲಿರುವ ಸೀಸ್ ಗಂಜ್ ಗುರುದ್ವಾರ ಪ್ರವೇಶಿಸಿ ಗುರುದ್ವಾರದಲ್ಲಿ ಶ್ರೀ ಗುರು ತೇಜ್‌ಬಹದ್ದೂರರವರ ಸಮಾಧಿಗೆ ಗೌರವಾರ್ಪಣೆ ಮಾಡಿದರು.

ಗುರುದ್ವಾರದ ಪ್ರಧಾನ ವ್ಯವಸ್ಥಾಪಕ ಸತ್ನಾಮ್ ಸಿಂಗ್‌ರವರು ಪೂಜ್ಯ ಮಾತಾಜಿಯವರಿಗೆ ಅತ್ಯಂತ ಗೌರವದಿಂದ ಬರಮಾಡಿಕೊಂಡು ಶಾಲು ಹೊದಿಸಿ, ಖಡ್ಗವನ್ನು ನೀಡಿ ಸನ್ಮಾನಿಸಿದರು.

"ಈ ಸಂದರ್ಭದಲ್ಲಿ ಮಾತನಾಡಿದ ಅವರು ಪೂಜ್ಯ ಮಾತಾಜಿಯವರ ಆಗಮನ ನಮಗೆ ಹರ್ಷ ತಂದಿದೆ, ಲಿಂಗಾಯತ ಧರ್ಮ - ಸಿಖ್ ಧರ್ಮ ಬೇರೆ ಬೇರೆ ವಿಚಾರ ಹೊಂದಿಲ್ಲ; ನಾವೆಲ್ಲ ತತ್ತ್ವ ಸಾಮರಸ್ಯ ಹೊಂದಿರುವ ಜನರು ; ಒಗ್ಗಟ್ಟಾಗಿ ಬಸವ ತತ್ತ್ವವನ್ನು ಉತ್ತರ ಭಾರತದಲ್ಲಿ ಪ್ರಚಾರ ಮಾಡೋಣ." ಎಂದು ನುಡಿದರು.

ಆಶೀರ್ವಚನ ನೀಡಿದ ಜಗದ್ಗುರು ಮಾತೆ ಮಹಾದೇವಿ ಅವರು ಸಿಖ್ ಧರ್ಮ ಬಂಧುಗಳು ತೋರಿದ ಗೌರವಕ್ಕೆ ಕೃತಜ್ಞತೆ ಅರ್ಪಿಸಿದರಲ್ಲದೆ ಹಿಂದೂ ಸಂಸ್ಕೃತಿಯ ರಕ್ಷಣೆಗಾಗಿ ಸಿಖ್ ಗುರು ತೇಜ್ ಬಹಾದ್ದೂರರು ತಮ್ಮ ಪ್ರಾಣವನ್ನೇ ಬಲಿದಾನ ಮಾಡಿದ್ದಾರೆ. ಅದೇ ರೀತಿ ಭಾರತ ದೇಶದಲ್ಲಿ ಸಮಾನತೆಯನ್ನು ಪ್ರತಿಷ್ಠಾಪಿಸುವ ಯತ್ನದಲ್ಲಿ ಶ್ರೀಗುರು ಬಸವೇಶ್ವರರ ನೇತೃತ್ವದಲ್ಲಿ ಶರಣರು ಮಾಡಿದ ತ್ಯಾಗ ಅವರ್ಣನೀಯ; ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಅಸಂಖ್ಯ ಶರಣರ ಬಲಿದಾನವಾಗಿದೆ. ನಾವೆಲ್ಲ ಸಮಾನ ಮನಸ್ಕರ ಸಾಂಸ್ಕೃತಿಕ ಒಗ್ಗಟ್ಟಾಗಿ ಇಂದು ಭಾರತೀಯ ಭವ್ಯ ಪರಂಪರೆಯನ್ನು ವಿದೇಶಿ ಆಕ್ರಮಣದಿಂದ ತಪ್ಪಿಸುವುದು ತುರ್ತು ಅಗತ್ಯವಾಗಿದೆ." ಎಂದರಲ್ಲದೇ ಸಿಖ್ ಬಾಂಧವರಲ್ಲಿರುವ ಧರ್ಮ ನಿಷ್ಠೆ-ರಾಷ್ಟ್ರ ಭಕ್ತಿ ನಿಜಕ್ಕೂ ಪ್ರಶಂಸನೀಯವಾದುದು ಎಂದು ನುಡಿದರು.

ಮೆರವಣಿಗೆಯಲ್ಲಿ ದೆಹಲಿಯ ಜಾಟವಾ ಹಾಗೂ ವಾಲ್ಮೀಕಿ ಸಮಾಜದವರು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದರು.

ಸಮಾರೋಪ ಸಮಾರಂಭ

ಸಮ್ಮೇಳನದ ನಿರ್ಣಯಗಳ ಘೋಷಣೆ

1.) ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವಾಗಿದ್ದು, 12ನೆಯ ಶತಮಾನದಲ್ಲಿ ಶ್ರೇಷ್ಠ ಸಮಾಜ ಸುಧಾರಕ ಬಸವಣ್ಣನವರಿಂದ ಸ್ಥಾಪಿತವಾದ ವಚನ ಸಾಹಿತ್ಯ ಆಧಾರಿತವಾದ ಧರ್ಮವಾಗಿದೆ. ಭಾರತದಲ್ಲಿ ಹುಟ್ಟಿದ್ದರೂ ಸ್ವತಂತ್ರ ಧರ್ಮಗಳೆಂದು ಜೈನ, ಬೌದ್ಧ ಮತ್ತು ಸಿಖ್ ಧರ್ಮಗಳಿಗೆ ಸಾಂವಿಧಾನಿಕ ಮಾನ್ಯತೆಯನ್ನು ಕೊಡಲಾಗಿದೆ. ಅದರಂತೆಯೇ ಜಾತಿ-ವರ್ಣ ವ್ಯವಸ್ಥೆ ಒಪ್ಪದ ಏಕ ದೇವೋಪಾಸನೆಯ ಲಿಂಗಾಯತ ಧರ್ಮಕ್ಕೂ ಸಂವಿಧಾನಾತ್ಮಕ ಮನ್ನಣೆ ನೀಡಬೇಕೆಂದು ಕೇಂದ್ರ ಸರ್ಕಾರವನ್ನು ಆಗ್ರಹಿಸಲಾಯಿತು.

2.) ದ್ರಾವಿಡ ಭಾಷೆಗಳಲ್ಲಿ ಪ್ರಮುಖ ಭಾಷೆಯಾಗಿರುವ ಕನ್ನಡವು ರೂಪ, ಮಧುರತೆ, ಸಮಗ್ರತೆಯ ದೃಷ್ಟಿಯಿಂದ ಪರಿಪೂರ್ಣ ಭಾಷೆಯಾಗಿರುವುದು ಮಾತ್ರವಲ್ಲ ವಚನ ಸಾಹಿತ್ಯದಂತಹ ಸತ್ವಭರಿತ ದಾರ್ಶನಿಕ ಸಾಹಿತ್ಯವನ್ನು ಹೊಂದಿದೆ. ತಮಿಳು ಭಾಷೆಗೆ ನೀಡಿದಂತೆ ಕನ್ನಡಕ್ಕೂ ಶಾಸ್ತ್ರೀಯ ಭಾಷೆಯ ಸ್ಥಾನವನ್ನು ಕೇಂದ್ರ ಸರ್ಕಾರವು ನೀಡಬೇಕೆಂದು ಆಗ್ರಹಿಸಲಾಯಿತು.

3.) ಬಸವಣ್ಣನವರ ಅಶ್ವಾರೂಢ ಪುತ್ಥಳಿಯು ಪಾರ್ಲಿಮೆಂಟ್ ಆವರಣದಲ್ಲಿ ಸ್ಥಾಪಿಸಲ್ಪಟ್ಟಿರುವುದು ಅಭಿನಂದನಾರ್ಹವಾಗಿದ್ದರೂ ಬಿಗಿ ಭದ್ರತೆಯಿಂದಾಗಿ ಜನ ಸಾಮಾನ್ಯರಿಗೆ ನೋಡಲು ಅವಕಾಶವಿಲ್ಲದೆ ಇರುವುದರಿಂದ ಜನರು ನಿರಾಶೆಯಿಂದ ಹಿಂದಿರುಗುವಂತಾಗಿದೆ. ಆದ್ದರಿಂದ ಜನ ಸಾಮಾನ್ಯರ ಗಮನಕ್ಕೆ ಬರುವಂತೆ ದೆಹಲಿಯ ವೃತ್ತವೊಂದಕ್ಕೆ ಬಸವಣ್ಣನವರ ಹೆಸರನ್ನು ಇಡುವುದೇ ಅಲ್ಲದೆ ವೃತ್ತದಲ್ಲಿ ಬಸವಣ್ಣನವರ ಅಭಯ ಹಸ್ತದ ಮೂರ್ತಿಯನ್ನು ಕೂರಿಸಲು ದೆಹಲಿಯ ಮಹಾನಗರ ಸಭೆಗೆ ಮನವಿ ಸಲ್ಲಿಸಲು ನಿರ್ಣಯಿಸಲಾಯಿತು.

4.) ಭಾರತ ದೇಶವು ಹಲವಾರು ಧರ್ಮಗಳಿಗೆ ಜನ್ಮ ನೀಡಿದೆ. ಕೆಲವು ತಾತ್ತ್ವಿಕ ವಿಚಾರಗಳಲ್ಲಿ ಹಿಂದು, ಬೌದ್ಧ, ಜೈನ, ಸಿಖ್ ಹಾಗೂ ಲಿಂಗಾಯತ ಧರ್ಮಗಳಲ್ಲಿ ವ್ಯತ್ಯಾಸವಿದ್ದರೂ ಸಾಂಸ್ಕೃತಿಕವಾಗಿ ಏಕರೂಪತೆಯಿಂದ ಹಲವಾರು ಆಚಾರ-ವಿಚಾರಗಳಲ್ಲಿ ಸಮಾನವಾದ ಅಂಶಗಳಿವೆ. ಭಾರತೀಯ ಸಾಂಸ್ಕೃತಿಕ ಮತ್ತು ಧಾರ್ಮಿಕ ಪರಂಪರೆಯ ಸಂರಕ್ಷಣೆಯ ದೃಷ್ಟಿಯಿಂದ ಈ ಐದೂ ಧರ್ಮಗಳವರು ಒಟ್ಟಾಗಿ ಕಾರ್ಯಮಾಡಬೇಕೆಂದು ಭಾರತೀಯ ಧರ್ಮಗಳ ಮಹಾಸಂಘವನ್ನು ರಚಿಸಿದ್ದು, ಅದರಂತೆ ಜನಜಾಗೃತಿ ಕಾರ್ಯವನ್ನು ಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.

5.) ಲಿಂಗಾಯತ ಧರ್ಮವನ್ನು ಬಸವಣ್ಣನವರು ಕೊಟ್ಟಾಗ ಹಲವಾರು ಜಾತಿ ಮತ್ತು ಉದ್ಯೋಗಗಳವರು 12ನೆಯ ಶತಮಾನದಿಂದ ಇಂದಿನವರೆಗೆ ಸ್ವೀಕರಿಸಿದ್ದಾರೆ. ಆದರೆ ಹೆಸರುಗಳ ಜೊತೆ ಅಡ್ಡ ಹೆಸರುಗಳನ್ನು ಜಾತಿ ಸೂಚಕ ಮತ್ತು ವೃತ್ತಿ ಸೂಚಕವಾಗಿ ಇಟ್ಟುಕೊಳ್ಳುವುದರಿಂದ ಕೆಲವರು ಮೇಲ್ಜಾತಿಯಿಂದ ಬಂದವರು ಕೆಳ ಜಾತಿಯವರನ್ನು ಭೇದ ಭಾವದಿಂದ ನೋಡುತ್ತಾರೆ. ಇದನ್ನು ತಪ್ಪಿಸಬೇಕಾದರೆ ಜಾತಿ-ವೃತ್ತಿ ಸೂಚಕ ಯಾವುದೇ ಅಡ್ಡ ಹೆಸರು ಬಳಸದೆ ಪ್ರತಿಯೊಬ್ಬ ಲಿಂಗಾಯತನೂ ಹೆಸರಿನ ಜೊತೆ ಲಿಂಗಾಯತ ಎಂದು ಬರೆದುಕೊಳ್ಳುವ ಪರಿಪಾಠ ರೂಢಿಸಿಕೊಳ್ಳಬೇಕು. ಸಿಖ್ ಜನಾಂಗದಲ್ಲಿ ಹೆಸರಿನ ಜೊತೆ "ಸಿಂಗ್" ಎಂದು, ಜೈನರಲ್ಲಿ "ಜೈನ್" ಎಂದು ಬರೆದುಕೊಳ್ಳುವಂತೆ ಲಿಂಗಾಯತರೂ ಧರ್ಮ ಸೂಚಕ ಅಡ್ಡ ಹೆಸರು ಬಳಸಿ ಸಮಾನತೆಯನ್ನು ತರಲು ಯತ್ನಿಸಬೇಕು.

6.) ದೀಪಾವಳಿಯು ಪಟಾಕಿಯ ಹಬ್ಬವೆಂದು ಮನೆಮನೆಗಳಲ್ಲಿ ಸಾವಿರಾರು ರೂಪಾಯಿಗಳ ಪಟಾಕಿ ಸುಡಲಾಗುವುದು. ಇದು ಹಣವನ್ನು ಅಪವ್ಯಯ ಮಾಡುವುದಲ್ಲದೆ ಅನೇಕ ಅಗ್ನಿ ದುರಂತಗಳಿಗೆ ಕಾರಣವಾಗುತ್ತದೆ. ಎತ್ತರಕ್ಕೆ ಹೋಗುವ ರಾಕೆಟ್ ಮುಂತಾದವು ಕಷ್ಟಪಟ್ಟು ಬೆಳೆಸಿದ

ತೆಂಗಿನ ಗಿಡದಂತಹ ವೃಕ್ಷಗಳನ್ನೇ ಸುಡುತ್ತವೆ. ಪಟಾಕಿ ತಯಾರು ಮಾಡುವ ಎಷ್ಟೋ ಕಾರ್ಖಾನೆಗಳಲ್ಲಿ ಕಾರ್ಮಿಕರು ಅಗ್ನಿ ದುರಂತದಲ್ಲಿ ಮಡಿಯುತ್ತಾರೆ. ಆದ್ದರಿಂದ ಬಸವ ತತ್ತ್ವಾನುಯಾಯಿಗಳು ಪಟಾಕಿ ಹೊಡೆಯದೆ ಆ ಹಣವನ್ನು ಬಡ ವಿದ್ಯಾರ್ಥಿಗಳಿಗೆ ನೆರವು ನೀಡಲು ವಿನಿಯೋಗಿಸಬೇಕೆಂದು ನಿರ್ಣಯಿಸಲಾಯಿತಲ್ಲದೆ ಸಮ್ಮೇಳನದ ಪ್ರತಿನಿಧಿಗಳು ತಾವು ಪಟಾಕಿ ಸುಡುವುದಿಲ್ಲವೆಂಬ ಪ್ರತಿಜ್ಞೆ ಕೈಗೊಂಡರು.

7.) ಸಿಖ್ ಧರ್ಮದ ಸಂತರು ಪಂಜಾಬಿ ಭಾಷೆಯಲ್ಲಿ ಗುರು ಗ್ರಂಥವನ್ನು ಬರೆದ ಕಾರಣ ಅವರು ಪಂಜಾಬಿ ಭಾಷೆಯನ್ನು "ಗುರು ಮುಖಿ ಭಾಷೆ" ಎನ್ನುತ್ತಾರೆ. ಅದೇ ರೀತಿ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ಕನ್ನಡದಲ್ಲಿ ವಚನ ಸಾಹಿತ್ಯವನ್ನು ರಚಿಸಿದ್ದು, ಲಿಂಗಾಯತರು ಕನ್ನಡವನ್ನು "ಶರಣ ಭಾಷೆ" ಎಂದು ಧಾರ್ಮಿಕವಾಗಿ ಸಂಬೋಧಿಸಬೇಕೆಂದು ನಿರ್ಣಯಿಸಲಾಯಿತು.

8.) ಲಿಂಗಾಯತ ಧರ್ಮದ ಗಣಲಾಂಛನವನ್ನಾಗಿ ಬಸವ ಲಿಂಗ ಮುದ್ರೆಯನ್ನು ಸ್ವೀಕರಿಸಲಾಗಿದೆ. ಒಂದು ವೃತ್ತ ಅದರೊಳಗೆ ಷಟ್‌ಕೋನ, ಮಧ್ಯೆ ಇಷ್ಟಲಿಂಗ. ಈ ಲಾಂಛನವನ್ನು ಮಠ-ಮನೆಗಳ ಮೇಲೆ, ವಾಹನಗಳ ಮೇಲೆ ಹೀಗೆ ಎಲ್ಲೆಡೆಯಲ್ಲಿ ಬಳಕೆಗೆ ತರಬೇಕೆಂದು ನಿರ್ಣಯಿಸಲಾಯಿತು.

ಸದರಿ ನಿರ್ಣಯಗಳನ್ನು ಸಮ್ಮೇಳನಾಧ್ಯಕ್ಷ ಪೂಜ್ಯ ಶ್ರೀ ಮಹಾ ಜಗದ್ಗುರು ಮಾತೆ ಮಹಾದೇವಿಯವರು ಘೋಷಿಸಿದರು. ಸಮಾವೇಶಗೊಂಡಿದ್ದ ಸಾವಿರಾರು ಶರಣ ಶರಣೆಯರು ನಿರ್ಣಯಗಳನ್ನು ಧ್ವನಿ ಮತದಿಂದ ಅಂಗೀಕರಿಸಿದರು.

ಇದೇ ಸಂದರ್ಭದಲ್ಲಿ ಸಮ್ಮೇಳನಕ್ಕೆ ಸೇವೆ ಸಲ್ಲಿಸಿದ ಶ್ರೀ ಸತ್ಯೇಂದ್ರ ಜೈನ್, ಶ್ರೀ ನಿರಂಜನ ಸ್ವಾಮಿ, ವೈಜನಾಥ ಬಿರಾದಾರ, ಸೋಮನಾಥ ಬಿರಾದಾರ, ರಮೇಶ ಮಹೇಶಕರ, ಮಹಾಂತೇಶ ಯೋಗಾಚಾರ್ಯ ಮುಂತಾದ ಅನೇಕ ಮಹನೀಯರುಗಳನ್ನು ಬಸವ ಧರ್ಮ ಪೀಠದ ವತಿಯಿಂದ ಸತ್ಕರಿಸಿ ಗೌರವಿಸಲಾಯಿತು.

~~~~~~

ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ, ಶರಣ ವ್ರತಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 40 ದಿವಸಗಳ ಗುರು ಸಾರಾಯ ಸಂಪದ್‌ವ್ರತ, 30 ದಿವಸಗಳ ಲಿಂಗ ಸಾರಾಯ ಸಂಪದ್ ವ್ರತ 20 ದಿವಸಗಳ ಜಂಗಮ ಸಾರಾಯ ಸಂಪದ್‌ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್‌ವ್ರತ ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ.14-1-2005ರಂದು ವ್ರತವನ್ನು ಪೂರ್ತಿಗೊಳಿಸಬೇಕು. ಇವನ್ನು ಪ್ರಾರಂಭ ಮಾಡುವ ದಿನಾಂಕಗಳು ಹೀಗಿವೆ.

1. ಗುರು ಸಾರಾಯ ಸಂಪದ್‌ವ್ರತ - ಡಿಸೆಂಬರ್ 2 ರಂದು
2. ಲಿಂಗ ಸಾರಾಯ ಸಂಪದ್‌ವ್ರತ - ಡಿಸೆಂಬರ್ 12ರಂದು
3. ಜಂಗಮ ಸಾರಾಯ ಸಂಪದ್‌ವ್ರತ - ಡಿಸೆಂಬರ್ 22, 25ರಂದು
4. ಪ್ರಸಾದ ಸಾರಾಯ ಸಂಪದ್‌ವ್ರತ - ಜನವರಿ 1 ರಂದು

ಶರಣ ಮೇಳ ಉತ್ಸವ ಸಮಿತಿ,
ಬಸವ ಮಂಟಪ, 2035, 20ನೆಯ ಮುಖ್ಯ ರಸ್ತೆ, ಕಾರ್ಡ್ ರೋಡ್
2ನೆಯ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ಕರ್ನಾಟಕ ರಾಜ್ಯ, ಭಾರತ
ದೂರವಾಣಿ : 080-23325335 /23322790

ಲಿಂಗಾಯತ ಧರ್ಮಕ್ಕೆ ಆಶಾಕಿರಣ ಪೂಜ್ಯ ಮಾತಾಜಿ

2005ರ ಅಕ್ಟೋಬರ್ 21,22,23 ಮತ್ತು 24 ಈ ನಾಲ್ಕು ದಿನಗಳು ಕೇವಲ ಲಿಂಗಾಯತ ಧರ್ಮದ ಇತಿಹಾಸವಷ್ಟೇ ಅಲ್ಲ ಇಡೀ ಭಾರತದ ಧಾರ್ಮಿಕ ಇತಿಹಾಸದ ಪುಟಗಳಲ್ಲಿ ಶಾಶ್ವತವಾಗಿ ಉಳಿಯಲೇಬೇಕಾದ ದಿನಗಳು. ಏಕೆಂದರೆ ಎಂಟುನೂರು ವರ್ಷಗಳ ಹಿಂದೆಯೇ ಪ್ರಜಾಪ್ರಭುತ್ವದ ಕಲ್ಯಾಣ ರಾಜ್ಯವನ್ನು ಕಟ್ಟಿ ಸಮತಾವಾದದ ಧ್ವಜವನ್ನು ಹಾರಿಸಿದ ಮಹಾಮಾನವತಾವಾದಿ ಗುರು ಬಸವೇಶ್ವರರ ತತ್ತ್ವದ ಕಹಳೆಯನ್ನು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಮೊಳಗಿಸಿದ್ದಾರೆ. ಪೂಜ್ಯ ಮಾತಾಜಿಯವರ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ 4 ದಿನ ನಡೆದ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ಜರುಗಿತು. ಸಾಮಾನ್ಯವಾಗಿ ಯಾವುದಾದರೂ ಒಂದು ಘಟನೆ ಅಥವಾ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತೆಂದರೆ ಅದನ್ನು ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಡುವಂಥದ್ದು ಎಂದು ಬಣ್ಣಿಸುವುದು ವಾಡಿಕೆ. ಆದರೆ ಯಾವ ಘಟನೆಯನ್ನೂ ಇಲ್ಲಿಯವರೆಗೆ ಬಂಗಾರದ ಅಕ್ಷರಗಳಿಂದ ಬರೆದಿಡಲಾಗಿಲ್ಲ. ಚಿನ್ನದ ಅಕ್ಷರಗಳಿಂದ ಬರೆಯುವುದೆಂದರೆ ಅದು ಅತ್ಯಂತ ಮಹತ್ವದ ಘಟನೆ ಎಂದು ನಾವು ಅರ್ಥೈಸಿಕೊಳ್ಳಬೇಕು.

ಘಟನೆ ಎಂದಾಕ್ಷಣ ನನಗೆ ಒಂದು ನಗೆ ಹನಿ ನೆನಪಾಯಿತು. ನಾನು ಎಂ.ಎ. ಓದುತ್ತಿರುವಾಗ ವಿಶ್ವ ವಿದ್ಯಾಲಯಕ್ಕೆ ಹೋಗಲು ಸಿಟಿ ಬಸ್‌ಗಾಗಿ ಕಾಯುತ್ತಿದ್ದೆ. ಒಬ್ಬ ಪ್ರಾಥಮಿಕ ಶಾಲೆ ವಿದ್ಯಾರ್ಥಿ ನನ್ನ ಹತ್ತಿರ ಬಂದು ನಿಂತುಕೊಂಡ. ಏನಪ್ಪ ಮಗು ನಿನ್ನ ಹೆಸರೇನು ? ಅಂತ ಕೇಳಿದೆ. ನನ್ನ ಹೆಸರು ಪಿಂಟು ಅಂದ. ಘಟನೆ ಮತ್ತು ದುರ್ಘಟನೆ ಇದರ ಅರ್ಥ ಗೊತ್ತಾ ? ಅಂತ ಪ್ರಶ್ನೆ ಕೇಳಿದೆ. ಆಗ ಆತ ಹೇಳಿದ "ಅಂಕಲ್, ಇತ್ತೀಚೆಗೆ ನಮ್ಮ ಶಾಲೆಯಲ್ಲಿ ಬೆಂಕಿ ದುರಂತ ಸಂಭವಿಸಿ ಇಡೀ ಶಾಲೆ ಸುಟ್ಟು ಭಸ್ಮವಾಗಿದೆ. ಇದು ಘಟನೆ; ಆದರೆ ನಮ್ಮ ಟೀಚರ್ ಅದರಿಂದ ಪಾರಾಗಿ ಬದುಕಿದ್ದಾರೆ; ಅದು ದುರ್ಘಟನೆ." ಅಂದ. ಯಾಕೆಂದರೆ ಟೀಚರ್ ಕೂಡ ಸತ್ತು ಹೋಗಿದ್ರೆ, ಶಾಲೆಗೆ ರಜೆ ಸಿಗುತ್ತಿತ್ತು ಅನ್ನೋದು ಆತನ ಭಾವನೆ.

ಇದು ಲಿಂಗಾಯತ ಸಮಾಜಕ್ಕೆ ಅತ್ಯಂತ ಸೂಕ್ತವಾದ ಹೋಲಿಕೆ ಎನಿಸುತ್ತದೆ. ಎಂಟು ನೂರು ವರ್ಷಗಳ ಹಿಂದೆಯೇ ಸಮತಾವಾದವನ್ನು ಪ್ರತಿಪಾದಿಸಿ, ಅತ್ಯಂತ ಪ್ರಗತಿಪರವಾದ ಸ್ವತಂತ್ರ ಲಿಂಗಾಯತ ಧರ್ಮವನ್ನು ಗುರು ಬಸವಣ್ಣನವರು ಕೊಟ್ಟಿದ್ದು ಐತಿಹಾಸಿಕವಾದ ಘಟನೆ. ಆದರೆ ಎಂಟು ಶತಮಾನ ಕಳೆದರೂ ಕೇಂದ್ರ ಸರ್ಕಾರದಿಂದ ಸಾಂವಿಧಾನಿಕ ಮಾನ್ಯತೆ ಪಡೆಯದೆ, ಕರ್ನಾಟಕ ರಾಜ್ಯಕ್ಕೆ ಮಾತ್ರ ಈ ಧರ್ಮವನ್ನು ಸೀಮಿತಗೊಳಿಸಿರುವುದು ದುರ್ಘಟನೆಯೇ ಸರಿ.

ತಾತ್ತ್ವಿಕ ದೃಢತೆಯಿಲ್ಲದ ಮಠಾಧಿಪತಿಗಳು, ನಿರಭಿಮಾನಿ ರಾಜಕಾರಣಿಗಳು, ಮೂಢಜನಗಳೇ ಹೆಚ್ಚಿನ ಪ್ರಮಾಣದಲ್ಲಿರುವ ಈ ಲಿಂಗಾಯತ ಸಮಾಜಕ್ಕೆ ಪೂಜ್ಯ ಮಾತಾಜಿಯವರು ಆಶಾ ಕಿರಣವಾಗಿದ್ದಾರೆ. ಎಷ್ಟೇ ತೊಂದರೆಗಳು ಎದುರಾದರೂ ನಿರಾಶರಾಗದೆ ಆಶಾವಾದಿಗಳಾಗಿ ಈ ಲಿಂಗಾಯತ ಧರ್ಮವನ್ನು ಸ್ವತಂತ್ರಗೊಳಿಸಲು ಅಹರ್ನಿಶ ದುಡಿಯುತ್ತಿದ್ದಾರೆ. ಲಿಂಗಾಯತ ಧರ್ಮ ಮತ್ತು ಸಮಾಜವನ್ನು ಸಿಖ್ ಧರ್ಮದಂತೆ ಜಾಗತಿಕ ಮಟ್ಟದಲ್ಲಿ ಬೆಳೆಸಲು ಸಂಕಲ್ಪ ತೊಟ್ಟಿದ್ದಾರೆ. "ಕೇವಲ ಐದು ನೂರು ವರ್ಷಗಳಲ್ಲಿ ವಿಶ್ವವ್ಯಾಪಿಯಾಗಿ ತಮ್ಮ ಧರ್ಮವನ್ನು ಬೆಳೆಸಿರುವ ಸಿಖ್ ಬಾಂಧವರು ನಮಗೆ ಆದರ್ಶವಾಗಿದ್ದಾರೆ. ಅವರಿಂದ ನಾವು ಕಲಿಯಬೇಕಾದುದು ಸಾಕಷ್ಟಿದೆ." ಎನ್ನುತ್ತಾರೆ ಮಾತಾಜಿ.

ಲಿಂಗಾಯತ ಧರ್ಮದ ಬೆಳವಣಿಗೆ ಮತ್ತು ಪ್ರಚಾರದಿಂದ ಕೇವಲ ಭಾರತ ಮಾತ್ರವಲ್ಲ ಇಡೀ ವಿಶ್ವದ ಕಲ್ಯಾಣವಾಗಲಿದೆ. ಗುರು ಬಸವಣ್ಣನವರ ತತ್ತ್ವ ವಿಶ್ವ ಮಾನ್ಯವಾಗಿವೆ. ಈ ಲಿಂಗಾಯತ ಧರ್ಮದ ಒಳಿತಿಗಾಗಿ ಪರಮ ಪೂಜ್ಯ ಮಹಾ ಜಗದ್ಗುರು ಮಾತೆ ಮಹಾದೇವಿಯವರು ಕಳೆದ 35 ವರ್ಷಗಳಿಂದ ಇಟ್ಟಿರುವ ಒಂದೊಂದು ಹೆಜ್ಜೆಯೂ ಮೈಲಿಗಲ್ಲಾಗಿವೆ. ಅವರು ತಮ್ಮ ದಿವ್ಯ ಲೇಖನಿಯಿಂದ ಬರೆದಿರುವ ಪ್ರತಿಯೊಂದು ಗ್ರಂಥವೂ ಈ ಸಮಾಜಕ್ಕೆ ದಾರಿದೀಪವಾಗಿವೆ. ಹಮ್ಮಿಕೊಂಡ ಕಾರ್ಯಕ್ರಮಗಳೆಲ್ಲವೂ ಇತಿಹಾಸದ ಪುಟ ಸೇರಬೇಕಾದಂತವು; ಸುವರ್ಣಾಕ್ಷರಗಳಿಂದ ಬರೆದಿಡಲ್ಪಡುವಂತವುಗಳಾಗಿವೆ.
~~~~~~

ಸುವರ್ಣಾಕ್ಷರವೆಂದು ಹೇಳಲು ನನಗೆ ಸ್ವಲ್ಪ ಮುಜುಗರವೆನಿಸುತ್ತದೆ. ಕಾರಣವೇನೆಂದರೆ ಚಿನ್ನದ ಅಕ್ಷರವೆಂದಾಗ ಅದನ್ನು ಕಳವು ಮಾಡುವವರು ಈ ದೇಶದಲ್ಲಿ ತುಂಬಾ ಜನರಿದ್ದಾರೆ. ವಿಜಯ ಕರ್ನಾಟಕ ಪತ್ರಿಕೆಯ ಸಂಪಾದಕ ಶ್ರೀ ವಿಶ್ವೇಶ್ವರ ಭಟ್‌ರಂಥವರು ಸಾಮಾನ್ಯ ಮಸಿಯಿಂದ ಬರೆಯಲಿಕ್ಕೂ ಹೆದರುತ್ತಿರುವಾಗ ಸುವರ್ಣಾಕ್ಷರಗಳಿಂದ ಬರೆಯಲು ಸಾಧ್ಯವಾದೀತೆ? ಇಂಥವರಿಂದಲೇ ಭಾರತದ ಇತಿಹಾಸ ತಿರುವು ಮುರುವಾಗಿ ತನ್ನ ನೈಜತೆ ಕಳೆದು ಕೊಂಡಿದೆ. ಆರ್ಯರ ಪುರೋಹಿತಶಾಹಿ ಸಂಸ್ಕೃತಿಯೇ ಈ ದೇಶದ ಏಕೈಕ ಸಂಸ್ಕೃತಿ ಎಂಬಂತೆ ಇತಿಹಾಸ ನಿರ್ಮಿಸಲಾಗಿದೆ. ಪುರೋಹಿತಶಾಹಿ, ಜಾತಿವಾದ, ಅಸ್ಪೃಶ್ಯತೆ ವೈದಿಕ ಧರ್ಮದ ಅರ್ಥಹೀನ ಸಂಪ್ರದಾಯಗಳ ವಿರುದ್ಧ ನಡೆದ ಅದೆಷ್ಟೋ ಚಳುವಳಿಗಳ ಬಗ್ಗೆ ಭಾರತದ ಇತಿಹಾಸದಲ್ಲಿ ದಾಖಲೆಯಿಲ್ಲ. ಇದ್ದರೂ ಪ್ರಚಾರವಾಗದಂತೆ ಅದುಮಿಡಲ್ಪಟ್ಟಿವೆ, ಇಂದಿಗೂ ಅದು ಮುಂದುವರಿದಿದೆ.

ಅಮೆರಿಕ ಕ್ರಾಂತಿ, ಫ್ರೆಂಚ್ ಕ್ರಾಂತಿಯ ರಷ್ಯನ್ ಕ್ರಾಂತಿ ಬಗ್ಗೆ ಕರ್ನಾಟಕದ ಮಕ್ಕಳು ಚೆನ್ನಾಗಿ ಹೇಳಬಲ್ಲರು; ಆದರೆ ಅವರಿಗೆ ಗುರು ಬಸವೇಶ್ವರರ ನೇತೃತ್ವದಲ್ಲಿ ಜಗತ್ತಿನ ಇತಿಹಾಸದಲ್ಲಿಯೇ ಮೊಟ್ಟಮೊದಲ ಬಾರಿಗೆ ನಡೆದ 'ಕಲ್ಯಾಣ ಕ್ರಾಂತಿ, ಬಗ್ಗೆ ಗೊತ್ತಿಲ್ಲ. ತಪ್ಪು ವಿದ್ಯಾರ್ಥಿಗಳದ್ದಲ್ಲ. ದುರುದ್ದೇಶದಿಂದಲೇ ಈ ದೇಶದಲ್ಲಿ ಇಂಥ ಘಟನೆಗಳನ್ನು ಇತಿಹಾಸದ ಪುಟಗಳಿಂದ ಮರೆಮಾಚುವ ಸುಸಂಘಟಿತ ಯತ್ನ ನಡೆದಿದೆ; ಈಗಲೂ ನಡೆಯುತ್ತಿದೆ.

ಆದರೆ ಪೂಜ್ಯ ಮಾತಾಜಿಯವರು ಇಂದು ಸಮತಾವಾದದ ವಿರೋಧಿಗಳಿಗೆ ಜಾತಿವಾದಿಗಳಿಗೆ ಸವಾಲಾಗಿ ನಿಂತಿದ್ದಾರೆ. ಅವರ ಅವಿರತ ಶ್ರಮ ಹಾಗೂ ಅಪೂರ್ವ ತ್ಯಾಗದಿಂದ ಲಿಂಗಾಯತ ಧರ್ಮವು ಕರ್ನಾಟಕದ ಪ್ರತಿ ಹಳ್ಳಿಗಳಲ್ಲಿ ಮತ್ತು ರಾಷ್ಟ್ರದ ರಾಜಧಾನಿ ದೆಹಲಿ ಮಾತ್ರವಲ್ಲದೆ, ಅಮೆರಿಕ, ಇಂಗ್ಲೆಂಡ್ ಮುಂತಾದ ಸಪ್ತಸಾಗರದಾಚೆಗಿನ ಪಾಶ್ಚಾತ್ಯ ರಾಷ್ಟ್ರಗಳವರೆಗೂ ಪರಿಚಿತಗೊಳ್ಳುತ್ತಿದೆ.

ಪೂಜ್ಯ ಮಾತಾಜಿಯವರು ಕ್ಷಣ ಕ್ಷಣಕ್ಕೂ ದೈವೀ ಪ್ರೇರಣೆ ಪಡೆಯುವುದನ್ನು ಕಂಡಾಗ ನಮಗೆ ಆಶ್ಚರ್ಯವೆನಿಸುತ್ತದೆ. ಯಾರಿಗೂ ಹೊಳೆಯದೇ ಇರುವ ವಿಚಾರ ಪೂಜ್ಯ ಮಾತಾಜಿಯವರಲ್ಲಿ ಸ್ಫುರಣವಾಗುತ್ತವೆ. ಪೂಜ್ಯ ಮಾತಾಜಿಯವರು ಏನಾದರೂ ಹೇಳಿದಾಗ ಆರಂಭದಲ್ಲಿ ಇದು ಸಾಧ್ಯವೇ? ಎಂದು ಅನೇಕರು ಸಂದೇಹ ಪಡುವುದುಂಟು. ಕೊನೆಗೆ ಅದು ಯಶಸ್ವಿಯಾದಾಗ ಅವರೇ ಕೊಂಡಾಡುತ್ತಾರೆ. "ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ. ಆದರೆ ದೇವನ ಅನುಗ್ರಹವನ್ನು ಹೊಂದಿ, ಸಾಧಿಸುವ ಛಲ ಬೇಕು; ಫೇಲ್ ಎಂಬ ಪದವು ನಮ್ಮ ಶಬ್ದಕೋಶದಲ್ಲಿ ಇಲ್ಲವೇ ಇಲ್ಲ, ಗುರು ಬಸವಣ್ಣನವರನ್ನು ಸ್ಮರಿಸಿ ಮಾಡುವ ಪ್ರತಿಯೊಂದು ಕಾರ್ಯವೂ ಯಶಸ್ವಿಯೆ." ಎಂಬುದು ಪೂಜ್ಯ ಮಾತಾಜಿಯವರ ದೃಢವಾದ ನಂಬಿಕೆ. ಅದು ನಿಜವೂ ಹೌದು. ಈ ಹಿಂದೆ 1997ರಲ್ಲಿ ದೆಹಲಿಯ ಕೆಂಪು ಕೋಟೆ(ಲಾಲ್ ಕಿಲ್ಲಾ) ಮೈದಾನದಲ್ಲಿ ಸಮ್ಮೇಳನ ಮಾಡಿದ್ದು ಪೂರ್ವನಿಯೋಜಿತವಾಗಿತ್ತು. ಆರು ತಿಂಗಳ ಮುಂಚೆಯೇ ವಿವಿಧ ಕ್ಷೇತ್ರಗಳಿಂದ ದೆಹಲಿಯವರೆಗೆ ಜ್ಯೋತಿ ಯಾತ್ರೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಪ್ರಚಾರ ಹಾಗೂ ಕಾಣಿಕೆ ಸಂಗ್ರಹಕ್ಕಾಗಿ ಸಾಕಷ್ಟು ಸಮಯಾವಕಾಶವಿತ್ತು. ಆದರೆ ಈ ಸಲ ಸೆಪ್ಟೆಂಬರ್ ಮೊದಲ ವಾರದವರೆಗೂ ಸಮ್ಮೇಳನ ನಡೆಯುವುದೆಂಬ ಭರವಸೆ ನಮಗಿರಲಿಲ್ಲ. ಕಾರಣ ದೆಹಲಿಯಲ್ಲಿ ಕಾರ್ಯಕ್ರಮ ಮಾಡಲು ಸಭಾಂಗಣ ಹಾಗೂ ಮೈದಾನ ಸಿಗುವುದೇ ಕಷ್ಟ. ಕೊನೆಗೂ ನಮಗೆ ದರಿಯಾಗಂಜ್‌ನಲ್ಲಿರುವ ಎಂ.ಸಿ.ಡಿ ಸಮುದಾಯ ಭವನ, ಮಹಾವೀರ ವಾಟಿಕಾ ಲಭಿಸಿತು. ಕೇವಲ ಒಂದೇ ತಿಂಗಳಲ್ಲಿ 3 ಸಾವಿರ ಜನರ ವಸತಿ ವ್ಯವಸ್ಥೆ ಹಾಗೂ ಕಾರ್ಯಕ್ರಮದ ಇತರೆ ಸಿದ್ಧತೆಗಳನ್ನು ಮಾಡಿಕೊಳ್ಳಲಾಯಿತು. ಪೂಜ್ಯ ಮಾತಾಜಿಯವರು ನಿಗದಿ ಪಡಿಸಿದಂತೆ ಅಕ್ಟೋಬರ್ 21,22,23 ಮತ್ತು 24 ರಂದು ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ಜರುಗಿತು. ಗುರು ಬಸವಣ್ಣನವರು ತಮ್ಮ ಕಾರ್ಯವನ್ನು ಮಾಡಿಸಿಕೊಳ್ಳಲು ತಮ್ಮ ಮಮತೆಯ ಮಗಳಾದ ಮಾತಾಜಿಯವರನ್ನು ಆರಿಸಿ ಕೊಂಡಿದ್ದಾರೆ. ಆದ್ದರಿಂದ ಅವರ ಮೂಲಕ ಪ್ರೇರಣೆ ನೀಡಿ ಇಂತಹ ಮಹತ್ಕಾರ್ಯಗಳನ್ನು ಮಾಡಿಸಿಕೊಳ್ಳುತ್ತಿದ್ದಾರೆ.

"ನೀವು ಪರಿಪೂರ್ಣಾತ್ಮನೆಂದು ಬಸವಣ್ಣಂಗೆ ಕಾರುಣ್ಯದ ಮಾಡಿದಿರಿ" ಎಂದು ಶರಣರು

ಗುರು ಬಸವಣ್ಣನವರನ್ನು ಕುರಿತು ಹೇಳಿದ - ಈ ಮಾತು ಪೂಜ್ಯ ಮಾತಾಜಿಯವರಿಗೂ ಅನ್ವಯವಾಗುತ್ತದೆ. ಪೂಜ್ಯ ಮಾತಾಜಿಯವರು ಪರಿಪೂರ್ಣಾತ್ಮರಾಗಿರುವುದರಿಂದಲೇ ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರು ತಮ್ಮ ದೈವೀ ಕಾರುಣ್ಯವನ್ನು ಸಂಪೂರ್ಣವಾಗಿ ಧಾರೆಯೆರೆದಿದ್ದಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ, ಶರಣ ಭಾಷೆ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಮಾನ್ಯತೆ ಪಡೆಯುವುದರ ಜೊತೆಗೆ ಭಾರತೀಯ ಸಂಸ್ಕೃತಿ ಮತ್ತು ಧಾರ್ಮಿಕ ಪರಂಪರೆಯ ಸಂರಕ್ಷಣೆಗೂ ಪೂಜ್ಯ ಮಾತೆಯವರು ಪ್ರತಿಜ್ಞಾಬದ್ಧರಾಗಿದ್ದಾರೆ. ವಿದೇಶೀ ಮಾದರಿಯ ಶಿಕ್ಷಣ ಹಾಗೂ ಪಾಶ್ಚಾತ್ಯ ಸಂಸ್ಕೃತಿಯ ಆಕ್ರಮಣದಿಂದಾಗಿ ನಶಿಸಿಹೋಗುತ್ತಿರುವ ಭಾರತೀಯ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಭಾರತೀಯ ಮೂಲದ ಧರ್ಮಗಳಾದ ಹಿಂದೂ(ವೈದಿಕ), ಬೌದ್ಧ, ಜೈನ, ಲಿಂಗಾಯತ ಮತ್ತು ಸಿಖ್ ಧರ್ಮಗಳ ನೇತಾರರನ್ನೊಳಗೊಂಡ ಭಾರತೀಯ ಧರ್ಮಗಳ ಮಹಾಸಂಘ (ಒಕ್ಕೂಟ) ರಚಿಸಬೇಕೆಂಬ ಪರಿಕಲ್ಪನೆಯನ್ನು ಪೂಜ್ಯ ಮಾತಾಜಿ ಕೊಟ್ಟರು ಮಾತ್ರವಲ್ಲ; ಲಿಂಗಾಯತ ಧರ್ಮ ಸಮ್ಮೇಳನದಲ್ಲಿ ಅದರ ಉದ್ಘಾಟನೆಯನ್ನೂ ಮಾಡಲಾಯಿತು. ವಿಶ್ವ ಹಿಂದೂ ಪರಿಷತ್‌ನ ಹಲವಾರು ಮುಖಂಡರು, ಸಿಖ್, ಜೈನ, ಬೌದ್ಧ ಧರ್ಮಗಳ ಮುಖಂಡರು ಈ ಬಗ್ಗೆ ಮಾತನಾಡಿ, "ಇಡೀ ಭಾರತದಲ್ಲಿ ಯಾವ ಗುರುಗಳಿಗೂ, ನಾಯಕರಿಗೂ ಹೊಳೆಯದೇ ಇರುವ ಈ ಉಚ್ಚ ವಿಚಾರ ಪೂಜ್ಯ ಮಾತಾಜಿಯವರಿಗೆ ಹೊಳೆದಿದೆ. ಮಾತೆಯವರು ಕೇವಲ ಒಬ್ಬ ವ್ಯಕ್ತಿಯಲ್ಲ; ದೈವೀ ಶಕ್ತಿಯ ಸಾಕಾರ ರೂಪವಾಗಿದ್ದಾರೆ." ಎಂದು ಬಣ್ಣಿಸಿದುದು ಉತ್ಪ್ರೇಕ್ಷೆಯಲ್ಲ.

ಸಮ್ಮೇಳನದ ಯಶಸ್ಸಿಗೆ ಕಾರಣರಾದ ಎಲ್ಲ ಶರಣ-ಶರಣೆಯರಿಗೂ ಶುಭ ಹಾರೈಕೆಗಳು. ಪೂಜ್ಯ ಮಾತಾಜಿಯವರ ಸತ್ ಸಂಕಲ್ಪ ಹಾಗೂ ಗುರು ಬಸವಣ್ಣನವರ ದಿವ್ಯಾನುಗ್ರಹದಿಂದ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿದೆ. 'ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳೆಸದಂತೆ ಇರಿಸು ಲಿಂಗದೇವ' ಎಂಬ ಧರ್ಮಪಿತರ ವಾಣಿಯಂತೆ ಸದಾ ಶರಣರ ಸೇವೆಗೈವ ಭಾಗ್ಯವಿರಲಿ ಎಂದು ಪ್ರಾರ್ಥಿಸುವೆ.

ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ
ಸಂಘಟಕರು, ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನ, ಮುನೀರ್ಕಾ, ನವದೆಹಲಿ

ಕೊಠಡಿಯ ದಾನಿಗಳಿಗೆ ಸೂಚನೆ

ಕೂಡಲ ಸಂಗಮದಲ್ಲಿ ಕೊಠಡಿಗಳನ್ನು, ಸಮೂಹ ವಸತಿ ಗೃಹ (ಡಾರ್ಮಿಟರಿ)ಗಳನ್ನು ಕಟ್ಟಿಸಲು ಅನೇಕ ದಾನಿಗಳು ಇಷ್ಟಪಟ್ಟು ಕಾಣಿಕೆ ನೀಡಿದ್ದಾರೆ. ಕೆಲವರು ವಾಗ್ದಾನ ಮಾಡಿದ್ದಾರೆ. ಕೆಲವರು ಅರ್ಧ ಹಣ ಕೊಟ್ಟಿದ್ದಾರೆ. ದಯವಿಟ್ಟು ಶರಣ ಮೇಳಕ್ಕೆ ಬರುವಾಗ ಉಳಿದ ಹಣವನ್ನು ತರಬೇಕು. ಕಟ್ಟಡ ಕಟ್ಟಿಸುವುದು ಬಹಳ ವೆಚ್ಚದಾಯಕ ಎಂದು ನಾವು ಕೋಣೆ ನಿರ್ಮಾಣ ಸ್ಥಗಿತಗೊಳಿಸಿದ್ದೆವು. ಶರಣ ಬಂಧುಗಳು ಬಹಳ ಒತ್ತಾಯ ಮಾಡಿದ್ದರಿಂದ ಪುನಃ ರೂಮಿಗಾಗಿ ಕಾಣಿಕೆ ಸ್ವೀಕರಿಸುತ್ತಿದ್ದೇವೆ. ಕೆಲವರು ವರ್ಷಗಳ ಹಿಂದೆ 51,000-00(ಐವತ್ತೊಂದು ಸಾವಿರ) ವಾಗ್ದಾನ ಮಾಡಿ ಈಗ ಅಷ್ಟನ್ನೇ ಕಂತಿನಲ್ಲಿ ಪೂರೈಸಲು ಬಯಸಿದ್ದಾರೆ. ಇದು ಬಹಳ ತಪ್ಪು. ಸಿಮೆಂಟ್, ಕಬ್ಬಿಣ ಇತ್ಯಾದಿಗಳ ಮೇಲೆ ಗಗನಕ್ಕೆ ಏರುತ್ತಿದೆ. ಆದ್ದರಿಂದ ಸಿಂಗಲ್ ರೂಂಗೆ 61,000, ಡಬ್ಬಲ್ ರೂಂಗೆ 81,000, ಡಾರ್ಮಿಟರಿಗೆ 1 ಲಕ್ಷದಂತೆಯೇ ಕೊಡಬೇಕು.

ಈಗಾಗಲೇ ಕಟ್ಟಿಸಿರುವ ಕೆಲವು ಕೋಣೆಗಳಿಗೆ ದಾನಿಗಳ ಹೆಸರು ಹಾಕಲಾಗಿದೆ. ಆದರಲ್ಲಿ ಕೆಲವರು ಕಾಲು ನೋವು ಮುಂತಾದ ಕಾರಣಗಳಿಗೆ ಬದಲಾವಣೆ ಬಯಸುತ್ತಿದ್ದಾರೆ. 18ನೆಯ ಶರಣ ಮೇಳದ ನಂತರ ಕೆಲವರು ಕೋಣೆಗಳ ಒತ್ತಡದಲ್ಲಿ ನನಗೆ ಅವರ ಬೇಡಿಕೆಗಳನ್ನು ನೆನಪಿಟ್ಟುಕೊಳ್ಳಲು ಆಗಿಲ್ಲ. ಆದ್ದರಿಂದ ರೂಂ ಬದಲಾವಣೆ ಬಯಸುವ ದಾನಿಗಳು, ಶರಣ ಮೇಳದ ನಂತರ ರೂಂ ಕಟ್ಟಿಸಲು ಕಾಣಿಕೆ ಕೊಟ್ಟಿರುವವರು ವಿವರಗಳನ್ನು ಬೆಂಗಳೂರು ವಿಳಾಸಕ್ಕೆ ಪತ್ರ ಬರೆದು ತಿಳಿಸಬೇಕೆಂದು ಸೂಚಿಸುತ್ತೇವೆ

\- ಮಾತಾಜಿ

ಶರಣ ಮೇಳದಲ್ಲಿ

ವಚನ ಪಠಣ ಸಪ್ತಾಹ ಮತ್ತು

ವಚನ ಭಜನಾ ಪಂಚ ದಿನೋತ್ಸವ

19ನೆಯ ಶರಣ ಮೇಳದಲ್ಲಿ ವಚನ ಪಠಣ ಸಪ್ತಾಹದೊಡನೆ ವಚನ ಭಜನಾ ಪಂಚದಿನೋತ್ಸವವನ್ನು ಏರ್ಪಡಿಸುವ ಯೋಜನೆ ರೂಪಿಸಲಾಗಿದೆ. ಸಿಖ್ಖರ ಗುರುದ್ವಾರಗಳಲ್ಲಿ ಹಾರ್ಮೋನಿಯಮ್, ತಬಲಾ, ತಾಳಗಳನ್ನು ಇರಿಸಿಕೊಂಡು ಗ್ರಂಥಿಗಳು ಗ್ರಂಥ ಸಾಹೇಬದ ಗೀತೆಗಳನ್ನು ಹಾಡುತ್ತಲಿರುತ್ತಾರೆ. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ಹಳ್ಳಿಯಲ್ಲೂ ವಚನಗಳ ಭಜನೆ ಮಾಡುವ ತಂಡಗಳು ಇರುತ್ತವೆ. ಈ ಯೋಜನೆಯಿಂದ ಅವರುಗಳಿಗೆಲ್ಲ ಭಾಗವಹಿಸುವ ಮತ್ತು ಗುರು ಸೇವೆ ಮಾಡುವ ಅವಕಾಶ ಲಭ್ಯವಾಗುತ್ತದೆ.

1. ವಚನ ಪಠಣ ಸಪ್ತಾಹವು ದಿ.9-1-2006ರ ಬೆಳಿಗ್ಗೆ 8 ಗಂಟೆಗೆ ವಚನ ಮಂಟಪದಲ್ಲಿ, ವಚನ ಭಜನೆಯು ದಿ.11-1-2006 ರಂದು ಬೆಳಿಗ್ಗೆ 8 ಗಂಟೆಗೆ ಪ್ರಾರಂಭವಾಗುತ್ತದೆ. ದಿ.15-1-2006 ರಾತ್ರಿ 9 ಗಂಟೆಗೆ ಮಹಾಮಂಗಲ.

2. ಕೇವಲ ವಚನಗಳ ಭಜನೆಗೆ ಮಾತ್ರ ಅವಕಾಶ. ಬಸವಾದಿ ಪ್ರಮಥರ ಸ್ತುತಿ ಮಾಡುವ ಗೀತೆಗಳನ್ನು ಹಾಡಬಹುದು. ಇವೆರಡರ ಹೊರತು ಬೇರೆ ಯಾವ ಭಜನೆಯನ್ನೂ ಮಾಡಬಾರದು.

3. ಪಾಳೆಯ ಮೇಲೆ ಭಜನೆ ಮಾಡಲು ಅವಕಾಶ ನೀಡಲಾಗುವುದು. ಅಲ್ಲಿ ಕೊಡಲಾಗುವ ಪವಿತ್ರ ವಸ್ತ್ರಗಳನ್ನು ಹೊದ್ದು ಭಜನೆ ಮಾಡಬೇಕು. ಹಾರ್ಮೋನಿಯಮ್, ತಬಲಾ, ತಾಳಗಳನ್ನು ಅಲ್ಲೇ ಕೊಡಲಾಗುವುದು. ತಮ್ಮ ವಸ್ತುಗಳನ್ನು ತಾವೇ ತಂದುಕೊಳ್ಳಲೂ ಅವಕಾಶವಿರುತ್ತದೆ.

4. ಈ ಅವಧಿಯಲ್ಲಿ (5 ದಿವಸಗಳ ಕಾಲ) ಬೀಡಿ, ಸಿಗರೇಟು, ಚುಟ್ಟಾ, ತಂಬಾಕು ಸೇವನೆ, ಮದ್ಯಪಾನ ಮಾಡಬಾರದು. ಮುಂದೆ ಕಾಯಂ ಆಗಿ ಬಿಡುವ ಸಂಕಲ್ಪ ಮಾಡಬೇಕು.

5. ತಮ್ಮ ಊರುಗಳಿಂದ ಬಂದು ಹೋಗುವ ಗಾಡಿ ಖರ್ಚು ಅವರವರೇ ಭರಿಸಬೇಕು. ಊಟ ಮತ್ತು ವಸತಿ ಉಚಿತವಾಗಿರುವುದು.

6. ಭಜನಾ ತಂಡಗಳ ಮಧ್ಯೆ ಸ್ಪರ್ಧೆ ಏರ್ಪಡಿಸಿ ಪ್ರಥಮ - 1, ದ್ವಿತೀಯ - 2 ಮತ್ತು ತೃತೀಯ - 3 ಬಹುಮಾನಗಳನ್ನು ವಿಜೇತ ತಂಡಗಳಿಗೆ ಕೊಡಲಾಗುವುದು.

7. ಬೆಳಗಿನ 6 ಗಂಟೆಗೆ ಬಸವೇಶ್ವರ ಪೂಜಾವ್ರತ ಪೂರೈಸಿದ ಮೇಲೆ ಭಜನೆ ಪ್ರಾರಂಭ. ಬೆಳಿಗ್ಗೆ 8ರಿಂದ ರಾತ್ರಿ 10ರವರೆಗೆ ಭಜನೆ. 1 ತಂಡಕ್ಕೆ 1 ಗಂಟೆ ಸಮಯಾವಕಾಶ. ಉಳಿದ ಸಮಯದಲ್ಲಿ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಬೇಕು, ಪ್ರವಚನ ಕೇಳಬೇಕು, ಸೇವೆ ಸಲ್ಲಿಸಬೇಕು. ಭಾಗವಹಿಸುವ ತಂಡಗಳ ಸಂಖ್ಯೆಯ ಮೇಲೆಯೂ ಭಜನಾ ಸಮಯದ ನಿರ್ಧಾರ ಮಾಡಲಾಗುವುದು.

8. ಶರಣೆಯರ ಭಜನಾ ತಂಡಗಳಿದ್ದರೆ ಅವರಿಗೂ ಭಾಗವಹಿಸಲು ಅವಕಾಶ ಉಂಟು.


9. ಆಸಕ್ತರು ಬೆಂಗಳೂರಿನ ವಿಳಾಸಕ್ಕೆ ಪತ್ರ ಬರೆಯಬೇಕು. ಸಂಪರ್ಕಿಸಲು ಪೂರ್ಣ ವಿಳಾಸ, ದೂರವಾಣಿ ಸಂಖ್ಯೆ ತಿಳಿಸಬೇಕು.

[ಶರಣ ಮೇಳದ ಸಮಯದಲ್ಲಿ ಈ ರೀತಿ ಪವಿತ್ರವಾದ ವಚನ ಭಜನಾ ಸೇವೆಯನ್ನು ಮಾಡುವುದಾಗಿ ಇಷ್ಟಾರ್ಥಸಿದ್ಧಿಗಾಗಿ ಸಂಕಲ್ಪ ಮಾಡಿಕೊಳ್ಳಿರಿ.]


ಶರಣ ಮೇಳ ಉತ್ಸವ ಸಮಿತಿ,
ಬಸವ ಮಂಟಪ, 2035, 20ನೆಯ ಮುಖ್ಯ ರಸ್ತೆ, ಕಾರ್ಡ್ ರೋಡ್
2ನೆಯ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ಕರ್ನಾಟಕ ರಾಜ್ಯ, ಭಾರತ
ದೂರವಾಣಿ : 080-23325335 /23322790



ಲಿಂಗಾಯತ ಔರ್ ಸಿಖ್ ಧರ್ಮ ಮೆ ಕೊಯೀ ಫರಕ ನಹೀ ಹೈ ಹಮ್ ದೋನೋ ಹಾತ್ ಮಿಲಾಕರ್ ಆಗೆ ಬಢೇಂಗೆ; ಭಾರತೀಯ ಧಾರ್ಮಿಕ್ ಸಂಸ್ಕೃತಿ ಔರ್ ಪರಂಪರಾ ಕೊ ಬಚಾಯೇಂಗೆ
ಸಿಖ್ ಧರ್ಮದ ನೇತಾರ ಶ್ರೀ ಸತ್ ನಾಮ್ ಸಿಂಗ್ ಅವರ ಸತ್ಸಂಕಲ್ಪ



ಕಣ್‌ತಣಿಸುವ ಮಹಾ ಮಂಟಪದಲ್ಲಿ ಮನ ತಣಿಸುವ ಕಾರ್ಯಕ್ರಮ




ಲಿಂಗಾಯತ ಧರ್ಮ ಸಮ್ಮೇಳನದ ಕಾರ್ಯಕ್ರಮವನ್ನು ವೀಕ್ಷಿಸುತ್ತಿರುವ ಶರಣ ಶರಣೆಯರು



ಸಮಾವೇಶಗೊಂಡಿದ್ದ ಶರಣ ಸ್ತೋಮ



ಶರಣ ಶರಣೆಯರಿಂದ ಸಾಮೂಹಿಕ ಇಷ್ಟಲಿಂಗಾರ್ಚನೆ



ವಚನ ಭಜನೆಯಲ್ಲಿ ತನ್ಮಯರಾಗಿರುವ ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಹಿರೇಹೊನ್ನೀಳ್ಳಿಯ ಶರಣ ಬಳಗ



ಭಾಗಲಕೋಟೆಯ ಕುಮಾರಿ ಭಾರ್ಗವಿ ಅಂಗಡಿ ಅವರಿಂದ ಬಸವಧರ್ಮದ ಅರುಣೋದಯ ಗೀತ ನೃತ್ಯ ಪ್ರದರ್ಶನ

ಸಿಹಿಯ ಮಧ್ಯೆ ಕಹಿ ಪ್ರಸಂಗಗಳು

-ಮಾತಾಜಿ

ದೆಹಲಿಯಲ್ಲಿ ನಡೆದ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ, ಅಚ್ಚುಕಟ್ಟಾಗಿ ಆಯಿತು. ಸಮ್ಮೇಳನ ಮಾಡಲು ನಿರ್ಧರಿಸಿದ ದಿನಾಂಕಗಳು ಬಹಳ ಹತ್ತಿರದಲ್ಲಿ ಇದ್ದವು. ಇಲ್ಲಿ ಏನಿದ್ದರೂ ದಸರಾ ನಂತರ, ದೀಪಾವಳಿಯ ಮೊದಲಿಗೆ ಕಾರ್ಯಕ್ರಮ ಮುಗಿಸಿಕೊಳ್ಳಬೇಕು. ಏಕೆಂದರೆ ದಸರಾದಲ್ಲಿ ಮೈಕ್‌ಗಳ ಹಾವಳಿ, ಅರಚಾಟ, ದೀಪಾವಳಿಗೆ ಪಟಾಕಿಗಳ ಆರ್ಭಟ. ವ್ಯಾಪಾರಸ್ಥರು ನಮ್ಮಲ್ಲೂ ದೀಪಾವಳಿ ಸಮಯದಲ್ಲಿ ಬಹಳ ಗಡಿಬಿಡಿಯಲ್ಲಿರುವರು. ಸ್ವಲ್ಪ ಸಮಯದ ಅವಧಿ ಇಟ್ಟು ದಿನಾಂಕ ನಿರ್ಧರಿಸಲಾಯಿತು. ಸಮ್ಮೇಳನದ ಜಾಗದ ತಪಾಸಣೆಗೆ ಬಹಳ ಸಮಯ ಹೋಯಿತು. ಜಾಗಗಳ ಬಾಡಿಗೆ, ಹಾಲ್‌ಗಳ ಬಾಡಿಗೆ ನಮ್ಮ ಊಹೆಗೆ ನಿಲುಕದ್ದು. ಮಹಾರಾಷ್ಟ್ರ ಭವನಕ್ಕೆ ಸಂಬಂಧಿಸಿದ ಮಾವಲಂಕರ್ ಹಾಲ್ 750 ಜನ ಹಿಡಿಸುತ್ತದೆ. ಬಾಡಿಗೆ ದಿನಕ್ಕೆ 35000(ಮೂವತ್ತೈದು ಸಾವಿರ). ಅಡಿಗೆ ಮಾಡಲು ಅನುಕೂಲತೆ ಇಲ್ಲ. 2000 (ಎರಡು ಸಾವಿರ) ಜನ ಹಿಡಿಯುವ ಮತ್ತೊಂದು ಹಾಲ್‌ಗೆ 3 ದಿನಕ್ಕೆ ಬಾಡಿಗೆ 5 ಲಕ್ಷ, ಬಹಳ ಸುತ್ತಾಡಿ, ಹುಡುಕಾಡಿ 88000(ಎಂಬತ್ತೆಂಟು)ಸಾವಿರ-ನಾಲ್ಕು ದಿವಸಕ್ಕೆ ಅಂಥದೊಂದು ಸಭಾಂಗಣ ಮತ್ತು ಹೊರಗೆ ಪೆಂಡಾಲ್ ಹಾಕಲು ಜಾಗ ಇರುವ ಸ್ಥಳ ಹುಡುಕಿದಾಗ ಸ್ವಲ್ಪ ಸಮಾಧಾನವೆನಿಸಿತು.

ಆದರೆ ಪೆಂಡಾಲ್ ಹಾಕುವವರು ಕೊಟ್ಟ ಕೊಟೇಶನ್ 6 ಲಕ್ಷಕ್ಕೆ ಬಂದಾಗ ಎದೆ ದಸಕ್ಕೆನಿಸಿ ಯಾಕಾದರೂ ಸಮ್ಮೇಳನ ಹಮ್ಮಿಕೊಂಡೆವೋ ಎಂದು ಪರಿತಾಪವಾಯಿತು. 1997ರಲ್ಲಿ ಸಮ್ಮೇಳನ ಮಾಡಿದಾಗ ಜನವರಿಯಲ್ಲಿ ಘೋಷಿಸಿ 9 ತಿಂಗಳ ಕಾಲ ಪ್ರಚಾರ ಮಾಡಿ ಕಾಣಿಕೆ ಸಂಗ್ರಹಿಸಲಾಗಿತ್ತು. ಈಗ ಅದಕ್ಕೂ ಸಮಯಾವಕಾಶವಿರಲಿಲ್ಲ. ಪ್ರತಿನಿಧಿ ಶುಲ್ಕದ ಮೇಲೆ ನಡೆಸಬೇಕು. ಅದರಲ್ಲೂ ಕೆಲವರು ಶಕ್ತಿ ಇದ್ದರೂ ಪ್ರತಿನಿಧಿ ಶುಲ್ಕ ಕಟ್ಟದೆ ಆ ಹಣವನ್ನು ವೈಯಕ್ತಿಕ ಸಾಮಾನು ಖರೀದಿಗೆ ಬಳಸಿಕೊಳ್ಳಬೇಕೆನ್ನುವ ಚಪಲದವರು. ಮತ್ತೆ ಕೆಲವರು ಸಮ್ಮೇಳನದ ನೆಪ ಮಾಡಿಕೊಂಡು ಬಂದು ಕಡಿಮೆ ಖರ್ಚಿನಲ್ಲಿ ನಮ್ಮಲ್ಲಿ ಊಟ ವಸತಿ ಪಡೆದುಕೊಂಡು ಊರು ಸುತ್ತುವ ಹವ್ಯಾಸ ಇರುವವರು. ಬರವೇ ಬರಲಿ, ನೆರೆಯೇ ಬರಲಿ ಸರ್ಕಾರಿ ಅಧಿಕಾರಿಗಳಿಗೆ ಅದು ಸುಗ್ಗಿಯ ಕಾಲವೆಂಬಂತೆ ಸಮ್ಮೇಳನದ ಬಗ್ಗೆ ಘೋಷಣೆ ಮಾಡುತ್ತಲೇ ಜನರನ್ನು ಸಮ್ಮೇಳನಕ್ಕೆ ಹೊರಡಿಸಿ, ಕಾರ್ಯಕ್ರಮದಲ್ಲಿ ಮುಖ ತೋರಿಸಿ, ಬಾಕಿ ಯಾತ್ರೆ ಮಾಡಿಸಿ ದುಡ್ಡು ಸಂಪಾದನೆ ಮಾಡಿಕೊಳ್ಳಬೇಕೆಂಬ ಏಜೆಂಟರು ಮತ್ತೆ ಕೆಲವರು.

ಪೆಂಡಾಲ್ ಕೊಟೇಶನ್ ನೋಡಿ ಗಾಬರಿಗೊಂಡು ಸೊಲ್ಲಾಪುರಕ್ಕೆ ಫೋನ್ ಮಾಡಿ, ಕಲ್ಯಾಣ ಪರ್ವಕ್ಕೆ ಪೆಂಡಾಲ್ ಹಾಕುವವರನ್ನು ವಿಚಾರಿಸಲಾಯಿತು. ಒಂದು ಲಾರಿ ಬಾಡಿಗೆ ಸೊಲ್ಲಾಪುರದಿಂದ ಡೆಲ್ಲಿಗೆ ಇಪ್ಪತ್ತೈದು ಸಾವಿರ; ಪುನಃ ಸಾಮಾನು ಕಳಿಸಲು ಅಷ್ಟೇ ಬಾಡಿಗೆ ಎಂದು ಅವರು ಗಾಬರಿಬಿದ್ದರು. ಅಷ್ಟರಲ್ಲಿ ಓರ್ವ ಜೈನ ಲೀಡರ್ ಪರಿಚಯವಾಯಿತು. “ಡೆಲ್ಲಿಯಲ್ಲಿ ಮೋಸ ಬಹಳ. ನೀವು ಹೊಸಬರು ಎಂದು ಗೊತ್ತಾಗುತ್ತಲೇ ಸಿಕ್ಕಾಪಟ್ಟೆ ಬೆಲೆ ಹೇಳುತ್ತಾರೆ. ಆದ್ದರಿಂದ ನಾನು ನಿಮಗೆ ಎಲ್ಲ ರೀತಿಯಲ್ಲೂ ನೆರವಾಗುತ್ತೇನೆ.” ಎಂದು ಎಲ್ಲವೂ ಮಧ್ಯಮ ಬೆಲೆಯಲ್ಲಿ ಎಟುಕುವಂತೆ ವ್ಯವಸ್ಥೆ ಮಾಡಿದರು. ನಮ್ಮ ಗಾಬರಿ ಕಡಿಮೆಯಾಯಿತು. ನಮ್ಮ ಕೆಲವು ಗಣ್ಯರು ಅವರ ವಾಸ್ತವ್ಯಕ್ಕೆ ಎ.ಸಿ.ರೂಂ ಬುಕ್ ಮಾಡಲು ಹೇಳಿದ್ದರು. ಯಾವ ಹೋಟೆಲ್‌ನವರೂ ಮೊದಲೇ ರಿಸರ್ವ ಮಾಡಲು ಸಿದ್ಧರಿಲ್ಲ. ಬಂದಾಗ ನೋಡೋಣ ಎನ್ನುತ್ತಾರೆ. ಒಬ್ಬರಿಗೆ ಒಂದು ಎ.ಸಿ.ರೂಂ 500ರೂ. ನಮ್ಮ ಸ್ವಾಮೀಜಿ ಹಾಗೆ ತಿಳಿಸಿದರು. 500 ರೂ ಬದಲು 450ರೂ; ನಿಮಗೆ ಮಾತ್ರ ರಿಯಾಯಿತಿ ಎಂದರು. ಭಕ್ತರಿಗೆ ತಿಳಿಸಿದ್ದಾಯಿತು. ಅಡ್ವಾನ್ಸ್ ಕಟ್ಟಿದ್ದಾಯಿತು. ನಂತರ ತಿಳಿಯಿತು. ಒಂದು ಡಬ್ಬಲ್ ರೂಮಿಗೆ ಒಂದು ಸಾವಿರ, ಒಬ್ಬರಿಗೆ 500ರೂ. ರೇಟು ಗೊತ್ತಾಗುತ್ತಲೇ ಬೆಂಗಳೂರು ಭಕ್ತರು ಅಷ್ಟು ತುಟ್ಟಿ ರೂಂ ಬೇಡವೆಂದರು; ಇನ್ನೂ 12 ದಿವಸಗಳಿದ್ದವು. ರಿಸರ್ವೇಷನ್ ಬೇಡ ಎಂದರೆ ಅಡ್ವಾನ್ಸ್ ವಾಪಸು ಕೊಡುವುದಿಲ್ಲ ಎಂದರು. ಮಾಲಿಕರು ಮುಸ್ಲಿಂ, ರಾಜಕೀಯ ಪುಢಾರಿ ಬೇರೆ; ಅವರೊಡನೆ ಜಗಳವೇ ಬೇಡ. ದುಡ್ಡು ಹೋದರೆ ಹೋಗಲಿ ಎಂದು ಬೇರೆ ಕಡೆ ಕೋಣೆಗಳನ್ನು ನೋಡಲಾಯಿತು. ಮೊದಲೇ ರಿಸರ್ವ್ ಮಾಡಬೇಕಾದರೆ ದುಡ್ಡು ಜಾಸ್ತಿ ಹೇಳುವುದು

ಬೇರೆ. ಪ್ರತಿನಿಧಿ

ಗಳು ಬಂದಾಗ ಹುಡುಕ ಹೋದರೆ ರೂಂ ಸಿಗಲು ಸಾಧ್ಯವೆ?

ದಿಲ್ಲಿ ಜನರ ಮೋಸಕ್ಕೆ ಸಿಕ್ಕದೆ ಎಷ್ಟೇ ಬುದ್ಧಿವಂತರಾಗಿರಬೇಕೆಂದು ನಾವು ಪ್ಲ್ಯಾನ್ ಮಾಡಿದರೂ ಸೋಲುವುದು ಖಚಿತ. 1997ರಲ್ಲಿ ಸಮ್ಮೇಳನ ಮಾಡಿದಾಗ ಒಂದು ಬಸ್ ಕಂಪನಿಗೆ 10,000(ಹತ್ತುಸಾವಿರ) ತುಂಬಿ ನಮ್ಮ ಜನರು ಟ್ರೇನು ಇಳಿಯುತ್ತಲೇ ಅವರನ್ನು ವಸತಿ ಸ್ಥಳಗಳಿಗೆ ಕರೆತರಬೇಕು. ಎಷ್ಟು ಟ್ರಿಪ್ ಆಗುತ್ತೋ ನಂತರ ಲೆಕ್ಕ ಮಾಡಿ ಕೊಡುತ್ತೇವೆ. ಎಂದು ಹೇಳಿದ್ದವು. ಒಂದೇ ಟ್ರಿಪ್ ಕರೆದುಕೊಂಡು ಹೋಗಿ ಎಲ್ಲೋ ಇಳಿಸಿ ನಾಪತ್ತೆಯಾದವರು ಬರಲೇ ಇಲ್ಲ. ಫೋನ್ ಮಾಡಿದರೆ ಮಾಲಿಕರು ಡ್ರೈವರನನ್ನು ಬೈಯುತ್ತಾರೆ. ಇಬ್ಬರೂ ಸೇರಿಯೇ ಮಾಡುವ ನಾಟಕ. ಮತ್ತೆ ನಮ್ಮ ಶರಣರು ಬಸ್ಸುಗಳಿಗೆ ಹಣ ಕೊಟ್ಟು ನೆಲೆ ಸೇರಿದ್ದರು. ನಮ್ಮ ದುಡ್ಡೂ ಹೋಗಿತ್ತು, ಅವರ ದುಡ್ಡೂ ಹೋಯಿತು.

ಈ ಬಾರಿ ಇಂಥ ಮೋಸದ ಬಲೆಗೆ ಬೀಳಬಾರದೆಂದು ಮೊದಲೇ ಕರಪತ್ರಗಳಲ್ಲಿ ಮುದ್ರಿಸಿದೆವು. ಅಷ್ಟರಲ್ಲಿ ಸೇವೆ ಮಾಡುತ್ತೇವೆ ಎಂದು ಭಕ್ತರ ರೂಪದಲ್ಲಿ (ರಾಹು ಕೇತುಗಳಂತೆ) ಇಬ್ಬರು ಬಂದರು. ನಯಿದಿಲ್ಲಿ ಸ್ಟೇಷನ್‌ದಿಂದ ಒಬ್ಬರಿಗೆ 15 ನಿಜಾಮುದ್ದೀನ್‌ದಿಂದ 20ರೂ ತಗೊಂಡು ಮಹಾವೀರ ವಾಟಿಕಾಕ್ಕೆ ಬಿಡುತ್ತೇವೆ ಎಂದು ಹೇಳಿದರು.

ಬಸ್ಸಿನೊಳಗೆ ಹತುವಾಗಲೇ ಹಣ ಪಡೆದುಕೊಳ್ಳಿರಿ ಎಂದು ಮೊದಲೇ ತಾಕೀತು ಮಾಡಿದೆವು. ಜನರು ಹೇಳುತ್ತಾರೆ, ನಾವು ಕೊಟ್ಟೆವು ಎಂದು. ಅವರು ಹೇಳಿದರು ಯಾರೂ ಕೊಡಲಿಲ್ಲ ಎಂದು. ಒಂದು ಊರಿನವರು ಸಂಗ್ರಹಿಸಿಕೊಟ್ಟೆವಲ್ಲ ಎಂದು ಗಟ್ಟಿಗೆ ಹಚ್ಚಿದಾಗ ನೀವು ಡ್ರೈವರ್‌ಗೆ ಕೊಟ್ಟಿರಬೇಕು ಎಂದು ಹಾರಿಕೆ ಉತ್ತರ ನೀಡಿದರು. "ನಿಮಗೆ ಮೊದಲೇ ಹೇಳಿದ್ದೆವು ಜನರಿಂದ ಪಡೆದುಕೊಳ್ಳಿ." ಎಂದು ಏಕೆ ತಗೊಳ್ಳಲಿಲ್ಲ ಎಂದರೆ ಅಮಾಯಕರಂತೆ ನಟಿಸಿ, "ಜನ ಬಸ್ಸಿನಲ್ಲಿ ನುಗ್ಗಿದರು. ನಿಮ್ಮ ಭಕ್ತರು ಎಂದು ಬೇಡವೆನ್ನಲಿಲ್ಲ. ಹಣ ಕೇಳಿದರೆ ಪರ್ಸ್ ಒಳಗಿದೆ ಎಂದರು. ಭಾಷೆ ಬೇರೆ ಅರ್ಥವಾಗಲಿಲ್ಲ ಸುಮ್ಮನಾಗಿಬಿಟ್ಟೆವು." ಎಂದರು. ಎರಡು ಟ್ರಿಪ್ ಜನ ಮಾತ್ರ ಅವರಿಗೆ ಕೊಟ್ಟಿರಲಿಲ್ಲ. ಅವರು ಸಂಗ್ರಹಿಸಿ ಕೊಟ್ಟರು. ಆದರೆ ಅನ್ಯಾಯವಾಗಿ 8000(ಎಂಟು ಸಾವಿರ) ರೂಪಾಯಿ ನಾವು ಅವರಿಗೆ ತೆರಬೇಕಾಯಿತು. ನಾವು ವಹಿಸಿದ ಮುನ್ನೆಚ್ಚರಿಕೆ ಏನೂ ಕೆಲಸ ಮಾಡಲಿಲ್ಲ.

ನಮಗೆ ಇವರ ಚಲನವಲನಗಳ ಬಗ್ಗೆ ಯಾಕೋ ಸಂದೇಹವು ಬರಲು ತೊಡಗಿತು. ದುರ್ದೈವವೆಂದರೆ ಸಮ್ಮೇಳನ ಮುಗಿದ ನಂತರ ದಿ.24ರಂದು ದೆಹಲಿ ಸಂದರ್ಶನ, ದಿ 25 ಅಮೃತ ಸರ ಪ್ರವಾಸ, ನಂತರ ಒಂದು ವಾರದ ಪ್ರವಾಸ ಹಾಕಿದ್ದೆವು. ಅದಕ್ಕೆ ಬಸ್ಸುಗಳಿಗೆ ಅಡ್ವಾನ್ಸ್ ಕೊಡಲಾಗಿತ್ತು. ಇನ್ನು ಆ ಹಣವೂ ಹೋಗುತ್ತದೆ ಮತ್ತು ಈ ಅರ್ಥಾರ್ಥಿ ಭಕ್ತರಿಂದ ಸಮ್ಮೇಳನಕ್ಕೆ ಅನಾನುಕೂಲವಾಗಬಾರದು ಎಂದು ನಾವು ಆಲೋಚಿಸಿದೆವು.

ಸಮ್ಮೇಳನವು ದಿ.22,23,24 ರಂದು ಯಶಸ್ವಿಯಾಗಿ ಮುಗಿಯಿತು. ಜನರು ದಿ.25ರಂದು ದೆಹಲಿ ಸಂದರ್ಶನ ಪೂರೈಸಿದರು. ಅಂದು ರಾತ್ರಿ ಅಮೃತಸರಕ್ಕೆ ಹೊರಟೆವು. ನಾವು ಕಾರನ್ನು ತೆಗೆದುಕೊಂಡು ಹೊರಟೆವು. ಬಸ್ ಹೊರಡುವ ಮುನ್ನ ಪುನಃ ಹಣ ಕೇಳಿದರು. ಅದನ್ನೂ ಕೊಟ್ಟೆವು. ಅಮೃತಸರ ಸಂದರ್ಶನ ಪೂರೈಸಿ ಜಲಿಯನ್‌ವಾಲಾ ಬಾಗ್, ವಾಘಾ ಗಡಿ ನೋಡಿ ಡೆಲ್ಲಿಗೆ ಮರಳಲು ರಾತ್ರಿ ಎಂಟು ಗಂಟೆಗೆ ಜನರು ಬಸ್ಸಿನಲ್ಲಿ ಕೂತರು. ಆದರೆ ಒಂದು ವಾರದ ಪ್ರವಾಸದ ಹಣ ಮತ್ತು ದೆಹಲಿಗೆ ಹೋಗಿ ನಿಲ್ಲುವ ಎರಡು ಬಸ್ಸುಗಳ ಹಣ ಪೂರಾ ಕೊಟ್ಟರೆ ಮಾತ್ರ ಬಸ್ಸನ್ನು ಮುಂದೆ ಬಿಡುವುದಾಗಿ ಆ ಇಬ್ಬರು ಮಧ್ಯಸ್ಥರು ಮತ್ತು ಬಸ್ ಡ್ರೈವರುಗಳು ಹೇಳುತ್ತಾರೆ. ಪ್ರತಿಯೊಬ್ಬರಿಗೂ ಸತತ ಕಾರ್ಯಕ್ರಮ ಮತ್ತು ಪ್ರವಾಸದಿಂದ ಸಾಕುಸಾಕಾಗಿ ಹೋಗಿದೆ. ಅಂಥದರಲ್ಲಿ ಆ ಪಾಪಿಗಳು ನಿರ್ದಯಿಗಳಾಗಿ ಜನರನ್ನು ಕೂರಿಸಿದ್ದಾರೆ. ನಾವು ಸ್ವರ್ಣ ಮಂದಿರದ ಪ್ರವಾಸಿ ನಿಲಯದಲ್ಲಿ, ಪೂಜ್ಯ ಅಲ್ಲಮ ಪ್ರಭು ಸ್ವಾಮಿಗಳು ಬಸ್ಸುಗಳ ಬಳಿ; ಮಧ್ಯೆ ಎರಡು ಕಿಲೋಮೀಟರ್ ದೂರ. ಬಸುಗ್ಗಳನ್ನು ಸ್ವರ್ಣ ಮಂದಿರದ ಬಳಿ ತರುವಂತಿಲ್ಲ. ಎಂಟು ಗಂಟೆಯಿಂದ ಹನ್ನೊಂದರವರೆಗೆ ಜನ ಬಸ್ಸಿನಲ್ಲಿ ಹಾಗೇ ಕೂತಿದ್ದಾರೆ. ಪೂರಾ ಹಣ ಪಡೆದು ಇವರುಗಳು ಓಡಿ ಹೋದರೆ ಜನರನ್ನು ದೆಹಲಿಗೆ ಪುನಃ ಕರೆದೊಯ್ಯುವುದು ಹೇಗೆ? ಏಳು ದಿನದ ಪ್ರವಾಸದ ಹಣ ಪಡೆದು ಜನರನ್ನು ಎಲ್ಲಾದರೂ ಮಧ್ಯೆ ಅಪರಿಚಿತ ಊರಲ್ಲಿ ಬಿಟ್ಟು ಹೋದರೆ

ಹೇಗೆ? ನಾನು ಮೊಬೈಲದಲ್ಲಿ ಹೇಳಿದೆ, "ಜನರನ್ನು ಬಸ್ಸಿನಿಂದ ಇಳಿಸಿರಿ. ಬೇರೆ ಹೇಗೆ ದೆಹಲಿಗೆ ಹೋಗಲು ಸಾಧ್ಯ ನೋಡಿ ವ್ಯವಸ್ಥೆ ಮಾಡೋಣ. ದೆಹಲಿಗೆ ಒಯ್ದು ವಸತಿ ಸ್ಥಳಕ್ಕೆ ಮುಟ್ಟಿಸುವವರೆಗೆ ಪೂರಾ ಹಣಕೊಡುವುದಿಲ್ಲ. ಮತ್ತು ಬಸ್ ಮಾಲಿಕರ ಕೈಗೆ ಮಾತ್ರ ಹಣ ಕೊಡುತ್ತೇವೆ. ಈ ಮಧ್ಯವರ್ತಿಗಳ ಕೈಗಾಗಲೀ ಡ್ರೈವರ್ ಕೈಗಾಗಲೀ ಕೊಡುವುದಿಲ್ಲ." ನಮ್ಮ ಜನರೆಲ್ಲ ಲಗೇಜ್ ಸಹಿತ ಕೆಳಗೆ ಇಳಿದರು. ಬೇರೆ ಬಸ್ಸು ನೋಡಲು ಕಳಿಸಿದೆವು. ಮೂರು ಬಸ್ಸುಗಳು ಸಹ ಸಿಕ್ಕಿದವು. ನಾವು ಯಾವಾಗ ಸೋಲಲಿಲ್ಲವೋ ಆಗ ಆ ಡ್ರೈವರ್‌ಗಳು ಬಸ್ಸು ಬಿಡುವುದಾಗಿಯೂ, ಉಳಿದ ಹಣವನ್ನು ದೆಹಲಿಯಲ್ಲಿ ಕೊಡಬಹುದು ಎಂದು ಒಪ್ಪಿದರು. ಈ ನಾಟಕ ಕಳೆದು ರಾತ್ರಿ 12 ಗಂಟೆಗೆ ಬಸುಗಳ ಹೊರಟವು. ಅಂದು ಒಂದು ದಿವಸ ಅಲ್ಲೇ ಉಳಿದು ವಿಶ್ರಾಂತಿ ಪಡೆದು ಮರು ದಿವಸ ಇನ್ನೊಮ್ಮೆ ಸುವರ್ಣ ಮಂದಿರವನ್ನು ಸಂದರ್ಶಿಸಿ ನಮ್ಮ ಕಾರಿನಲ್ಲಿ ಬರಬೇಕು ಎಂದು ಕೊಂಡಿದ್ದ ನಾನು ಈ ಬಸ್ಸುಗಳವರ ಕಾಟ ಇನ್ನೇನು ಎದುರಾಗುತ್ತದೋ ಎಂದು ಎಲ್ಲ ಬಸ್ಸು ಹೊರಡಿಸಿ ನಾವೂ ಹೊರಟೇ ಬಿಟ್ಟೆವು.

ಬಸ್ಸು ಡ್ರೈವರುಗಳು ಮತ್ತು ಮಧ್ಯವರ್ತಿ ಅರ್ಥಾರ್ಥಿ ಜನರಿಂದ ನಮ್ಮ ಶರಣರು ಬಹಳ ಶ್ರಮ ಅನುಭವಿಸಬೇಕಾಯಿತು. (ಮತ್ತು ದಿ.27ರಂದು ಬೆಳಿಗ್ಗೆ 6-00, ಮಧ್ಯಾಹ್ನ 3 ಗಂಟೆಗೆ ಹೊರಡಲು ರೇಲ್ವೆ ರಿಸರ್ವೇಷನ್ ಮಾಡಿಸಿದವರೆಲ್ಲ ಟ್ರೇನ್‌ಗಳನ್ನು ಕಳೆದುಕೊಳ್ಳಲು ಆ ದುರ್ಜನರು ಕಾರಣರಾದರು.) ಮರುದಿವಸ ಬಸ್ ಮಾಲಿಕನನ್ನು ಕರೆಸಿ ಹಣವನ್ನು ಪೂರಾ ಕೊಟ್ಟೆವು. ಅವನ ಹೇಳಿಕೆ ಪ್ರಕಾರ ನಮ್ಮಿಂದ ಮುಂಗಡವಾಗಿ ಪಡೆದಿದ್ದ ಹಣವನ್ನು ಮಧ್ಯವರ್ತಿಗಳು ಅವನಿಗೆ ಪೂರ್ತಿಕೊಟ್ಟಿರಲಿಲ್ಲ. ಅದಕ್ಕಾಗಿ ಡ್ರೈವರ್‌ಗಳು ಹಾಗೆ ವರ್ತಿಸಿದರು. ಎಂದು "ಸಂತರಾದ ನಿಮಗೆ ತೊಂದರೆ ಕೊಟ್ಟದಕ್ಕೆ ಕ್ಷಮಿಸಿರಿ." ಎಂದು ವಿನಂತಿಸಿಕೊಂಡ.

ಅದಕ್ಕಾಗಿ ನಾನು ಇದರಿಂದ ತೊಂದರೆ ಅನುಭವಿಸಿದ ಶರಣ ಬಂಧುಗಳ ಕ್ಷಮೆಯಾಚಿಸುತ್ತೇನೆ. ನಮ್ಮ ಯಶಸ್ವಿ ಸಮ್ಮೇಳನದ ಸಂತೋಷದ ಮಧ್ಯೆ ಇಂಥದೊಂದು ಪ್ರಸಂಗದಿಂದ ತುಂಬಾ ನೋವಾಗಿ, ಒಂದು ವಾರದ ಪ್ರವಾಸವನ್ನು ರದ್ದು ಮಾಡಿ, ಜನರಿಗೆ ಪ್ರವಾಸದ ಹಣವನ್ನು ಹಿಂತಿರುಗಿಸಿದೆವು. ಏನೆಲ್ಲ ಎಚ್ಚರಿಕೆ ವಹಿಸಿದರೂ ಸ್ವಾರ್ಥಿಗಳು ಹೇಗಾದರೂ ತೂರಿಕೊಂಡು ಬಿಡುತ್ತಾರೆ. ಚೆನ್ನಾಗಿ ಆದಾಯ ಬರುವ ಸಂಘ-ಸಂಸ್ಥೆಗಳು, ವಿಪುಲ ಸಂಪತ್ತು ಹೊಂದಿರುವ ಮಠಗಳು ಸ್ವಾರ್ಥಿಗಳಿಗೆ, ಧನ ದಾಹಿಗಳಿಗೆ ಅವಕಾಶಗಳನ್ನು ಒದಗಿಸಿ ಅನೇಕರು ಧರ್ಮವನ್ನು ದೇವರಿಗಾಗಿ, ಗುರುವಿಗಾಗಿ, ಶರಣರಿಗಾಗಿ ಆಶ್ರಯಿಸದೆ ಹಣಕ್ಕಾಗಿ ಆಶ್ರಯಿಸುವ ಅಭಿರುಚಿ ಬೆಳೆಸಿಬಿಡುತ್ತಾರೆ.

ಬಸವಣ್ಣನೆಂಬ ಆಚಾರಲಿಂಗವ ಪಿಡಿದು ಅನಿಮಿಷಯ್ಯ ಬಸವಣ್ಣನಂತಾದ.
ಬಸವಣ್ಣನೆಂಬ ಗುರುಲಿಂಗವ ಪಿಡಿದು ಮಡಿವಾಳಯ್ಯ ಬಸವಣ್ಣನಂತಾದ.
ಬಸವಣ್ಣನೆಂಬ ಶಿವಲಿಂಗವ ಪಿಡಿದು ಚೆನ್ನಬಸವಯ್ಯ ಬಸವಣ್ಣನಂತಾದ.
ಬಸವಣ್ಣನೆಂಬ ಜಂಗಮಲಿಂಗವ ಪಿಡಿದು ಸಿದ್ಧರಾಮಯ್ಯ ಬಸವಣ್ಣನಂತಾದ.
ಬಸವಣ್ಣನೆಂಬ ಪ್ರಸಾದಲಿಂಗವ ಪಿಡಿದರು ಘಟ್ಟಿವಾಳಯ್ಯ ಬಸವಣ್ಣನಂತಾದ.
ಬಸವಣ್ಣನೆಂಬ ಮಹಾಲಿಂಗವ ಪಿಡಿದು ಅಜಗಣ್ಣ ಬಸವಣ್ಣನಂತಾದ.
ಬಸಬಣ್ಣನೆಂಬ ಗುಹೇಶ್ವರಲಿಂಗವ ಪಿಡಿದು ಪ್ರಭುದೇವ
ಜ್ಯೋತಿರ್ಮಯನಾದ.
ಅಸಂಖ್ಯಾತ ಮಹಾಗಣಂಗಳೆಲ್ಲರೂ ಬಸವಣ್ಣನೆಂಬ ನಿರವಯಲಿಂಗವ ಪಿಡಿದು,
ಶರಣಸತಿ ಲಿಂಗಪತಿಯಾದರು.
.ಗುಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ,
ಬಸವಪ್ರಿಯ ಕೂಡಲಸಂಗಮದೇವಾ,
ಬಸವಣ್ಣನ ಶ್ರೀಪಾದಕ್ಕೆ ನಮೋ ನಮಃ ಎನುತಿರ್ದೆನು.
(ಸಂ.ವ.ಸಂ - 4)

ಅಮೃತಸರದ ಸ್ವರ್ಣ ಮಂದಿರಕ್ಕೆ ಜಗದ್ಗುರು ಮಾತೆ ಮಹಾದೇವಿಯವರ ಸಂದರ್ಶನ

ಸಿಖ್ ಧರ್ಮೀಯರ ಪವಿತ್ರ ಯಾತ್ರಾಸ್ಥಳ ಪಂಜಾಬ್‌ದ ಅಮೃತಸರದ ಸ್ವರ್ಣ ಮಂದಿರವನ್ನು ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷೆ ಜಗದ್ಗುರು ಮಾತೆ ಮಹಾದೇವಿ ಅವರು ಸಂದರ್ಶಿಸಿದರು. ಈ ಸಂದರ್ಭದಲ್ಲಿ ಸಿಖ್ ಧರ್ಮೀಯ ನೇತಾರರು ಹಾಗೂ ಸ್ವರ್ಣ ಮಂದಿರದ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಬಲದೇವ ಸಿಂಗ್ ಅವರು ಹಾಗೂ ಜೋಗಿಂದರ್ ಸಿಂಗ್ ಮುಂತಾದ ಗಣ್ಯರು ಅವರ ಧಾರ್ಮಿಕ ಪವಿತ್ರ ವಸ್ತ್ರವಾದ ಕೇಸರಿ ಬಣ್ಣದ ಶಾಲನ್ನು ಹೊದಿಸಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರನ್ನು ಬರಮಾಡಿಕೊಂಡರು.

ನಂತರ ಪೂಜ್ಯ ಮಾತಾಜಿಯವರಿಗೆ ಸ್ವರ್ಣ ಮಂದಿರದ ವಿವಿಧ ಪವಿತ್ರ ಸ್ಥಳಗಳನ್ನು ಸಂದರ್ಶಿಸುತ್ತಾ ಮಾಹಿತಿ ನೀಡಿದರು. ಸಿಖ್ ಧರ್ಮದ ಸಾಹಿತ್ಯವನ್ನು ನೀಡಿದರು.

ಇದೇ ಸಂದರ್ಭದಲ್ಲಿ ಸಿಖ್ ಧರ್ಮ ಬಾಂಧವರಲ್ಲಿ ಇರುವಂತಹ ಏಕದೇವ ನಿಷ್ಠೆ, ಏಕಗ್ರಂಥ ನಿಷ್ಠೆ, ಶಿಸ್ತು ಹಾಗೂ ಸೇವಾ ಮನೋಭಾವ ಮುಂತಾದ ಗುಣಾತ್ಮಕ ಅಂಶಗಳನ್ನು ಮುಕ್ತ ಕಂಠದಿಂದ ಪ್ರಶಂಸಿಸಿದ ಪೂಜ್ಯ ಮಾತಾಜಿಯವರು ಸಿಖ್ ಧರ್ಮೀಯ ಗುರುಗಳ ತ್ಯಾಗ - ಬಲಿದಾನಗಳನ್ನು ಗುಣಗಾನಮಾಡಿ ಅವರಿಗೆ ಗೌರವಾರ್ಪಣೆ ಮಾಡಿದರು.

"ಶ್ರೀ ಗುರು ಬಸವೇಶ್ವರರ ನೇತೃತ್ವದಲ್ಲಿ 12ನೇ ಶತಮಾನದಲ್ಲಿ ಲಿಂಗಾಯತ ಧರ್ಮ ರೂಪುಗೊಂಡಿದೆ. ವಚನ ಸಾಹಿತ್ಯ ಇದರ ಸಂವಿಧಾನವಾಗಿದೆ. ಇಂಥ ಸಾಹಿತ್ಯಕ್ಕೆ ಜಾತಿವಾದಿಗಳಿಂದ ವಿನಾಶದ ವಿಪತ್ತು ಎದುರಾದಾಗ ಅದರ ರಕ್ಷಣೆಗಾಗಿ ಹೋರಾಡಿದ ಅಸಂಖ್ಯಾತ ಶರಣರ ಬಲಿದಾನವಾಗಿದೆ.

"ಕಲ್ಯಾಣ ಕ್ರಾಂತಿ" ಈ ವಿಶ್ವದ ಐತಿಹಾಸಿಕ ಘಟನೆ. " ಎಂದು ನುಡಿದ ಪೂಜ್ಯ ಮಾತಾಜಿಯವರು "ವಚನಗಳ ರಕ್ಷಣೆಗಾಗಿಯೇ ಚಳಿ-ಮಳೆ-ಗಾಳಿ ಸಹಿಸಿಕೊಂಡು ಸಹ್ಯಾದ್ರಿ ಪರ್ವತದ ದುರ್ಗಮ ಅರಣ್ಯ ಪ್ರದೇಶದ ಗವಿಗಳಲ್ಲಿ ಶರಣರು ಉಳಿಯಬೇಕಾಯಿತು." ಎಂಬುದನ್ನು ಸಿಖ್ ಧರ್ಮೀಯ ನೇತಾರರಿಗೆ ವಿವರಿಸಿದರು.

ಈ ಸಂದರ್ಭದಲ್ಲಿ ಜಗದ್ಗುರು ಮಾತೆ ಗಂಗಾದೇವಿ, ಜಗದ್ಗುರು ಶ್ರೀ ಅಲ್ಲಮ ಪ್ರಭು ಸ್ವಾಮೀಜಿ, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ, ಪೂಜ್ಯ ಶ್ರೀ ಬಸವಕುಮಾರ ಸ್ವಾಮೀಜಿ, ರಾಷ್ಟ್ರೀಯ ಬಸವ ದಳದ ರಾಜ್ಯಾಧ್ಯಕ್ಷ ವೀರಣ್ಣ ಕೊರ್ಲ್ಹಳ್ಳಿ, ಬೀದರ್ ಜಿಲ್ಲೆ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಗಂಗಶೆಟ್ಟ ಪಾಟೀಲ್, ರಾಮಲಿಂಗಪ್ಪ ದೇವಣಿ, ಶಿವಶರಣಪ್ಪ ಪಾಟೀಲ್ ಹೈದರಾಬಾದ್‌ನ ವೈಜನಾಥಪ್ಪ ಹಿರೋಡೆ, ಯುವ ನ್ಯಾಯವಾದಿ ಕೆ.ಎಸ್.ಕೋರಿಶೆಟ್ಟರ್ ಸೇರಿದಂತೆ ಕರ್ನಾಟಕ, ಆಂಧ್ರ ಪ್ರದೇಶ, ತಮಿಳುನಾಡು, ಮಹಾರಾಷ್ಟ್ರಗಳಿಂದ ಆಗಮಿಸಿದ್ದ 300 ಕ್ಕೂ ಅಧಿಕ ಶರಣ-ಶರಣೆಯರು ಪೂಜ್ಯ ಮಾತಾಜಿಯವರ ಜೊತೆಗಿದ್ದರು.

- ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ

ಜಲಿಯನ್‌ವಾಲಾ ಬಾಗ್, ವಾಘಾ ಸಂದರ್ಶನ

ಅಮೃತ ಸರದಲ್ಲಿರುವ ಜಲಿಯನ್‌ವಾಲಾ ಬಾಗ್ ಐತಿಹಾಸಿಕ ಸ್ಥಳ, ಸ್ವಾತಂತ್ರ್ಯಕ್ಕಾಗಿ ಜನಜಾಗರಣ ಸಭೆ ನಡೆಯುವಾಗ ಬ್ರಿಟಿಷ್ ಅಧಿಕಾರಿಯೊಬ್ಬ ನಿರ್ದಯವಾಗಿ ಗೋಲಿಬಾರ್ ಮಾಡಿಸಿ ಜನರ ದಾರುಣ ಹತ್ಯೆಗೆ ಕಾರಣವಾದ ಸ್ಮಾರಕ ಸ್ಥಳವನ್ನು ಜನರು ಸಂದರ್ಶಿಸಿದರು. ಭಾರತ -ಪಾಕಿಸ್ತಾನದ ವಾಘಾಗಡಿ ಕೇವಲ 30 ಕಿಲೋ ಮೀಟರ್ ಇದ್ದು, ಸಂಜೆ 5 ಗಂಟೆಗೆ ಮಿಲಿಟರಿ ವಂದನೆಯೊಡನೆ ಗಡಿಯನ್ನು ಮುಚ್ಚುವ ಕಾರ್ಯಕ್ರಮವನ್ನು ನೋಡಿ, ದೆಹಲಿಗೆ ಹಿಂದಿರುಗಿದರು.



ಶ್ರೀ ಹರಮಂದಿರ್ ಸಾಹಿಬ್ (ಸ್ವರ್ಣ ಮಂದಿರ)
ಅಮೃತಸರ



ಗುರು ಗ್ರಂಥ (ಗ್ರಂಥ ಸಾಹಿಬ್) ಇಟ್ಟಿರುವ
ಸ್ವರ್ಣ ಮಂದಿರದ ಕೇಂದ್ರ ಸ್ಥಳ

CPMG/KA/BGW-50/2003-2005 WPP (W) - 17 R.No. 19980/70



